ಶಿವಮೊಗ್ಗ
ಸೋಮವಾರ, 6 ಏಪ್ರಿಲ್ 2026
ಸಂಪುಟ 16, ಸಂಚಿಕೆ 343, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ





## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಅನುರಾಧೆ

### ದಿನದ ಮಾತು

ಮನುಷ್ಯನಿಗೆ ಕಷ್ಟಗಳೂ ಬರಬೇಕು. ಯಶಸ್ಸನ್ನು ಆನಂದಿಸಲು ಅದು ಅವಶ್ಯ.
▲ ಅಬ್ದುಲ್ ಕಲಾಂ

### ಪವಾಡ ಪುರುಷನಾದ ಸಾಮಾನ್ಯ ಸೈನಿಕ

ನೇರ ನೋಟ
• ದು.ಗು.ಲಕ್ಷ್ಮಣ
• ಪುಟ ೬

## ಕಿರುಸುದ್ದಿ

### ಕೊಡಗಿನಲ್ಲಿ ಕಾಣೆಯಾಗಿದ್ದ ಕೇರಳ ಟೆಕ್ಕಿ ಶರಣ್ಯ ಪತ್ತೆ

• **ಬೆಂಗಳೂರು:** ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಸಾಫ್ಟ್‌ವೇರ್ ಉದ್ಯೋಗಿ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.
• ಪುಟ ೧೦

### ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು
• ಪುಟ ೭

### ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ
• ಪುಟ ೭

### ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ
• ಪುಟ ೭

### ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ
• ಪುಟ ೧೦

### ಗೂಂಡಾ ಸರ್ಕಾರ : ಆರ್. ಅಶೋಕ ಟೀಕೆ
• ಪುಟ ೧೦

### ಮಹದಾಯಿ ಮುಗಿಯದ ಕಥೆ: ದಶಕಗಳ ಹೋರಾಟಕ್ಕೆ ಸಿಕ್ಕಿಲ್ಲ ಮುಕ್ತಿ
• ಪುಟ ೯

### ಗೌರವ ಡಾಕ್ಟರೇಟ್ ನಿರಾಕರಿಸಿದ ಬೊಮ್ಮಾಯಿ
• ಪುಟ ೧೦

### ಕೈ ಸೋಲು ನಿಶ್ಚಿತ: ಬಿಎಸ್‌ವೈ
• ಪುಟ ೩

### ಕೇರಳದಲ್ಲಿ ಎನ್‌ಡಿಎಗೆ ಅವಕಾಶ ಕೊಡಿ: ಶಾ
• ಪುಟ ೭

### 650 ಕೋಟಿ ರೂ. ಅಕ್ರಮ ನಗದು, ಮಾದಕವಸ್ತು ವಶ
• ಪುಟ ೭

ಸಿ-130 ವಿಮಾನ ಹೊಡೆದ ಇರಾನ್ | ಸಂಘರ್ಷದ ತೀವ್ರತೆ ಹೆಚ್ಚಳ

# ಅಮೆರಿಕಕ್ಕೆ ಭಾರೀ ಹಿನ್ನಡೆ



• **ವಾಷಿಂಗ್ಟನ್/ಟೆಹ್ರಾನ್:** ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ದಿನೇದಿನೇ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿಸಿವೆ. ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಮತ್ತೊಂದು ಪ್ರಮುಖ ಹಿನ್ನಡೆಯನ್ನು ಅನುಭವಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಅತ್ಯಾಧುನಿಕ ಯುದ್ಧ ವಿಮಾನಗಳ ಬಳಕೆಯ ನಡುವೆಯೇ ಈ ಘಟನೆಗಳು ಸಂಭವಿಸಿರುವುದು ಗಮನಾರ್ಹವಾಗಿದೆ.

ಇತ್ತೀಚೆಗೆ ಪತನಗೊಂಡ ಅಮೆರಿಕದ ಎಫ್-15ಇ ಯುದ್ಧ ವಿಮಾನದ ಘಟನೆಗೆ ಸಂಬಂಧಿಸಿದಂತೆ, ಅದರ ಪೈಲಟ್ ರಕ್ಷಣೆಯ ಬಗ್ಗೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಹಿತಿ ನೀಡಿರುವುದು ಗಮನ ಸೆಳೆದಿದೆ. ಅವರ ಪ್ರಕಾರ, ಪತನಗೊಂಡ ವಿಮಾನದ ಪೈಲಟ್‌ಗಾಗಿ ಅಮೆರಿಕ ಸೇನೆ ವಿಶೇಷ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಕೊನೆಗೆ ಪೈಲಟ್‌ನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ 12ಕ್ಕೂ ಹೆಚ್ಚು ಯುದ್ಧ ವಿಮಾನಗಳನ್ನು ಬಳಸಲಾಗಿದೆ ಎಂದು ಹೇಳಲಾಗಿದೆ. ಪ್ರಸ್ತುತ ಪೈಲಟ್ ಸುರಕ್ಷಿತವಾಗಿದ್ದು, ತನ್ನ ಪಡೆಗಳೊಂದಿಗೆ ಇದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.




**ಮತ್ತೊಂದು ವಿಮಾನ ನಾಶ:** ಈ ನಡುವೆಯೇ, ಅಮೆರಿಕದ ಮತ್ತೊಂದು ವಿಮಾನವನ್ನು ಹೊಡೆದುರುಳಿಸಿದ್ದಾಗಿ ಇರಾನ್ ಘೋಷಿಸಿದೆ. ➡ಪುಟ ೯


### 36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್-15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್ ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಾಜಾಗಿ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು. • ವಿವರ ಪುಟ ೭

### ಹಾರ್ಮುಜ್ ತೆರೆಯಲು ವಿಳಂಬ ಮಾಡಿದರೆ ದಾಳಿ

ಈ ಬೆಳವಣಿಗೆಗಳ ನಡುವೆ, ಅಮೆರಿಕ ಮತ್ತು ಇರಾನ್ ನಡುವಿನ ರಾಜಕೀಯ ಮತ್ತು ಸೈನಿಕ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ವಿಶೇಷವಾಗಿ ಹಾರ್ಮುಜ್ ಜಲಸಂಧಿ ವಿಷಯವು ಮತ್ತೆ



ಚರ್ಚೆಗೆ ಬಂದಿದ್ದು, ಈ ಜಲಸಂಧಿಯನ್ನು ತೆರೆಯಲು ಇರಾನ್ ವಿಳಂಬ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿರುವ ಟ್ರಂಪ್, ಬೆದರಿಕೆಯಷ್ಟೇ ಅಲ್ಲ, ಅವರು ಬಳಸಿದ ಭಾಷೆಯೂ ಹೆಚ್ಚು ಗಮನ ಸೆಳೆದಿದೆ. ಏಕೆಂದರೆ ಅವರು ಇರಾನ್‌ಗೆ ಅವಮಾನಿಸುವ ಪದಗಳನ್ನು ಬಳಸುತ್ತಾ ಹಾರ್ಮುಜ್ ಜಲಸಂಧಿ ಮರು ತೆರೆಯುವಂತೆ ಒತ್ತಾಯಿಸಿದ್ದಾರೆ. ಇದೇ ವೇಳೆ ಇರಾನ್ ವಿರುದ್ಧ ಗಂಭೀರ ಕ್ರಮಗಳನ್ನು ಕೈಗೊಳ್ಳುವ ಸೂಚನೆ ನೀಡಿದ್ದಾರೆ. ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳು ಮೊದಲಾದ ಪ್ರಮುಖ ಮೂಲಸೌಕರ್ಯಗಳನ್ನು ನಾಶಪಡಿಸುವ ಬಗ್ಗೆ ಅವರು ಉಲ್ಲೇಖಿಸಿರುವುದು ಪರಿಸ್ಥಿತಿಯ ಗಂಭೀರತೆ ತೋರಿಸುತ್ತದೆ.

### ಇರಾನ್ ಹಿಂಜರಿಯದ ಧೋರಣೆ



ಇರಾನ್ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರಿಸದೆ, ಮಧ್ಯಪ್ರಾಚ್ಯದ ಕೆಲ ಅರಬ್ ದೇಶಗಳ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದೆ. ಇದರಿಂದ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುತ್ತಿದೆ. ಈ ನಡುವೆ, ಇರಾನ್ ಸೈನ್ಯವು ಅಮೆರಿಕದ ಎಚ್ಚರಿಕೆಗಳಿಗೆ ಪ್ರತಿಯಾಗಿ ತೀವ್ರ ಪ್ರತಿಕ್ರಿಯೆ ನೀಡಿದೆ. ನಮ್ಮ ಮೂಲಸೌಕರ್ಯ ಹಾನಿಗೊಳಿಸಿದರೆ ಪರಿಣಾಮಗಳು ಭೀಕರವಾಗಿರುತ್ತವೆ ಎಂದು ಇರಾನ್‌ನ ಉನ್ನತ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಮುಫೀಜ್ ಮಿಯಾನವರ ಸೆರೆ

# ಹುಬ್ಬಳ್ಳೀಲಿ ಮತ್ತೊಂದು ಲವ್ ಜಿಹಾದ್ ಪ್ರಕರಣ




• **ಹುಬ್ಬಳ್ಳಿ:** ಜಿಮ್‌ನಲ್ಲಿ ಲವ್ ಜಿಹಾದ್‌ಗೆ ಯತ್ನಿಸಿದ್ದಾರೆಂಬ ಆರೋಪದ ಮಾದರಿಯಲ್ಲೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ಮತ್ತೋರ್ವ ಮುಸ್ಲಿಂ ಯುವಕ ಹಿಂದು ಯುವತಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬೆದರಿಕೆ ಹಾಕಿದ ದೂರೊಂದು ಭಾನುವಾರ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕೇಶ್ವಾಪುರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಇಲ್ಲಿಯ ಕಮರಿಪೇಟ ನಿವಾಸಿ ಮುಫೀಜ್ ಮಿಯಾನವರ(23) ಬಂಧಿತ ಆರೋಪಿ. ಆರೋಪಿ ಮುಫೀಜ್ ಕಳೆದ ಐದು ವರ್ಷದ ಹಿಂದೆ ಕಾರ್ಯಕ್ರಮವೊಂದರಲ್ಲಿ ಯುವತಿಗೆ ಪರಿಚಯವಾಗಿದ್ದಾನೆ. ನಂತರ ಅವಳೊಂದಿಗೆ ಸಲುಗೆ ಬೆಳೆಸಿ ಅವಳೊಂದಿಗೆ ಸುತ್ತಾಡಿದ್ದಾನೆ. ಒಮ್ಮೆ ಅವಳನ್ನು ಗದಗ ರಸ್ತೆ ಮೇಲ್ಸೇತುವೆ ಹತ್ತಿರ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ ಹಲವು ಫೋಟೋ ಹಾಗೂ ವಿಡಿಯೋಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾನೆ. ಅವುಗಳನ್ನು ಇಟ್ಟುಕೊಂಡು ಬೆದರಿಕೆ ಹಾಕಿ 2025 ನವೆಂಬರ್‌ನಲ್ಲಿ ಮನೆಗೆ ಕರೆದು ಮತ್ತೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಈ ವಿಚಾರ ಯಾರ ಬಳಿಯಾದರೂ ಹೇಳಿದರೆ ನಿಮ್ಮ ಪಾಲಕರನ್ನು ಜೀವಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಯುವತಿ ತಿಳಿಸಿದ್ದಾಳೆ.

### ಹೈದರಾಬಾದ್‌ನಲ್ಲೂ ಲವ್ ಜಿಹಾದ್

• **ಹೈದರಾಬಾದ್:** ಪತಿ ನವಾಜ್ (ನವದುರ್ಗ ಎಂದು ತನ್ನನ್ನು ಪರಿಚಯಿಸಿಕೊಂಡಿದ್ದ) ತಾನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದೇನೆ ಎಂದು ನಂಬಿಸಿ, ನಂತರ ಮದುವೆಯಾದ ಬಳಿಕ ಬಲವಂತವಾಗಿ ಇಸ್ಲಾಂಗೆ ಮತಾಂತರ ಮಾಡಿದ್ದಾನೆ ಎಂದು ತನ್ನ ಪತಿ ಹಾಗೂ ಅವರ ಕುಟುಂಬದವರ ವಿರುದ್ಧ ಮಹಿಳೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಮಹಿಳೆಯ ಹೇಳಿಕೆಯ ಪ್ರಕಾರ, 2021ರ ಮೇನಲ್ಲಿ ಅಂಗಡಿ ಬಾಡಿಗೆ ವಿಚಾರವಾಗಿ ನವಾಜ್ ಅವರನ್ನು ಭೇಟಿಯಾದಳು. ಆತ ತನ್ನ ಹೆಸರನ್ನು ನವದುರ್ಗ ಎಂದು ಹೇಳಿ ನಂಬಿಕೆ ಗಳಿಸಿದ್ದ. ನಂತರ ಮದುವೆಯ ಹೆಸರಿನಲ್ಲಿ ಆಕೆಯನ್ನು ಮೋಸಗೊಳಿಸಿದ್ದಾನೆ. ಮೇ 24ರಂದು ಕುಟುಂಬವನ್ನು ಪರಿಚಯಿಸುವ ನೆಪದಲ್ಲಿ ರೆಸಾರ್ಟ್‌ಗೆ ಕರೆದೊಯ್ದು, ಆಹಾರ ಅಥವಾ ಪಾನೀಯದಲ್ಲಿ ಮದ್ದು ಬೆರೆಸಿ ಪ್ರಜ್ಞಾಹೀನಳಾದ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ. ➡ಪುಟ ೯

### ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

• **ಭೋಪಾಲ್:** ಮಧ್ಯ ಪ್ರದೇಶದ ಗ್ವಾಲಿಯರ್ ನಗರದಲ್ಲಿ ಪ್ರೇಮ ಸಂಬಂಧದ ಹೆಸರಿನಲ್ಲಿ ಮೋಸದ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿಯು ತನ್ನ ನಿಜವಾದ ಗುರುತನ್ನು ಮರೆಮಾಚಿ ಯುವತಿಯನ್ನು ಪ್ರೀತಿಯ ಜಾಲಕ್ಕೆ ಸೆಳೆದಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ➡ಪುಟ ೯

ಟಿಎಂಸಿ ಸರ್ಕಾರದ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

# ಪ.ಬಂಗಾಳದಲ್ಲಿ ಜಂಗಲ್‌ರಾಜ್

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಮೇರೆ ಮೀರಿದೆಯೆಂಬ ಬಿಜೆಪಿ ಆರೋಪವು, ಮಾಲ್ಡಾದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಘೇರಾವ್ ಮಾಡಿ ಒತ್ತೆಸೆರೆಯಲ್ಲಿಟ್ಟ ಘಟನೆಯಿಂದ ಸ್ಪಷ್ಟ ಸಾಬೀತಾಗಿದೆ. ಟಿಎಂಸಿ ಸರಕಾರ ರಾಜ್ಯದಲ್ಲಿ ಮಹಾ ಜಂಗಲ್‌ರಾಜ್ ನಡೆಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಟಿಎಂಸಿ ಸರಕಾರವನ್ನು ತೀಕ್ಷ್ಣವಾಗಿ ತರಾಟೆಗೆತ್ತಿಕೊಂಡಿದ್ದಾರೆ.




2026ರ ವಿಧಾನಸಭಾ ಚುನಾವಣೆ ಆಳುವ ಟಿಎಂಸಿ ಹರಡಿರುವ ಭಯ ಮತ್ತು ಬಿಜೆಪಿಯ ಭರೋಸಾ (ಭರವಸೆ) ನಡುವಣ ಹಣಾಹಣಿಯಾಗಿದೆ ಎಂದು ವಿಶ್ಲೇಷಿಸಿದರು.

**ಎಂತಹ ಸರಕಾರವಿದು?:** ಮಾಲ್ಡಾದಲ್ಲಿ ಕೆಲ ದಿನಗಳ ಹಿಂದೆ ನ್ಯಾಯಾಂಗ ಅಧಿಕಾರಿಗಳನ್ನು ಒತ್ತೆಯಲ್ಲಿಟ್ಟ ಅಮಾನವೀಯ ಘಟನೆಗೆ ಇಡೀ ದೇಶ ಸಾಕ್ಷಿಯಾಗಿದೆ. ನ್ಯಾಯಾಧೀಶರುಗಳು, ಸಾಂವಿಧಾನಿಕ ನಿಯಮಾವಳಿಗೇ ಸುರಕ್ಷೆ ನೀಡಲಾಗದ ಎಂತಹ ಸರಕಾರವಿದು? ➡ಪುಟ ೯



### ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಮತದಾನ ದಿನ ಟಿಎಂಸಿ ಗೂಂಡಾಗಳು ಎಷ್ಟೇ ಸಂಖ್ಯೆಯಲ್ಲಿ ನಿಮ್ಮನ್ನು ಭಯಪಡಿಸಲು ಯತ್ನಿಸಿದರೂ ಹೆದರದಿರಿ, ನೀವು ಕಾನೂನಲ್ಲಿ ವಿಶ್ವಾಸವಿಡಿ. ತನಗೆ ಚುನಾವಣಾ ಆಯೋಗದಲ್ಲಿ ಪೂರ್ಣ ಭರವಸೆಯಿದೆ. ಹಾಗಾಗಿ ಮುಕ್ತ, ನ್ಯಾಯೋಚಿತ ಮತ್ತು ಭಯಮುಕ್ತವಾಗಿ ಮತದಾನ ನಡೆಯುವುದೆಂಬ ವಿಶ್ವಾಸವಿದೆ. ➡ಪುಟ ೯

ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಮಹದೇವಪ್ಪ

# ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ

• **ಬೆಂಗಳೂರು:** ಡಾ. ಬಾಬು ಜಗಜೀವನರಾಂ ಅವರು 1946ರಲ್ಲಿ ಸಚಿವರಾಗಿ 1980ರವರೆಗೆ ಉಪಪ್ರಧಾನಿ ಆಗುವವರೆಗೆ ದೇಶದ ಎಲ್ಲಾ ಪ್ರಮುಖ ಇಲಾಖೆಯ ಹುದ್ದೆಗಳನ್ನು ಅಲಂಕರಿಸಿದ ಅವರು ಜನಪರ ನಿಲುವು, ತುಳಿತಕ್ಕೆ ಒಳಗಾದ ಜನರ ಮೇಲೆತ್ತುವ ಕಾಳಜಿಯುಳ್ಳವರಾಗಿದ್ದರು. ಅವರು ಭಾರತ ಇತಿಹಾಸದಲ್ಲಿ ಸುದೀರ್ಘ ಅವಧಿವರೆಗೆ ಸಚಿವರಾಗಿ ಕೆಲಸ ಮಾಡಿದರು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸ್ಮರಿಸಿದರು.

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಭಾನುವಾರ ನಡೆದ ಡಾ. ಬಾಬು ಜಗಜೀವನರಾಂ ಅವರ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನಿಕ ಹುದ್ದೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುವಂತ ಶಕ್ತಿ ಸಾಮರ್ಥ್ಯ ಡಾ. ಬಾಬು ಜಗಜೀವನರಾಮ್ ಅವರಲ್ಲಿತ್ತು. ಅದಕ್ಕೆ ಅವರು ಕೈಗೊಂಡ ಅನೇಕ ತೀರ್ಮಾನಗಳಿಂದ ದೇಶದಲ್ಲಿ ಬದಲಾವಣೆ, ಸುಧಾರಣೆ ದಾಖಲಿಸಿದ್ದಾರೆ ಎಂದರು. ➡ಪುಟ ೯



### ಪ್ರತಿಮೆಗೆ ಮಾಲಾರ್ಪಣೆ

ಚುನಾವಣೆ ಪ್ರಚಾರದಿಂದ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಆವರಣದಲ್ಲಿರುವ ಡಾ. ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮಿಸಿದರು.

# ಕೇಂದ್ರದ ಜತೆ ಸಹಕಾರವಿರಲಿ

• **ಬಾಗಲಕೋಟೆ:** ರಾಜ್ಯದ ನೀರಾವರಿ ಯೋಜನೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರದ ಜತೆಗೆ ಸಹಕಾರದ ಭಾವನೆ ಹೊಂದಬೇಕು. ನಿತ್ಯ



ಸಂಘರ್ಷಕ್ಕೆ ಇಳಿದು ಮಾತನಾಡಿದರೆ ಯಾವ ಕೆಲಸವೂ ಆಗುವುದಿಲ್ಲ, ಪಕ್ಕದ ಆಂಧ್ರಪ್ರದೇಶದ ಸರ್ಕಾರವನ್ನು ನೋಡಿ ರಾಜ್ಯ ಸರ್ಕಾರ ಕಲಿಯಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನೀರಾವರಿ ಮಂತ್ರಿ, ಪ್ರಧಾನಿ ಮೋದಿಯವರನ್ನು ಭೇಟಿಯಾಗಿ ರಾಜ್ಯದ ಮುಖ್ಯಮಂತ್ರಿಗಳು, ಸಂಬಂಧಿಸಿದ ಮಂತ್ರಿಗಳು ಮಾತನಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೇವಲ ಸುಳ್ಳು ಹೇಳುವುದನ್ನು ಬಿಡಬೇಕು ಎಂದರು. ➡ಪುಟ ೯

### ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

• **ತಿರುವನಂತಪುರ:** ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ಲೋಕಸಭೆ ಕ್ಷೇತ್ರಗಳನ್ನು ಕಳೆದುಕೊಳ್ಳುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿಯವರು ಭರವಸೆ ನೀಡಿದ್ದಾರೆ.



ಇಲ್ಲಿ ಶನಿವಾರ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಜನಸಂಖ್ಯೆ ನಿಯಂತ್ರಣದಲ್ಲಿ ಸಾಧನೆ ಮಾಡಿದ ರಾಜ್ಯಗಳ ಲೋಕಸಭಾ ಕ್ಷೇತ್ರಗಳನ್ನು ಕಡಿತಗೊಳಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ➡ಪುಟ ೯

# ಪಶ್ಚಿಮ ಬಂಗಾಳದಲ್ಲಿ ಜಂಗಲ್‌ರಾಜ್

ಪುಟ ೧→ ಇಂತಹ ಸರಕಾರ ರಾಜ್ಯದ ಜನರನ್ನು ಸುರಕ್ಷಿತ ಕಾಪಾಡುವುದೆಂಬ ಭರವಸೆಯೇ ಇಲ್ಲ ಎಂದು ಉತ್ತರ ಬಂಗಾಳದ ಕೂಚ್‌ಬಿಹಾರ್‌ನಲ್ಲಿ ತಮ್ಮ ಪ್ರಥಮ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಆರೋಪಿಸಿದರು. ಪ.ಬಂಗಾಳದಲ್ಲಿ ಕಾನೂನು ವ್ಯವಸ್ಥೆ ತೀರಾ ದುರ್ಬಲವಾಗಿದೆ, ಅಕ್ರಮ ನುಸುಳುಕೋರರ ಹಾವಳಿಯಿಂದಾಗಿ ರಾಜ್ಯದ ಜನಸಂಖ್ಯಾ ಸ್ವರೂಪದಲ್ಲಿ ವ್ಯತ್ಯಯವಾಗಿದೆ. ಮಾತೆಯರಿಗೆ ಸುರಕ್ಷೆ ಇಲ್ಲ ಎಂದು ಟಿಎಂಸಿ ಸರಕಾರವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

**ಟಿಎಂಸಿಯಿಂದ ಕಾನೂನು ವ್ಯವಸ್ಥೆ ನಾಶ:** ಟಿಎಂಸಿಯ ಮಹಾ ಜಂಗಲ್‌ರಾಜ್‌ಗೆ ಮಾಲ್ಡಾ ದುರ್ಘಟನೆ ಒಂದು ನಿದರ್ಶನ. ಆಳುವ ಟಿಎಂಸಿ ಕಾನೂನು ಸುವ್ಯವಸ್ಥೆಗಳ ಅಂತಿಮಯಾತ್ರೆ ನಡೆಸುತ್ತಿದೆ ಎಂದು ಆಪಾದಿಸಿದ ಪ್ರಧಾನಿ ಮೋದಿ, ಪ.ಬಂಗಾಳದ ಮತದಾರರಿಗೆ ಒಂದೆಡೆ ಟಿಎಂಸಿ ತಾಂಡವಿಸಿರುವ ಭಯವಿದೆ. ಇನ್ನೊಂದೆಡೆ ಬಿಜೆಪಿಯಲ್ಲಿ ಭರವಸೆ ಇದೆ. ಒಂದೆಡೆ ಟಿಎಂಸಿಯ ಭ್ರಷ್ಟಾಚಾರ, ಹಣ ಕಡಿತಗಳ ಹೆದರಿಕೆಯಾದರೆ, ಇನ್ನೊಂದೆಡೆ ಅಭಿವೃದ್ಧಿ ಚಟುವಟಿಕೆಗಳ ವಿಸ್ತರಿಸಬಲ್ಲ ಬಿಜೆಪಿಯಲ್ಲಿ ಆತ್ಮವಿಶ್ವಾಸವಿದೆ. ಅಕ್ರಮ ನುಸುಳುಕೋರರ ಹಾವಳಿ, ಬಂಗಾಳದಲ್ಲಿ ವಿದೇಶಿಯರ ಅಕ್ರಮ ನೆಲೆಸುವಿಕೆಯ ಭೀತಿ ಕೂಡ ಜನರನ್ನು ಕಾಡಿದೆ. ಅಕ್ರಮ ನುಸುಳುಕೋರರ ಹಾವಳಿಗೆ ಬಿಜೆಪಿ ಸಂಪೂರ್ಣ ಕಡಿವಾಣ ಹಾಕಲಿದೆ ಮತ್ತು ನುಸುಳುಕೋರರನ್ನು ಹುಡುಕಿ ಹುಡುಕಿ ಹೊರದಬ್ಬಲಿದೆ ಎಂದು ಭರವಸೆ ನೀಡಿದರು.


**ಸ್ವಂತ ಭೂಮಿಯಲ್ಲಿ ಹೆಮ್ಮೆಯಿಂದ ಬದುಕಿ:** ಒಂದೆಡೆ ಬದಲಾಗುತ್ತಿರುವ ಜನಸಂಖ್ಯಾ ಸ್ವರೂಪದಿಂದಾಗಿ ತಮ್ಮ ಸ್ವಂತ ಭೂಮಿ ಕೈತಪ್ಪಿ ಹೋಗುವುದೋ ಎಂಬ ಭೀತಿ ಜನರನ್ನು ಬಹುವಾಗಿ ಕಾಡಿದೆ. ಇನ್ನೊಂದೆಡೆ ತಮ್ಮ ಸ್ವಂತ ಭೂಮಿಯಲ್ಲೇ ತುಂಬು ಹೆಮ್ಮೆಯಿಂದ ತಲೆಎತ್ತಿ ಜೀವಿಸಲು ಅವಕಾಶ ಕೊಡುತ್ತೇವೆಂದು ಬಿಜೆಪಿ ಭರವಸೆ ನೀಡುತ್ತದೆ. ಅಕ್ರಮ ನುಸುಳುಕೋರರನ್ನು ರಕ್ಷಿಸುವಷ್ಟು ಟಿಎಂಸಿ ಎಸ್‌ಐಆರ್‌ನ್ನು ವಿರೋಧಿಸುತ್ತಿದೆ. ಹಿಂದು ನಿರಾಶ್ರಿತರು ಪೌರತ್ವ ಪಡೆಯುವುದು ಟಿಎಂಸಿಗೆ ಸಹ್ಯವಲ್ಲದ ವಿಚಾರ. ಹಾಗಾಗಿಯೇ ಟಿಎಂಸಿ ಸಿಎಎಯನ್ನು ವಿರೋಧಿಸುತ್ತಿದೆ ಎಂದು ಪ್ರಧಾನಿ ಮೋದಿ ಆರೋಪಿಸಿದರು.

**ಬಂಗಾಳದ ಅಸ್ಮಿತೆ ಬದಲಿಸಲು ಯತ್ನಿಸುವವರ ಪದಚ್ಯುತಿ:** ಟಿಎಂಸಿ ಆಳ್ವಿಕೆಯಲ್ಲಿ ಬಂಗಾಳದ ಗಡಿ ಪ್ರದೇಶಗಳಲ್ಲಿ ಜನಸಂಖ್ಯಾ ಸ್ವರೂಪದಲ್ಲಿ ಅಪಾಯಕಾರಿ ಬದಲಾವಣೆಯಾಗಿದೆ. ಅಕ್ರಮ ನುಸುಳುಕೋರರಿಗೆ ಟಿಎಂಸಿ ಸಿಂಡಿಕೇಟ್‌ನಿಂದ ನೇರ ರಕ್ಷಣೆ ಸಿಗುತ್ತಿದ್ದು, ತನ್ಮೂಲಕ ನುಸುಳುಕೋರರು ರಾಜ್ಯದ ಜನರ ಬದುಕನ್ನು ಗಂಡಾಂತರಕ್ಕೊಡ್ಡಿದ್ದಾರೆ. ತುಷ್ಟೀಕರಣ ರಾಜನೀತಿಯ ಈ ಆಟದಲ್ಲಿ ಮಹಾನ್ ಬಂಗಾಳದ ಅಸ್ಮಿತೆಯೇ ಬದಲಾಗಿದೆ ಎಂದು ಆರೋಪಿಸಿದ ಪ್ರಧಾನಿ ಮೋದಿ, ಬಂಗಾಳದ ಅಸ್ಮಿತೆ ಬದಲಿಸಲು ಪ್ರಯತ್ನಿಸುವವರನ್ನು ಈ ಬಾರಿ ಪದಚ್ಯುತಗೊಳಿಸಲಾಗುವುದು ಎಂದು ಗುಡುಗಿದರು. ಒಂದೆಡೆ, ಸಂದೇಶ್‌ಖಾಲಿಯಂತೆ ಕ್ರೂರ ದೌರ್ಜನ್ಯಗಳಿಗೀಡಾದ ಸೋದರಿಯರು, ಮಾತೆಯರ ಆಕ್ರಂದನವಾದರೆ, ಮಾತೆಯರಿಗೆ ಭದ್ರತೆ, ಘನತೆಯನ್ನು ಕಲ್ಪಿಸಿ, ಸಬಲೀಕರಣಕ್ಕೆ ಪ್ರಾಧಾನ್ಯತೆ ನೀಡಲಾಗುವುದು ಎಂಬುದು ಮೋದಿ ಗ್ಯಾರಂಟಿಯಾಗಿದೆ. ಬಂಗಾಳದಲ್ಲಿ ಬಿಜೆಪಿ ಸರಕಾರ ಮಾತೆಯರ ನೈಜ ಸಬಲೀಕರಣಕ್ಕೆ ಮುಂದಾಗಲಿದೆ ಎಂದು ಭರವಸೆ ನೀಡಿದರು.

### ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಪುಟ ೧→ ಮೇ 4ರ ನಂತರ ಕಾನೂನು ವ್ಯವಸ್ಥೆ ಬಿಗಿಯಾಗುವುದು. ಟಿಎಂಸಿ ಆಳ್ವಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರ, ಹಿಂಸಾಚಾರಗಳ ಪ್ರತಿ ಕೃತ್ಯವನ್ನೂ ತನಿಖೆಗೆ ಗುರಿಪಡಿಸಲಾಗುವುದು ಎಂದು ಪ್ರಧಾನಿ ಮೋದಿ ಜನರಲ್ಲಿ ಧೈರ್ಯ ತುಂಬಿದರು. ತಪ್ಪು ಮಾಡಿದ ಪ್ರತಿಯೊಬ್ಬರನ್ನೂ ಚುನಾವಣೆ ನಂತರ ವಿಚಾರಣೆಗೆ ಗುರಿಪಡಿಸಲಾಗುವುದು. ಚುನ್ ಚುನ್ ಕೆ ಹಿಸಾಬ್ ಹೋಗ( ಹುಡುಕಿ ಹುಡುಕಿ ಲೆಕ್ಕಾಚಾರ ತೀರಿಸುತ್ತೇವೆ). ಕ್ರಿಮಿನಲ್ ಅದೆಷ್ಟೇ ಶಕ್ತಿಶಾಲಿಯಾಗಿರಲಿ, ಈ ಬಾರಿ ನ್ಯಾಯ ತೀರ್ಮಾನ ಮಾತ್ರ ಖಚಿತ ಎಂದು ಪ್ರಧಾನಿ ಭರವಸೆ ನೀಡಿದರು.

### ರಾಮ ಬಾಣ




### ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಆಹಾರ ಇಲಾಖೆಗೆ ಹೆಚ್ಚು ಹಣ ಕೊಟ್ಟರೆ ಸ್ಕೂಲುಗಳು ಸಾಯ್ತಾ ಇವೆ ಅಂತ ಹೇಳ್ತಾರೆ , ಸ್ಕೂಲಿಗೆ ಹೆಚ್ಚು ಕೊಟ್ಟರೆ ಆಸ್ಪತ್ರೆಗಳು ಸರಿಯಿಲ್ಲ ಅಂತ ಅಂತಾರೆ, ರಾಮಮಂದಿರ ಏನಾಯ್ತು ಎಂದು ಕೇಳಿದವರು ಮಂದಿರ ಆದ ಮೇಲೆ ಅದರ ಬದಲು ಆಸ್ಪತ್ರೆಗಳನ್ನು ಕಟ್ಟಿಸಬಹುದಿತ್ತು ಅಂತ ಹೇಳುತ್ತಾರೆ , ಎಲ್ಲರನ್ನೂ ಮೆಚ್ಚಿಸುವ ಬಜೆಟ್ ಸಾಧ್ಯವಿಲ್ಲ,
- ಲೇಖಿಸ ವಾಕ್ಯ
- ಭೂಮಿಗೆ ಅವತಾರವೆತ್ತಿ ಬಂದ ಶ್ರೀರಾಮ, ಶ್ರೀ ಕೃಷ್ಣರಿಗೂ ಲೋಕದ ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಾಗಲಿಲ್ಲ!

### ದಿನ ಭವಿಷ್ಯ

**ಮೇಷ** ವೈಯಕ್ತಿಕವಾಗಿ ಅನಿರೀಕ್ಷಿತ ಬೆಳವಣಿಗೆ ಸಂಭವ. ಅದಕ್ಕೆ ಹೊಂದಿಕೊಳ್ಳಿ. ಮನೆಯಲ್ಲಿ ಸಂಘರ್ಷದ ಸನ್ನಿವೇಶ. ಸಹನೆಯಿಂದ ವರ್ತಿಸಿ.

**ವೃಷಭ** ಭಾವನಾತ್ಮಕ ಪರಿಸ್ಥಿತಿ ಏರ್ಪಡಬಹುದು. ಸಂಗಾತಿ ಜತೆ ವೈಮನಸ್ಸು, ಹೊಂದಾಣಿಕೆ ಸಾಧಿಸಿ. ಧನಹಾನಿ ಉಂಟಾದೀತು. ಆರೋಗ್ಯದ ಬಗ್ಗೆ ಚಿಂತೆ.

**ಮಿಥುನ** ದಿನವಿಡೀ ಏನಾದರೊಂದು ಒತ್ತಡ. ಬಂಧು ಜತೆ ವೈಮನಸ್ಸು ಉಂಟಾದೀತು. ಸಮಸ್ಯೆ ತರುವ ವಿಷಯ ಬೇಗ ಇತ್ಯರ್ಥಪಡಿಸಿ.

**ಕಟಕ** ಪ್ರಗತಿಯ ದಿನ. ಬಯಸಿದ ಫಲ ಸಿಗಲಿದೆ. ಇತರರ ಗಮನ ಸೆಳೆಯುವ ಸಾಧನೆ ತೋರುವಿರಿ. ಆರೋಗ್ಯದ ಬಗ್ಗೆ ಕಾಳಜಿಯಿರಲಿ.

**ಸಿಂಹ** ಕಾರ್ಯದಲ್ಲಿ ಇಂದು ಹಿನ್ನಡೆ ಕಾಣುವಿರಿ. ಅಪೂರ್ಣ ಕೆಲಸ, ಅಸಹಕಾರ ಎದುರಿಸುವಿರಿ. ಮುಖ್ಯ ವಿಷಯದಲ್ಲಿ ಸಂವಹನದ ಕೊರತೆ.

**ಕನ್ಯಾ** ಇಂದು ಕಠಿಣ ನಿರ್ಧಾರ ತಾಳಬೇಕಾದ ಪ್ರಸಂಗ ಒದಗೀತು. ಯಾರಿಗೋ ನೋವು ಆದೀತೆಂದು ಮೃದು ನಿಲುವು ತಳೆಯದಿರಿ.

**ತುಲಾ** ಬಯಸಿದ ಕಾರ್ಯ ಪೂರ್ಣ. ಹಣ ಗಳಿಕೆಯ ಹಾದಿ ಸುಗಮ. ತುಸು ಆರೋಗ್ಯದ ಸಮಸ್ಯೆ ಕಾಡಬಹುದು. ಬಂಧು ಜತೆ ವಿರಸ ಕಟ್ಟಿಕೊಳ್ಳದಿರಿ.

**ವೃಶ್ಚಿಕ** ಪ್ರತಿಯೊಂದು ವ್ಯವಹಾರದಲ್ಲೂ ಇಂದು ಸಹನೆ ಕಾಯ್ದುಕೊಳ್ಳಿ. ಮಹತ್ವದ ನಿರ್ಧಾರ ತಾಳಬೇಡಿ. ಒತ್ತಡದಿಂದ ತಲೆನೋವು ಬಾಧಿಸೀತು.

**ಧನು** ಸಹನೆ ಕೆಡಿಸುವ ಪ್ರಸಂಗ ಎದುರಿಸುವಿರಿ. ಪೂರ್ತಿಯಾಗದ ಕೆಲಸ, ಇನ್ನಿತರ ಬೆಳವಣಿಗೆ ಇದಕ್ಕೆ ಕಾರಣ. ಮನಸ್ಸು ಇತರೆಡೆ ಹರಿಯದಿರಲಿ.

**ಮಕರ** ವೃತ್ತಿಯಲ್ಲಿ ಪ್ರಗತಿ. ಉತ್ಸಾಹ ಹೆಚ್ಚಿಸುವ ಸನ್ನಿವೇಶ. ನಿಮ್ಮ ಚಿಂತನೆಗೆ ಇತರರ ಮನ್ನಣೆ. ಆರ್ಥಿಕ ಗುರಿ ಸಾಧಿಸುವಿರಿ. ದೈಹಿಕ ಶ್ರಮದಿಂದ ಬಳಲಿಕೆ.

**ಕುಂಭ** ಗ್ರಹಗತಿ ಇಂದು ನಿಮಗೆ ಪೂರಕ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಪ್ರಗತಿ. ಪ್ರೀತಿಯಲ್ಲಿ ಸಮಾಧಾನಕರ ಬೆಳವಣಿಗೆ. ಧನಪ್ರಾಪ್ತಿ.

**ಮೀನ** ನಿಮ್ಮ ಆಕಾಂಕ್ಷೆ ಈಡೇರುವ ದಿನ. ಆಪ್ತರ ಜತೆ ಆತ್ಮೀಯ ಸಂಬಂಧ ಕಾಯ್ದುಕೊಳ್ಳಿ. ಏಕಾಂಗಿಗಳಿಗೆ ಸಂಗಾತಿ ಸಿಗುವರು. ಧನಲಾಭ.

**ರಾಹುಕಾಲ: 7.30-9.00**
**ಗುಳಿಕಕಾಲ: 1.30-3.00**

ಅದೃಷ್ಟ ಸಂಖ್ಯೆ 7,3,5,8

ಪ್ರಸ್ತಾವಿತ ಕ್ಷೇತ್ರ ವಿಂಗಡಣೆಗೆ ಜಾಲತಾಣದಲ್ಲಿ ಸಿದ್ದರಾಮಯ್ಯ ತಿರುಗೇಟು

# ರಾಜಕೀಯ ಲೆಕ್ಕಾಚಾರ

• **ಬೆಂಗಳೂರು:** ಪ್ರಸ್ತಾವಿತ ಕ್ಷೇತ್ರ ವಿಂಗಡಣೆ ಪ್ರಕ್ರಿಯೆಯ ಬಗ್ಗೆ ಅಂತಿಮವಾಗಿ ಪ್ರಧಾನಿ ಮೋದಿ ಮಾತಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಈ ಹಠಾತ್ ಕಾಳಜಿಯು ರಾಜತಾಂತ್ರಿಕತೆಯಂತೆ ಕಾಣುತ್ತಿಲ್ಲ, ಬದಲಾಗಿ ಚುನಾವಣಾ ಲೆಕ್ಕಾಚಾರದಂತೆ ಗೋಚರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸುತ್ತಿರುವ ದಕ್ಷಿಣದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳನ್ನು ಕಡಿಮೆ ಮಾಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಿರುವನಂತಪುರದಲ್ಲಿ ಹೇಳಿದ್ದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಬರೆದು ತಿರುಗೇಟು ನೀಡಿದ್ದಾರೆ.

ಕೇರಳ ಮತ್ತು ತಮಿಳುನಾಡಿನಂತಹ ರಾಜ್ಯಗಳಲ್ಲಿನ ರಾಜಕೀಯ ಲೆಕ್ಕಾಚಾರಗಳೊಂದಿಗೆ ಈ ಹೇಳಿಕೆ ನೀಡಿದಂತಿದೆ. ವಾಸ್ತವದಲ್ಲಿ, ದಕ್ಷಿಣ ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆ ಹೆಚ್ಚಾಗುತ್ತದೆಯೋ ಎಂಬುದು ವಿಷಯ ಆಗಿರಲಿಲ್ಲ, ಆದರೆ, ಅವು ಹೇಗೆ ಹೆಚ್ಚಾಗುತ್ತವೆ ಮತ್ತು ಯಾವ ರಾಜ್ಯಗಳು ಹೆಚ್ಚು ಪ್ರಯೋಜನ ಪಡೆಯುತ್ತವೆ ಎಂಬುದೇ ವಿಷಯವಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಸ್ತಾವಿತ ವಿಸ್ತರಣೆಯ ಅಡಿಯಲ್ಲಿ, ಪ್ರತಿ ರಾಜ್ಯವು ಹೆಚ್ಚಳವನ್ನು ಕಾಣಬಹುದು. ಆದರೆ, ಹೆಚ್ಚಳದ ದರ ಮತ್ತು ಪ್ರಮಾಣವು ಬಿಜೆಪಿ ಪ್ರಾಬಲ್ಯದ ರಾಜ್ಯಗಳಿಗೆ ಸ್ಪಷ್ಟವಾಗಿ ಅನುಕೂಲಕರವಾಗಿದೆ. ಉತ್ತರ ಪ್ರದೇಶವು 80ರಿಂದ 120 ಸ್ಥಾನಗಳಿಗೆ (40 ಹೆಚ್ಚುವರಿ), ಮಹಾರಾಷ್ಟ್ರವು 48ರಿಂದ 72 (24 ಹೆಚ್ಚುವರಿ), ಬಿಹಾರವು 40ರಿಂದ 60 (20 ಹೆಚ್ಚುವರಿ), ಮಧ್ಯಪ್ರದೇಶವು 29ರಿಂದ 4344 (1415 ಹೆಚ್ಚುವರಿ), ರಾಜಸ್ಥಾನವು 25ರಿಂದ 3738 (1213 ಹೆಚ್ಚುವರಿ) ಮತ್ತು ಗುಜರಾತ್ 26ರಿಂದ 39 (13 ಹೆಚ್ಚುವರಿ) ಕ್ಕೇರುವ ನಿರೀಕ್ಷೆಯಿದೆ ಎಂದು ವಿವರಿಸಿದ್ದಾರೆ.

ಲೋಕಸಭೆಯನ್ನು 816 ಸ್ಥಾನಗಳಿಗೆ ವಿಸ್ತರಿಸಿದ ನಂತರವೂ ದಕ್ಷಿಣದ ರಾಜ್ಯಗಳ ಸಾಮೂಹಿಕ ಪಾಲು ಸುಮಾರು ಶೇ.24ರಷ್ಟಿರಲಿದೆ. ಜನಸಂಖ್ಯಾ ನಿಯಂತ್ರಣ ಮತ್ತು ಆಡಳಿತದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯಗಳನ್ನು ದಂಡಿಸಲಾಗುತ್ತಿದೆ. ರಾಷ್ಟ್ರೀಯ ಬೆಳವಣಿಗೆಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಕರ್ನಾಟಕವನ್ನು ಉದ್ದೇಶಪೂರ್ವಕವಾಗಿ ಬದಿಗಿಡುವ ಅಪಾಯ ಗಳಿವೆ. ದೊಡ್ಡ ರಾಜ್ಯಗಳ ಸಂಖ್ಯಾತ್ಮಕ ಪ್ರಾಬಲ್ಯ ಹೆಚ್ಚುತ್ತಿರುವಾಗ ನಮ್ಮ ಪಾಲು ವೃದ್ಧಿಸದೇ ಇದ್ದರೆ, ಈ ಪುನರ್‌ವಿಂಗಡಣೆಯಿಂದ ಕರ್ನಾಟಕಕ್ಕೆ ನಿಖರವಾಗಿ ಏನು ಸಿಗಲಿದೆ? ಎಂದು ಪ್ರಶ್ನೆ ಮಾಡಿದ್ದಾರೆ.

ದಕ್ಷಿಣದ ಜನರ ವಿಶ್ವಾಸವನ್ನು ಗಳಿಸುವಲ್ಲಿ ವಿಫಲವಾದ ಮೋದಿ ಸರ್ಕಾರವು ಈಗ ಕ್ಷೇತ್ರ ಪುನರ್ ರಚನೆಯ ಮೂಲಕ ನಮ್ಮ ಧ್ವನಿ ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ಆರ್ಥಿಕ ಮತ್ತು ಜಾಗತಿಕ ಸವಾಲುಗಳ ಸಮಯದಲ್ಲಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಆದ್ಯತೆಗಳಿಗಿಂತ ರಾಜಕೀಯ ಲೆಕ್ಕಾಚಾರದ ಮೇಲೆ ಹೆಚ್ಚು ಗಮನಹರಿಸುತ್ತಿದೆ. ಕರ್ನಾಟಕದ ಜನರು ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಡುವ ಎಲ್ಲರೂ - ನ್ಯಾಯ, ಗೌರವ ಮತ್ತು ಪಾರದರ್ಶಕತೆಗೆ ಅರ್ಹರು. ನಮ್ಮ ಧ್ವನಿಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ನಾವು ದೃಢವಾಗಿ ವಿರೋಧಿಸುತ್ತೇವೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

### ದಕ್ಷಿಣದ ರಾಜ್ಯಗಳಿಗೆ ದೊಡ್ಡ ಲಾಭವಿಲ್ಲ

ದಕ್ಷಿಣದ ರಾಜ್ಯಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಪ್ರಯೋಜನವಾಗುತ್ತಿಲ್ಲ, ಕರ್ನಾಟಕ 28ರಿಂದ 42 (14 ಹೆಚ್ಚುವರಿ), ತಮಿಳುನಾಡು 39ರಿಂದ 5859 (20 ಹೆಚ್ಚುವರಿ), ಆಂಧ್ರಪ್ರದೇಶ 25ರಿಂದ 3738 (1213 ಹೆಚ್ಚುವರಿ), ತೆಲಂಗಾಣ 17ರಿಂದ 25 26 (89 ಹೆಚ್ಚುವರಿ), ಮತ್ತು ಕೇರಳ 20ರಿಂದ 30 (10 ಹೆಚ್ಚುವರಿ)ಕ್ಕೇರಲಿದೆ. ದಕ್ಷಿಣದ ಐದು ರಾಜ್ಯಗಳು ಒಟ್ಟಾಗಿ ಕೇವಲ 6366 ಹೆಚ್ಚುವರಿ ಸ್ಥಾನಗಳನ್ನು ಪಡೆಯುತ್ತಿವೆ. ಆದರೆ, ಬಿಜೆಪಿ ಪ್ರಾಬಲ್ಯದ ಈ ಏಳು ರಾಜ್ಯಗಳು ಮಾತ್ರ ಸುಮಾರು 128131 ಸ್ಥಾನಗಳನ್ನು ಗಳಿಸುತ್ತಿವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

# ಅಮೆರಿಕಕ್ಕೆ ಭಾರೀ ಹಿನ್ನಡೆ

ಪುಟ ೧→ ಇರಾನ್ ಮಾಧ್ಯಮಗಳ ಪ್ರಕಾರ, ಇಸ್ಫಹಾನ್ ದಕ್ಷಿಣ ಭಾಗದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಅಮೆರಿಕದ ಸಿ-130 ಸಾರಿಗೆ ವಿಮಾನವನ್ನು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪಡೆಗಳು ಹೊಡೆದುರುಳಿಸಿವೆ. ಈ ಕಾರ್ಯಾಚರಣೆಯಲ್ಲಿ ಇರಾನ್‌ನ ವಿಶೇಷ ಕಮಾಂಡೋ ಘಟಕ ಭಾಗವಹಿಸಿದ್ದಾಗಿ ತಿಳಿಸಲಾಗಿದೆ.

ಸಿ-130 ವಿಮಾನವು ಸಾಮಾನ್ಯವಾಗಿ ಇತರ ಯುದ್ಧ ವಿಮಾನಗಳಿಗೆ ಇಂಧನ ತುಂಬಿಸುವುದು ಮತ್ತು ಸೈನಿಕ ಸಾಮಗ್ರಿಗಳನ್ನು ಸಾಗಿಸುವ ಕೆಲಸ ಮಾಡುತ್ತದೆ. ಈ ವಿಮಾನದಲ್ಲಿ ಇದ್ದ ಸಿಬ್ಬಂದಿ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ, ಆದರೆ ಇರಾನ್ ಮೂಲಗಳ ಪ್ರಕಾರ, ಈ ದಾಳಿಯಲ್ಲಿ ಕನಿಷ್ಠ ಐದು ಅಮೆರಿಕದ ಸೈನಿಕರು ಮೃತಪಟ್ಟಿದ್ದಾರೆ. ಜತೆಗೆ, ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನೂ ಹೊಡೆದುರುಳಿಸಲಾಗಿದೆ ಎಂಬ ಮಾಹಿತಿ ಕೂಡ ಹೊರಬಂದಿದೆ. ಆದರೆ ಈ ಎಲ್ಲ ಹೇಳಿಕೆಗಳಿಗೆ ಅಮೆರಿಕದಿಂದ ಇನ್ನೂ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ.

ಈ ಮಧ್ಯೆ, ಹಾರ್ಮುಜ್ ಜಲಸಂಧಿ ತೆರೆಯಲು ವಿಳಂಬ ಮಾಡಿದರೆ, ಇರಾನ್ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಈ ಎಲ್ಲಾ ಘಟನೆಗಳು ಮಧ್ಯಪ್ರಾಚ್ಯ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದು, ಜಾಗತಿಕ ಶಾಂತಿ ಮತ್ತು ಭದ್ರತೆಗೆ ಸವಾಲು ಎದುರಾಗುವ ಸಾಧ್ಯತೆಯಿದೆ. ಇಂತಹ ಪರಿಸ್ಥಿತಿಯಲ್ಲಿ, ಎರಡೂ ರಾಷ್ಟ್ರಗಳು ಶಾಂತಿಯುತ ಮಾತುಕತೆಗಳ ಮೂಲಕ ಸಮಸ್ಯೆ ಪರಿಹರಿಸುವತ್ತ ಗಮನಹರಿಸಬೇಕೆಂಬ ಅಭಿಪ್ರಾಯಗಳು ಜಾಗತಿಕ ಮಟ್ಟದಲ್ಲಿ ವ್ಯಕ್ತವಾಗುತ್ತಿವೆ.

ಒಟ್ಟಿನಲ್ಲಿ, ಈ ಬೆಳವಣಿಗೆಗಳು ಕೇವಲ ಎರಡು ರಾಷ್ಟ್ರಗಳ ನಡುವಿನ ಸಂಘರ್ಷವಲ್ಲದೆ, ವಿಶ್ವದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ. ಮುಂದಿನ ದಿನಗಳಲ್ಲಿ ಈ ಸಂಘರ್ಷ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದು ಎಲ್ಲರ ಗಮನ ಸೆಳೆಯುತ್ತಿದೆ.

### ಅನುಕಂಪದಿಂದ ಕಾಂಗ್ರೆಸ್ ಟಿಕೆಟ್: ಪಾಟೀಲ್

• **ದಾವಣಗೆರೆ:** ರಾಷ್ಟ್ರಮಟ್ಟದಲ್ಲಿ ದಾವಣಗೆರೆಯನ್ನು ಗುರುತಿಸುವಂತಾಗಲು ದಿ. ಶಾಮನೂರು ಶಿವಶಂಕರಪ್ಪ ಕಾರಣ ಎಂದು ಸಚಿವ ಎಂ.ಬಿ.ಪಾಟೀಲ್ ಮನವಿ ಮಾಡಿದರು. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಹಾಲಿ ಶಾಸಕರಾಗಿದ್ದವರು ಮೃತರಾದ ಹಿನ್ನೆಲೆಯಲ್ಲಿ ಉಭಯ ಕುಟುಂಬದ ಸಮರ್ಥ ಶಾಮನೂರು ಹಾಗೂ ಉಮೇಶ ಮೇಟಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದು ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

# ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ



ಪುಟ ೧→ ಜಗಜೀವನರಾಂ ಅವರು ಭಾರತ ದೇಶದ ಸಂವಿಧಾನದ ಎಲ್ಲಾ ಹುದ್ದೆಗಳನ್ನು ಅಲಂಕರಿಸಬಹುದಿತ್ತು. ಅತ್ಯಂತ ಯಶಸ್ವಿ ರಾಜಕೀಯ ಮುತ್ಸದ್ದಿ ಬಾಬೂಜಿ, ದೇಶದ ಅಭಿವೃದ್ಧಿ ಮತ್ತು ದಲಿತರ ಹಕ್ಕುಗಳಿಗೆ ಕಾನುನಾತ್ಮಕ ನಿಲುವುಗಳನ್ನು ತಮ್ಮ ಅಧಿಕಾರದಲ್ಲಿ ಬಳಸಿ ಪರಿಹಾರ ಕಂಡುಕೊಂಡರು ಎಂದು ಹೇಳಿದರು.

ಹಸಿರು ಕ್ರಾಂತಿ, ಕಾರ್ಮಿಕ ಕಾಯ್ದೆ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸೇರಿದಂತೆ ಅನೇಕ ವಿಷಯಗಳು ಬಾಬೂಜಿ ಅವರಲ್ಲಿ ಅಡಕವಾಗಿವೆ. ಇಂತಹವರು ಸಮಾಜದ ಹೆಮ್ಮೆ. ಅವರನ್ನು ಬೇರೆ ಬೇರೆ ಗುಂಪು ಮಾಡಿದರೆ ನಾವೇ ಛಿದ್ರರಾಗುತ್ತೇವೆ. ಯಾಕೆಂದರೆ ಇದು ಶ್ರೇಣೀಕೃತ ವ್ಯವಸ್ಥೆ ನಿರ್ಮಾಣದ ದೇಶ, ವರ್ಣಾಶ್ರಮ ಇನ್ನೂ ಜೀವಂತವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

**ಸೈದ್ಧಾಂತಿಕ ನಿಲುವಿಗೆ ಬದ್ಧ:** ನಮ್ಮಲ್ಲಿ ಒಡಕು ಇಲ್ಲ, ಭಿನ್ನಾಭಿಪ್ರಾಯ ಇಲ್ಲ, ಕಾಂಗ್ರೆಸ್ ಸರ್ಕಾರ, ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ದಲಿತರ ಹಕ್ಕುಗಳನ್ನು ಸಂವಿಧಾನಾತ್ಮಕವಾಗಿ ರಕ್ಷಣೆ ಮಾಡಲು ಬದ್ಧವಾಗಿದೆ. ಯಾವುದೇ ಒಂದು ನಿರ್ಧಾರದಿಂದ ಸಂಘಟನೆಗಳ ಮನಸ್ಸು ಬೇರೆ ಕಡೆ ತಿರುಗದಂತೆ ಎಚ್ಚರಿಕೆ ವಹಿಸಬೇಕು. ಯಾರ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ, ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿದ್ದೇವೆ. ಸಂಪುಟ ಸಭೆಯ ನಿರ್ಧಾರದಂತೆ ಎಲ್ಲಾ ಸಮುದಾಯಗಳಿಗೆ ನ್ಯಾಯ ಕೊಡಲಾಗುವುದು. ಅನಾವಶ್ಯಕ ಮಾತು, ಗುಂಪು ಘರ್ಷಣೆ ಅವಶ್ಯಕತೆ ಇಲ್ಲ ಎಂದು ಡಾ.ಮಹದೇವಪ್ಪ ಹೇಳಿದರು.

**ಪ್ರಶಸ್ತಿ ಪ್ರದಾನ** ಚಂದ್ರಮ್ಮ, ಡಿಂಗ್ರಿ ನರಸಪ್ಪ, ಡಾ. ಸರಜೂ ಕಾಟ್ಕರ್, ನಾರಾಯಣ ಮತ್ತು ನರಸೀಯಪ್ಪ ಅವರಿಗೆ ಡಾ. ಬಾಬು ಜಗಜೀವನರಾಂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ರಾಜ್ಯದ ಜನತೆಗೆ 5 ಗ್ಯಾರಂಟಿ ಕೊಟ್ಟಿದ್ದೇವೆ. ಈ ಯೋಜನೆಗಳು ಜನರಿಗೆ ಕಷ್ಟದ ಸಮಯದಲ್ಲಿ ಒಂದಲ್ಲ ಒಂದು ರೀತಿ ಸಹಾಯವಾಗುತ್ತಿವೆ. ನಾವೆಲ್ಲ ಒಗ್ಗಟ್ಟಾಗಿದ್ದೇವೆ. ಉಪಚುನಾವಣೆ ನಂತರ ಒಳಮೀಸಲಾತಿ ನೀಡುತ್ತೇವೆ.
>
> ■ **ಕೆ.ಎಚ್. ಮುನಿಯಪ್ಪ**, ಆಹಾರ ಸಚಿವ

# ಹೈದರಾಬಾದ್‌ನಲ್ಲೂ ಲವ್ ಜಿಹಾದ್

ಪುಟ ೧→ ಈ ಘಟನೆಯ ವಿಡಿಯೋ ಮತ್ತು ಫೋಟೋಗಳನ್ನು ತೆಗೆದು ಮದುವೆಗೆ ಬಲವಂತಪಡಿಸಿದ್ದಾನೆ ಎಂದು ಮಹಿಳೆ ಹೇಳಿದ್ದಾರೆ. ಮದುವೆಯ ಬಳಿಕ ಆಕೆಯ ಹೆಸರನ್ನು ನಜೀರಾ ಎಂದು ಹೆಸರು ಬದಲಾಯಿಸಿ, ಮತಾಂತರಗೊಳಿಸಿ, ಮಾಂಸಾಹಾರ ಸೇವಿಸಲು ಬಲವಂತ ಮಾಡಿದ್ದಾರೆ ಎನ್ನಲಾಗಿದೆ. ಜತೆಗೆ, ಶಾರೀರಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಾ, ಸುಮಾರು 25ರಿಂದ 30 ಲಕ್ಷ ರೂಪಾಯಿ ಹಣವನ್ನು ವಂಚನೆ ಮೂಲಕ ಪಡೆದುಕೊಂಡಿದ್ದಾನೆ ಎಂದು ಆರೋಪಿಸಿದ್ದಾರೆ.

ಅಲ್ಲದೆ, ಆಕೆಯ ಹೆಸರಿನಲ್ಲಿ ಸಾಲ ಪಡೆದು ಜಮೀನು ಮಾರಾಟ ಮಾಡಿದ್ದಾನೆ. ಗರ್ಭಿಣಿಯಾಗಿದ್ದಾಗ ಬಲವಂತವಾಗಿ ಗರ್ಭಪಾತ ಮಾಡಿಸಿದ್ದಾಗಿಯೂ ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ಪತಿ ಹಾಗೂ ಅವರ ಕುಟುಂಬದ ಹಲವರ ವಿರುದ್ಧ ಮಹಿಳೆ ದೂರು ನೀಡಿದ್ದಾರೆ. ಆದಾಗ್ಯೂ, ಪೊಲೀಸ್ ಇಲಾಖೆಯಿಂದ ಸಮರ್ಪಕ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

### ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

ಪುಟ ೧→ ಪೊಲೀಸ್ ಮಾಹಿತಿಯ ಪ್ರಕಾರ, ಸಮೀರ್ ಖಾನ್ ಎಂಬಾತ ತನ್ನನ್ನು ರವಿ ಠಾಕೂರ್ ಎಂದು ಪರಿಚಯಿಸಿಕೊಂಡು ಯುವತಿಯೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದ. ದೀರ್ಘಕಾಲ ತನ್ನ ನಿಜಸ್ವರೂಪವನ್ನು ಮರೆಮಾಚಿ, ಅವಳ ವಿಶ್ವಾಸ ಗಳಿಸಿ ಪ್ರೇಮ ಸಂಬಂಧ ಮುಂದುವರಿಸಿದ್ದಾನೆ ಎನ್ನಲಾಗಿದೆ. ನಂತರ ಯುವತಿಗೆ ಆತನ ನಿಜವಾದ ಗುರುತು ತಿಳಿದಾಗ ಆಕೆ ಆತಂಕಗೊಂಡಿದ್ದು, ಸತ್ಯ ಬಹಿರಂಗವಾದ ನಂತರ ಆಕೆ ದೂರವಾಗಲು ಪ್ರಯತ್ನಿಸಿದಾಗ, ಆರೋಪಿ ಬೆದರಿಕೆ ಹಾಕಲು ಆರಂಭಿಸಿದ್ದಾನೆ. ಖಾಸಗಿ ವಿಡಿಯೋಗಳನ್ನು ಇಂಟರ್‌ನೆಟ್‌ನಲ್ಲಿ ಹರಡುವುದಾಗಿ ಬೆದರಿಕೆ ಹಾಕಿದ್ದು, ಆಕೆಯ ಮೇಲೆ ಹಲ್ಲೆ ಮಾಡಿದ್ದಾನೆ ಎಂಬ ಆರೋಪವೂ ಕೇಳಿಬಂದಿದೆ. ಈ ಕುರಿತು ಯುವತಿ ದೂರು ನೀಡಿದ ನಂತರ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಘಟನೆ ಸ್ಥಳೀಯವಾಗಿ ಆತಂಕ ಮೂಡಿಸಿದ್ದು, ಆರೋಪಿಯ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಗಳು ಕೇಳಿಬರುತ್ತಿವೆ.

## ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

ಪುಟ ೧→ ದೇಶದಾದ್ಯಂತ ಎಲ್ಲ ರಾಜ್ಯಗಳಿಗೂ ಸಮತೋಲನವಾಗುವಂತೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ದಕ್ಷಿಣ ಭಾರತದ ರಾಜ್ಯಗಳಿಗೆ ಭರವಸೆ ನೀಡಿದರು. ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಂತರ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗಬಹುದು ಎಂಬ ಆತಂಕ ಇತ್ತೀಚೆಗೆ ಹೆಚ್ಚಾಗಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾದ ಕಾರಣದಿಂದಾಗಿ ಈ ರಾಜ್ಯಗಳ ಕ್ಷೇತ್ರಗಳು ಕಡಿಮೆಯಾಗಬಹುದು ಎಂಬ ಭೀತಿ ವ್ಯಕ್ತವಾಗಿತ್ತು. ಇದೇ ಹಿನ್ನೆಲೆಯಲ್ಲಿಯೇ ಮೋದಿ ಅವರ ಸ್ಪಷ್ಟನೆ ಗಮನಾರ್ಹವಾಗಿದೆ.

ದಕ್ಷಿಣ ರಾಜ್ಯಗಳ ವಿರುದ್ಧ ತಪ್ಪು ಮಾಹಿತಿ ಹರಡಲಾಗುತ್ತಿದೆ. ಜನಸಂಖ್ಯೆ ನಿಯಂತ್ರಿಸಿದ ಕಾರಣಕ್ಕೆ ಯಾವುದೇ ರಾಜ್ಯಕ್ಕೂ ಶಿಕ್ಷೆಯಂತಾಗುವ ನಿರ್ಧಾರ ಕೈಗೊಳ್ಳುವುದಿಲ್ಲ, ಬದಲಾಗಿ, ಅವರ ಹಕ್ಕುಗಳನ್ನು ರಕ್ಷಿಸಲು ಸಂಸತ್ತಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ಗೋವಾ, ತೆಲಂಗಾಣ, ತ.ನಾಡು ರಾಜ್ಯಗಳನ್ನು ಉಲ್ಲೇಖಿಸಿದ ಅವರು, ಈ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿವೆ ಎಂದರು.

### ಕೇಂದ್ರದ ಜತೆ ಸಹಕಾರವಿರಲಿ

ಪುಟ ೧→ ರಾಜ್ಯ ಸರಕಾರ ಕೇಂದ್ರದ ಜತೆಗೆ ಯುಕೆಪಿ ವಿಷಯದ ಚರ್ಚೆಗೆ ಒಮ್ಮೆಯೂ ಬಂದಿಲ್ಲ, ನೋಟಿಫಿಕೇಶನ್ ಮಾಡಿಲ್ಲ ಎಂದು ಆರೋಪಿಸುತ್ತಾರೆ. ಆದರೆ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ. ಕಾನೂನು ತೊಡಕುಗಳು ಮುಗಿದ ತಕ್ಷಣವೇ ನೋಟಿಫಿಕೇಶನ್ ಆಗುತ್ತದೆ ಎಂದರು. ರಾಜ್ಯದ ಜನರಿಗೆ ಶಕ್ತಿ ತುಂಬಲು ಗ್ಯಾರಂಟಿ ಕಾರ್ಯಕ್ರಮಗಳು ಯಶಸ್ಸು ಕಂಡಿದ್ದರೆ ಬಾಗಲಕೋಟೆಯಲ್ಲಿ ನಾಲ್ಕೈದು ದಿನ ಇದ್ದು, ಪ್ರಚಾರ ಮಾಡುವ ಅವಶ್ಯಕತೆ ಏನಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕುಮಾರಸ್ವಾಮಿ ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗೆ ಹಣ ಕೊಡುತ್ತಿರುವುದಕ್ಕೆ ನಮ್ಮ ತಕರಾರು ಇಲ್ಲ, ಆದರೆ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಮಾತ್ರ ಹೇಳಿ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಹಿಂದುಳಿದ ನಾಯಕ ಎನ್ನುತ್ತಾರೆ. ಅವರು ಹಾಗೆ ಬೆಳೆಯಲು ಯಾರ ಕೊಡುಗೆ ಇದೆ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು. ಈಗ ಅವರ ಪಕ್ಷದಲ್ಲಿ ಕುರ್ಚಿ ಜಗಳ ಶುರುವಾಗಿದೆ. ಅದನ್ನು ನಾವು ಬಿಡಿ ಎನ್ನುತ್ತಿಲ್ಲ, ಅದು ಅವರ ಪಕ್ಷದ ವೈಯಕ್ತಿಕ ಸಮಸ್ಯೆ ಎಂದರು. ಬಾಗಲಕೋಟೆ, ದಾವಣಗೆರೆ ಉಪ ಚುನಾವಣೆ, ರಾಜ್ಯದಲ್ಲಿ ಸಿಎಂ ಕುರ್ಚಿ ಕಿತ್ತಾಟ, ಗ್ಯಾರಂಟಿ ಪದದ ದಾಖಲೆ ಹೇಳಿಕೆಗಳು ಈಗ ಮುನ್ನೆಲೆಗೆ ಬಂದಿವೆ.

ದಶಕಗಳ ಹೋರಾಟಕ್ಕೆ ಸಿಕ್ಕಿಲ್ಲ ಮುಕ್ತಿ | ಜೀವಜಲಕ್ಕೆ ಇನ್ನೆಷ್ಟು ಕಾಯಬೇಕು?

# ಮಹದಾಯಿ ಮುಗಿಯದ ಕಥೆ!

▸ ಮಹಾಂತೇಶ ಕಣವಿ

ದಿಗಂತ ವಿಶೇಷ

• **ಧಾರವಾಡ:** ಉತ್ತರ ಕರ್ನಾಟಕದ ಜನರ ಜೀವನಾಡಿ ಮಹಾದಾಯಿ, ಕಳಸಾ-ಬಂಡೂರಿ ಯೋಜನೆ ದಶಕಗಳು ಕಳೆದರೂ, ಅನುಷ್ಠಾನದ ಹಂತದಲ್ಲಿ ಇನ್ನೂ ಹಲವು ಅಡೆತಡೆ ಎದುರಿಸುತ್ತಲೇ ಇದೆ. ಕುಡಿಯುವ ನೀರಿನ ಈ ಹೋರಾಟ ತಾರ್ಕಿಕ ಅಂತ್ಯಕ್ಕೆ ಬರುವ ಲಕ್ಷಣ ಕಾಣಿಸುತ್ತಿದ್ದರೂ, ತಾಂತ್ರಿಕ ಮತ್ತು ಕಾನೂನು ಸಂಘರ್ಷಗಳು ಕಾಮಗಾರಿಗೆ ಬ್ರೇಕ್ ಹಾಕುತ್ತಿವೆ.

ಕೇಂದ್ರ ಜಲ ಆಯೋಗವು ಕಳೆದೊಂದು ವರ್ಷದ ಹಿಂದೆಯೇ ಕಳಸಾ- ಬಂಡೂರಿ ನಾಲಾ ತಿರುವು ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದೆ. ಆದರೆ, ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಆರಂಭದಲ್ಲಿ ಉಂಟಾದ ಅಡೆತಡೆ ಈ ಭಾಗದ ಜನರಲ್ಲಿ ನಿರಾಸೆಯ ಕಾರ್ಮೋಡ ಕವಿಸಿದೆ.



**ಪರಿಸರ-ಅರಣ್ಯ ಇಲಾಖೆ ಅನುಮತಿ:** ಪ್ರಸ್ತುತ ಮಹದಾಯಿ ಯೋಜನೆ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವುದ ರಿಂದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅಂತಿಮ ಹಸಿರು ನಿಶಾನೆ ಸಿಗಬೇಕಿದೆ. ಈ ಕೆಲಸ ಪ್ರಕ್ರಿಯೆಯಲ್ಲಿದೆಂಬ ಮಾತು ಇದ್ದರೂ, ಈ ವಿಷಯದಲ್ಲಿ ಈ ಭಾಗದ ರಾಜಕೀಯ ಇಚ್ಛಾಶಕ್ತಿ ಕೊರತೆಯೂ ಎದ್ದುಕಾಣುತ್ತಿದೆ.

**ನ್ಯಾಯಾಲಯದ ಸಂಘರ್ಷ:** ಮಹದಾಯಿ ವಿಷಯದಲ್ಲಿ ನ್ಯಾಯಾಲಯದ ಸಂಘರ್ಷವೂ ಮುಗಿಯುವ ಲಕ್ಷಣ ಕಾಣುತ್ತಿಲ್ಲ, ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಗೋವಾ ಸರ್ಕಾರವು ಸುಪ್ರೀಂಕೋರ್ಟ್‌ನಲ್ಲಿ ವಾದಿಸುತ್ತಿದೆ. ಕರ್ನಾಟಕ ಮತ್ತು ಗೋವಾ ನಡುವಿನ ಈ ಕಾನೂನು ಹೋರಾಟವು ಯೋಜನೆಯ ವೇಗಕ್ಕೆ ಅಡ್ಡಿಯಾಗಿದೆ.

**ವನ್ಯಜೀವಿ ಮಂಡಳಿ ಅನುಮತಿ:** ಕಳಸಾ-ಬಂಡೂರಿ ನಾಲಾ ಪ್ರದೇಶ ಮಲಪ್ರಭಾ ನದಿಯ ಜಲಾನಯನ ಪ್ರದೇಶಕ್ಕೆ ಸೇರಿದ ಹಿನ್ನಲೆ ವನ್ಯ ಜೀವಿಗಳ ಸಂರಕ್ಷಣಾ ನಿಯಮಗಳ ಅಡಿಯಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ವಿಷಯ ಮುಂದಿಟ್ಟು ಗೋವಾ, ಕಾನೂನು ಹೋರಾಟ ಮಾಡುತ್ತಿದೆ. ಇದೇ ಕಾರಣಕ್ಕೆ ಕರ್ನಾಟಕದ ಪಾಲಿಗೆ ಈ ಯೋಜನೆ ವರದನಾಗುತ್ತಿಲ್ಲ.

> ಮಹದಾಯಿ, ಕಳಸಾ-ಬಂಡೂರಿ ಯೋಜನೆ ವಿಳಂಬಕ್ಕೆ ಈ ಭಾಗದ ಸಂಸದರೇ ಕಾರಣ. ಹೀಗಾಗಿ ಧಾರವಾಡ, ಬೆಳಗಾವಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಯ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ವನ್ಯಜೀವಿ ಮಂಡಳಿಯಿಂದ ಕ್ಲಿಯರೆನ್ಸ್ ಕೊಡಿಸಿ, ಯೋಜನೆ ಆರಂಭಿಸಬೇಕು.
>
> ■ **ವೀರೇಶ ಸೊಬರದಮಠ**, ಅಧ್ಯಕ್ಷರು ಕರ್ನಾಟಕ ರೈತ ಸಂಘ ಹಸಿರು ಸೇನಾ

### ವಿಳಂಬಕ್ಕೆ ಪ್ರಮುಖ ಕಾರಣಗಳೇನು?

**ಗೋವಾ ಸರ್ಕಾರದ ತಗಾದೆ:** ಮಹದಾಯಿ ನದಿ ನೀರು ಹಂಚಿಕೆಯ ಕುರಿತು ನ್ಯಾಯಾಧಿಕರಣವು ಈಗಾಗಲೇ ತೀರ್ಪು ನೀಡಿದ್ದರೂ, ಗೋವಾ ಸರ್ಕಾರ ಮೇಲಿಂದ ಮೇಲೆ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಆಕ್ಷೇಪಣೆ ಎತ್ತುತ್ತಿದೆ.

**ಕೇಂದ್ರದ ನಿರ್ಧಾರದಲ್ಲಿ ವಿಳಂಬ:** ಡಿಪಿಆರ್ ಅನುಮೋದನೆ ಸಿಕ್ಕರೂ, ವನ್ಯಜೀವಿ ಮತ್ತು ಪರಿಸರ ಇಲಾಖೆಯ ಅಂತಿಮ ಕ್ಲಿಯರೆನ್ಸ್ ನೀಡುವಲ್ಲಿ ಕೇಂದ್ರದ ಮೇಲೆ ಒತ್ತಡ ಹೇರುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ ಎಂಬುದು ಹೋರಾಟಗಾರರ ವಾದ.

**ಅಂತಾರಾಜ್ಯ ಜಲ ವಿವಾದ:** ನದಿ ತಿರುವು ಮಾಡುವುದರಿಂದ ಕೆಳಭಾಗದ ಗೋವಾಕ್ಕೆ ನೀರಿನ ಹರಿವು ಕಡಿಮೆಯಾಗುತ್ತದೆ ಎಂಬ ಆತಂಕವನ್ನು ಅಲ್ಲಿನ ಪರಿಸರವಾದಿಗಳು ವ್ಯಕ್ತಪಡಿಸುತ್ತಿದ್ದಾರೆ.

**ಮುಂದಿನ ಹಾದಿ ಏನು:** ಕರ್ನಾಟಕ ಸರ್ಕಾರವು ಈಗಾಗಲೇ ಟೆಂಡರ್ ಪ್ರಕ್ರಿಯೆಗಳಿಗೆ ಪ್ರಾಥಮಿಕ ಸಿದ್ಧತೆ ಮಾಡಿಕೊಂಡಿದೆ. ಆದರೆ, ಅರಣ್ಯ ಭೂಮಿ ಬಳಕೆಗೆ ಅನುಮತಿ ಸಿಕ್ಕರೆ ಮಾತ್ರ ಜೆಸಿಬಿಗಳು ಮಣ್ಣಿಗೆ ಇಳಿಯಲು ಸಾಧ್ಯ. ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಪೂರೈಸುವ ಈ ಕನಸು ನನಸಾಗಲು ಕೇಂದ್ರದ ಅಂತಿಮ ಅನುಮತಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರವಾದ ಬಲವಾದ ವಾದದ ಅಗತ್ಯವಿದೆ. ರೈತರು ಮತ್ತು ಸಂಘಟನೆಗಳ ನಿರಂತರ ಪ್ರತಿಭಟನೆಯ ಫಲವಾಗಿ ಯೋಜನೆಗೆ ಒಂದಿಷ್ಟು ಚಾಲನೆ ಸಿಕ್ಕಿದ್ದರೂ, ಕಾಮಗಾರಿ ಪೂರ್ಣಗೊಂಡು ನೀರು ಹರಿಯಲು ಇನ್ನೂ ಕಾನೂನು ಮತ್ತು ಪರಿಸರ ಇಲಾಖೆಯ ಸಂಕೀರ್ಣ ಹಾದಿಗಳನ್ನು ದಾಟಬೇಕಿದೆ.

ನಿಮಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲ | ಸಿಎಂ ಸಿದ್ದರಾಮಯ್ಯಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸವಾಲು

# ತಾಕತ್ತಿದ್ದರೆ ಪ್ರಾದೇಶಿಕ ಪಕ್ಷ ಕಟ್ಟಲಿ ನೋಡೋಣ

• **ದಾವಣಗೆರೆ:** ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ, ಕುರ್ಚಿ ಉಳಿಸಿಕೊಳ್ಳಲು ತನ್ನನ್ನು ಬೆಳೆಸಿದ ಅಹಿಂದ ವರ್ಗವನ್ನೇ ಹತ್ತಿಕ್ಕಲು ಪ್ರಯತ್ನಿಸುತ್ತಿರುವ ಸಿದ್ದರಾಮಯ್ಯಗೆ ತಾಕತ್ತಿದ್ದರೆ ಕಾಂಗ್ರೆಸ್ಸಿನಿಂದ ಹೊರಬಂದು, ಪ್ರಾದೇಶಿಕ ಪಕ್ಷವನ್ನು ಕಟ್ಟಿ ರಾಜಕಾರಣ ಮಾಡಲಿ ನೋಡೋಣ ಎಂದು ಕೇಂದ್ರ ಸಚಿವ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ನಗರದ ಜೆಎಂಐಟಿ ಅತಿಥಿ ಗೃಹದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಕಾರ್ಯಕರ್ತರ ಶಕ್ತಿಯಿಂದಲೇ ನಾವು ರಾಜ್ಯದಲ್ಲಿ 40 ಸ್ಥಾನ ಗೆದ್ದಿದ್ದೇವೆ. ದೇವೇಗೌಡರದ್ದು ಕುಟುಂಬ ರಾಜಕಾರಣ ಎನ್ನುವ ನಿಮಗೆ ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುವ ನೈತಿಕತೆಯೇ ಇಲ್ಲ, ನಾವ್ಯಾರೂ ದುಡ್ಡು ಹೊಡೆಯಲು ರಾಜಕೀಯಕ್ಕೆ ಬರಬೇಕೆಂದು ಬಂದವರಲ್ಲ, ಜನರೇ ನಮ್ಮನ್ನು ಇಲ್ಲಿಗೆ ಕರೆ ತಂದಿದ್ದಾರೆ. ನಿಮ್ಮ ದೊಡ್ಡ ಮಗನನ್ನು ರಾಜಕೀಯಕ್ಕೆ ತರಲು ಎಷ್ಟೆಲ್ಲಾ ಪ್ರಯತ್ನಪಟ್ಟಿರಿ. ದೊಡ್ಡ ಮಗ ಅಕಾಲಿಕ ನಿಧನರಾದ ನಂತರ ಎಲ್ಲೋ ವೈದ್ಯನಾಗಿ ಸೇವೆ ಮಾಡಿಕೊಂಡಿದ್ದ ಇನ್ನೊಬ್ಬ ಮಗನನ್ನು ರಾಜಕಾರಣಕ್ಕೆ ನೀವು ತರಲಿಲ್ಲವೆ? ನೀವು ಮತ್ತೊಬ್ಬರಿಗೆ ಕುಟುಂಬ ರಾಜಕಾರಣ ಅಂತಾ ಟೀಕಿಸುತ್ತೀರಾ? ಎಂದು ಕಿಡಿಕಾರಿದರು.

ಅಹಿಂದ ಹೆಸರಿನಲ್ಲಿ ನಿರಂತರ ಲೂಟಿ ಮಾಡುತ್ತಿದ್ದೀರಿ. ಈಗ ಅದೇ ಅಹಿಂದ ವರ್ಗವನ್ನೇ ಹತ್ತಿಕ್ಕಲು ಪ್ರಯತ್ನಿಸುತ್ತಿದ್ದೀರಿ. ನಿಮ್ಮ ಅವಕಾಶವಾದಿ ರಾಜಕಾರಣ ಹೇಗಿರುತ್ತದೆಂಬುದು ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲೇ ಜಗಜ್ಜಾಹೀರಾಗಿದೆ. ಅಹಿಂದ ವರ್ಗದ ಪ್ರಮುಖ ಮುಸ್ಲಿಂ ಮತದಿಂದಲೇ ರಾಜಕೀಯ ಶಕ್ತಿ ಬೆಳೆಸಿಕೊಂಡ ಸಿದ್ದರಾಮಯ್ಯ ಇಲ್ಲಿ ಕಣದಲ್ಲಿರುವ ಯಾವುದೇ ಮುಸ್ಲಿಂ ಅಭ್ಯರ್ಥಿಗೂ ಮತ ನೀಡದಂತೆ ರಾಜಾರೋಷವಾಗಿ ಕರೆ ನೀಡುತ್ತಾರೆ. ಇದಾ ನಿಮ್ಮ ಅಹಿಂದ ಪ್ರೀತಿ, ಅಭಿಮಾನ? ಇದಾ ಸಾಮಾಜಿಕ ನ್ಯಾಯ? ಎಂದು ಅವರು ಪ್ರಶ್ನಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಕಥೆ ಏನಾಯ್ತು? ನಿಗಮದಲ್ಲಿ ಲೂಟಿಯಾಗಿದ್ದನ್ನು ಸಿದ್ದರಾಮಯ್ಯ ಸದನದಲ್ಲೇ



ಒಪ್ಪಿಕೊಂಡಿದ್ದಾರೆ. ದೇವರಾಜ ಅರಸು ನಿಗಮದ ಮೂಲಕ ಬಡವರಿಗೆ ನೀಡುವ ಗಂಗಾ ಕಲ್ಯಾಣದಲ್ಲೂ ಲೂಟಿ ಮಾಡಿದ್ದೀರಿ. ಉಪ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳನ್ನು ಹೇಗಾದರೂ ಗೆಲ್ಲಬೇಕೆಂದು ಹೊರಟಿದ್ದಾರೆ. ವಿಧಾನಸೌಧ ಸಂಪೂರ್ಣ ಖಾಲಿಯಾಗಿದೆ. ಸಿಎಂ, ಡಿಸಿಎಂ, ಸಚಿವರ ಜೊತೆಗೆ ಎಐಸಿಸಿ ರಾಜ್ಯ ಉಸ್ತುವಾರಿ ಸಹ ಇಲ್ಲಿಯೇ ಠಿಕಾಣಿ ಹೂಡಿದ್ದಾರೆ. ಸಿಎಂ ಸಿದ್ದರಾಮಯ್ಯ ತಮ್ಮ ಸರ್ಕಾರದ ಸಾಧನೆ ಬಗ್ಗೆ ಜನರಿಗೆ ಹೇಳುವುದನ್ನು ಬಿಟ್ಟು, ಜೆಡಿಎಸ್-ಬಿಜೆಪಿಗಳನ್ನು ನಿಂದಿಸುವ ಕೆಲಸ ಮಾಡುತ್ತಿದ್ದಾರೆ. ಜವಾಬ್ದಾರಿಯುತ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತ ವ್ಯಕ್ತಿಗೆ ಇದು ಭೂಷಣವಲ್ಲ ಎಂದು ಅವರು ಸಲಹೆ ನೀಡಿದರು.

ವಿಶ್ವಕ್ಕೆ ಮಾದರಿ ಗ್ಯಾರಂಟಿಗಳೆಂದು ನೀವು ಬೀಗುತ್ತಿದ್ದೀರಲ್ಲ, ಅದ್ಯಾವುದೂ ಹಿಂದೆ ಆಳಿದಂತಹ ಯಾವುದೇ ಸರ್ಕಾರ ಮಾಡದ ಕೆಲಸಗಳಲ್ಲ, ಶೋಷಿತ ವರ್ಗಗಳಿಗೆ ಆರ್ಥಿಕ ಶಕ್ತಿ ನೀಡುವ ಕೆಲಸವನ್ನು ಆಯಾ ಕಾಲದಲ್ಲಿ ಅಂದಿನ ಸರ್ಕಾರಗಳು ಮಾಡಿವೆ. ಎಲ್ಲವನ್ನೂ ಬಿಟ್ಟು ಗ್ಯಾರಂಟಿ ಬಗ್ಗೆ ಮಾತ್ರ ಸಿಎಂ, ಡಿಸಿಎಂ, ದಿಲ್ಲಿಯಿಂದ ಬಂದ ಸುರ್ಜೇವಾಲಾ ಎಲ್ಲರೂ ಜಾಗಟೆ ಹೊಡಿತ್ತೀರಿ. ಈವರೆಗೂ ರಾಜ್ಯದಲ್ಲಿ ಆಗಿ ಹೋದ ಎಷ್ಟೋ ಸರ್ಕಾರಗಳು ಗ್ಯಾರಂಟಿಗಳಿಗಿಂತ ಉತ್ತಮ ಕಾರ್ಯಕ್ರಮ ಕೊಟ್ಟಿವೆ. ಗ್ಯಾರಂಟಿಗಳಿಂದಲೇ ಕಾಂಗ್ರೆಸ್ ಶಾಶ್ವತವಾಗಿ ಅಧಿಕಾರದಲ್ಲಿರಲು ಸಾಧ್ಯವಿಲ್ಲ, ಅವುಗಳನ್ನು ಕೂಡ ಮನಸ್ಸೋಇಚ್ಛೆ, ಬೇಕಾಬಿಟ್ಟಿಯಾಗಿ ನೀಡುತ್ತಿದ್ದಾರೆ. ಇನ್ನುಳಿದಂತೆ ಈ ಸರ್ಕಾರದ ಸಾಧನೆ ಶೂನ್ಯ. ಮೂರು ವರ್ಷಗಳಲ್ಲಿ ಸರ್ಕಾರದ ಸಾಧನೆಯನ್ನು ದುರ್ಬೀನು ಹಾಕಿ ಹುಡುಕಿದರೂ ಏನೇನೂ ಸಿಗುವುದಿಲ್ಲ ಎಂದು ಅವರು ವ್ಯಂಗ್ಯವಾಡಿದರು.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನೇಮಿಸಿದ್ದ ಕಾಂತರಾಜು ಆಯೋಗದ ವರದಿ ಈಗ ನಿಮ್ಮ ಬಳಿಯೇ ಇದೆ. ಜಯಪ್ರಕಾಶ ಹೆಗಡೆ ವರದಿಯನ್ನೂ ಸ್ವೀಕರಿಸಿದ್ದೀರಿ. ಅದನ್ನು ಎಷ್ಟು ದಿನ ನಿಮ್ಮ ಬಳಿ ಇಟ್ಟುಕೊಳ್ಳುತ್ತೀರಿ? ಎರಡೂ ವರದಿಗಳನ್ನು ಇನ್ನೂ ಯಾಕೆ ನೀವು ಬಿಡುಗಡೆ ಮಾಡಿಲ್ಲ? ಅಹಿಂದ ನಾಯಕನೆನ್ನುವ ನೀವು ಅವನ್ನು ಹೊರಕ್ಕೆ ತಂದು, ಅವಕಾಶವಂಚಿತ ಸಮುದಾಯಗಳಿಗೆ ಅನುಕೂಲ ಯಾಕೆ ಮಾಡಿಕೊಡುತ್ತಿಲ್ಲ? ಒಳಮೀಸಲಾತಿ ವಿಚಾರ ಕುರಿತು ಸಿಎಂ ಯಾಕೆ ಮೌನ ವಹಿಸಿದ್ದಾರೆ? ಎಂದು ಅವರು ತರಾಟೆಗೆ ತೆಗೆದುಕೊಂಡರು.

ಗ್ಯಾರಂಟಿಗಳನ್ನು ಕೊಟ್ಟು ಕುಟುಂಬಗಳನ್ನು ಪರಾವಲಂಬಿಗಳನ್ನಾಗಿ ಮಾಡುವುದಲ್ಲ, ಶಾಶ್ವತವಾಗಿ ಆರ್ಥಿಕ ಶಕ್ತಿ ತುಂಬುವುದು ಅತ್ಯಗತ್ಯ. ಜನರು ಸದೃಢ ಬದುಕು ಕಟ್ಟಿಕೊಳ್ಳಲು ಸರ್ಕಾರ ನೆರವಾಗಬೇಕು. ಪರಿಶಿಷ್ಟರ ಹಣ ಕಿತ್ತು ಗ್ಯಾರಂಟಿಗೆ ಬಳಸುತ್ತಿದ್ದೀರಿ. ಕೊನೆಪಕ್ಷ ದಲಿತ ಅಲ್ಪಸಂಖ್ಯಾತ ಮಕ್ಕಳಿಗೆ ಸಕಾಲಕ್ಕೆ ವಿದ್ಯಾರ್ಥಿ ವೇತನ ಕೊಡುವುದಕ್ಕೂ ಈ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ, ರಾಜ್ಯದಲ್ಲಿ ಲಕ್ಷಾಂತರ ಮನೆ ಕಟ್ಟಿದ್ದೀರೆಂದು ಹೇಳುತ್ತಿದ್ದೀರಿ. ಒಮ್ಮೆ ತೋರಿಸಿ ಎಲ್ಲೆಲ್ಲಿ, ಎಷ್ಟು ಮನೆಗಳನ್ನು ಕಟ್ಟಿದ್ದೀರಿ, ನಾವೂ ನೋಡುತ್ತೇವೆ. ಚುನಾವಣೆ ನಡೆಯುತ್ತಿರುವ ದಾವಣಗೆರೆಯಲ್ಲಿ ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ? ಲೆಕ್ಕ ಕೊಡಿ. ಹಕ್ಕುಪತ್ರಗಳನ್ನು ಕೊಡದೇ ಇಂದಿಗೂ ಸತಾಯಿಸುತ್ತಿದ್ದೀರಿ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಾನೂ ಎರಡು ಸಲ ಸಿಎಂ ಆಗಿ ಅಧಿಕಾರ ನಡೆಸಿದ್ದೇನೆ. ಎಂದಿಗೂ ಕೇಂದ್ರದ ಬಗ್ಗೆ ಯೋಚನೆ ಮಾಡಲಿಲ್ಲ, ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿದ್ದ ರೈತರ ಸಾಲ ಮನ್ನಾ ಮಾಡಿದ್ದೆವು. ಆಗ ಕೇಂದ್ರ ಸರ್ಕಾರಕ್ಕೇನಾದರೂ ನಾವು ಕೇಳಿದ್ವಾ? ತನ್ನನ್ನು ತಾನು ಅನ್ನ ರಾಮಯ್ಯ ಅಂತಾ ಹೇಳಿಕೊಳ್ಳೋರು ಎಲ್ಲಿಂದ ಅಕ್ಕಿ ತರುತ್ತಿದ್ದಾರೆ? ಕೇಂದ್ರದ ಅಕ್ಕಿ ಹಿಡಿದು, ನಾನು ಅನ್ನರಾಮಯ್ಯ ಅಂದ್ರೆ, ಯಾರು ಒಪ್ಪುತ್ತಾರೆ? ರಾಜ್ಯದಲ್ಲಿ ಲೂಟಿ ಮಾಡೋದು ಬಿಟ್ಟು ಏನು ಮಾಡಿದ್ದೀರಿ? ಅಧಿಕಾರಿಗಳ ನಿಯುಕ್ತಿಗೆ ಎಷ್ಟೆಷ್ಟು ಫಿಕ್ಸ್ ಮಾಡಿಕೊಂಡಿದ್ದೀರಿ? ನೀವು ಮಧ್ಯರಾತ್ರಿ ಮಾಡೋ ವ್ಯವಹಾರಕ್ಕೆ ದಾಖಲೆ ಎಲ್ಲಿಂದ ಕೊಡೋದು? ಬಿಜೆಪಿ ಸರ್ಕಾರವನ್ನು 40 ಪರ್ಸೆಂಟ್ ಸರ್ಕಾರ ಅಂದಾಗ ನೀವೇನು ದಾಖಲೆ ಕೊಟ್ಟಿದ್ದಿರಿ? 136 ಕ್ಷೇತ್ರ ಗೆದ್ದಿದ್ದೀವೆಂಬ ಅಹಂಕಾರ ಇದೆ ಅಲ್ವಾ? ತಮಿಳುನಾಡಿನಲ್ಲಿ ರಾಷ್ಟ್ರೀಯ ಪಕ್ಷವಾದ ನಿಮಗೆ 25 ಕ್ಷೇತ್ರದ ಭಿಕ್ಷೆ ಕೊಟ್ಟರು. ಅದರಲ್ಲೂ 4 ಕ್ಷೇತ್ರಕ್ಕೆ ಅಭ್ಯರ್ಥಿ ಇಲ್ಲದೇ, ಯಾರು ಯಾರನ್ನೋ ನಿಲ್ಲಿಸಿದ್ದೀರಿ ಎಂದು ಅವರು ಟೀಕಿಸಿದರು.

ಮಧ್ಯಪ್ರಾಚ್ಯದಲ್ಲಿ ಯುದ್ಧದ ನಡುವೆ ಭಾರತಕ್ಕೆ ತೈಲ-ಅನಿಲ ಪೂರೈಕೆಗೆ ಯಾವುದೇ ತೊಂದರೆಯಾಗದಿದ್ದರೂ ವಿನಾಕಾರಣ ಟೀಕಿಸುವ 17 ಸಲ ಬಜೆಟ್ ಮಂಡಿಸಿದ ಅನುಭವಿಯಾದ ನೀವು, ಸಿಲಿಂಡರ್ ಹೇಗೆ ಕೊಡಬೇಕೆಂಬ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ಸಲಹೆ ಕೊಡ್ರಪ್ಪಾ. ಯುದ್ಧದಿಂದಾಗಿ ಅನೇಕ ದೇಶಗಳು ಸಂಕಷ್ಟ ಅನುಭವಿಸುತ್ತಿವೆ. ತೈಲ, ಅನಿಲ ಸಿಗದೇ ಪರದಾಡುತ್ತಿವೆ. ಆದರೆ, ಭಾರತದಲ್ಲಿ ಅಂತಹ ಪರಿಸ್ಥಿತಿ ಇಲ್ಲ, ಹಾರ್ಮೋಜ್ ಜಲಸಂಧಿಯಲ್ಲಿ ಭಾರತದ ತೈಲ, ಅನಿಲ ಹಡಗುಗಳಷ್ಟೇ ಸಾಗಲು ಇರಾನ್ ಸಮ್ಮತಿಸಿದ್ದು, ಇದಕ್ಕೆ ಮೋದಿ ಕಾರಣ. ನರೇಂದ್ರ ಮೋದಿಯವರ ದೂರದೃಷ್ಟಿ, ವಿದೇಶಗಳೊಂದಿಗೆ ಹೊಂದಿರುವ ಸಂಬಂಧದ ಪರಿಣಾಮ 40 ವಿವಿಧ ದೇಶಗಳಿಂದ ನಮಗೆ ಅಗತ್ಯ ವಸ್ತು ತರಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಅವರು ತಿಳಿಸಿದರು.

ಮೈತ್ರಿ ಅಭ್ಯರ್ಥಿ ಶ್ರೀನಿವಾಸ ಟಿ.ದಾಸಕರಿಯಪ್ಪ, ಕೇಂದ್ರದ ಮಾಜಿ ಸಚಿವ ಡಾ.ಜಿ.ಎಂ.ಸಿದ್ದೇಶ್ವರ, ಶಾಸಕರಾದ ರಮೇಶ ಜಾರಕಿಹೊಳಿ, ಬಿ.ಪಿ.ಹರೀಶ, ಕರೆಮ್ಮ ನಾಯಕ್, ಎಂಎಲ್ಸಿ ಭೋಜೇಗೌಡ, ಬಿ.ವಿ.ನಾಯಕ, ಮುರುಗೇಶ ನಿರಾಣಿ, ಕುಮಾರ ಬಂಗಾರಪ್ಪ, ಬಂಡೆಪ್ಪ ಕಾಶೆಂಪೂರ, ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ, ಮುಖಂಡರಾದ ಎಸ್.ಎಂ.ವೀರೇಶ ಹನಗವಾಡಿ, ಬಿ.ಚಿದಾನಂದಪ್ಪ, ಕೆ.ಬಿ.ಕಲ್ಲೇರುದ್ರೇಶ, ಗಣೇಶ ದಾಸಕರಿಯಪ್ಪ ಸುದ್ದಿಗೋಷ್ಠಿಯಲ್ಲಿದ್ದರು.

> **ಭದ್ರಾ ಮೇಲ್ದಂಡೆ ಯೋಜನೆಯ ಒಟ್ಟು ಅಂದಾಜು ವೆಚ್ಚವು ಈಗ 28,000 ಕೋಟಿ ರೂ. ತಲುಪಿದೆ. ಈ ಬೃಹತ್ ಮೊತ್ತದಲ್ಲಿ ಈಗಾಗಲೇ ಸುಮಾರು 18,000 ಕೋಟಿ ರೂ. ಖರ್ಚು ಮಾಡಿದ್ದು, ಕೇಂದ್ರ ಸರ್ಕಾರವು 21,000 ಕೋಟಿ ರೂ. ಕ್ರಿಯಾಯೋಜನೆಗೆ ಅಂತಿಮವಾಗಿ ಒಪ್ಪಿಗೆ ಸೂಚಿಸಿದೆ. ಪ್ರಸ್ತುತ ಈ ವಿಷಯವು ಹಣಕಾಸು ಇಲಾಖೆಯ ಪರಿಶೀಲನೆಯಲ್ಲಿದ್ದು, ಅಲ್ಲಿಂದ ಅನುಮೋದನೆ ಪಡೆದ ನಂತರ ಕೇಂದ್ರ ಸಚಿವ ಸಂಪುಟದ ಮುಂದೆ ಬರಲಿದೆ. ಸಂಪುಟದ ಒಪ್ಪಿಗೆ ಸಿಕ್ಕ ಕೂಡಲೇ ಹಣ ಬಿಡುಗಡೆಯಾಗಲಿದೆ.**
> **■ ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

# ದಾವಣಗೆರೆ ದಕ್ಷಿಣ ಕಾಂಗ್ರೆಸ್ ಭದ್ರಕೋಟೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರವು ಕಾಂಗ್ರೆಸ್ ಭದ್ರಕೋಟೆಯಾಗಿದ್ದು, ಯಾರು ಬಂದರೂ, ಬರದಿದ್ದರೂ ಕಾಂಗ್ರೆಸ್ ಗೆಲ್ಲಲಿದೆ ಎಂದು ಸಚಿವ ಜಮೀರ್ ಅಹಮದ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆಂದು ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಖಾಸಗಿ ಸಮಾರಂಭಕ್ಕೆಂದು ಬಂದಿದ್ದಾಗ ಅಹಿಂದ ಸಮಾಜದವರು, ಮುಖ್ಯವಾಗಿ, ಮುಸ್ಲಿಂ ಸಮಾಜದ ಮುಖಂಡರು ನನ್ನನ್ನು ಭೇಟಿಯಾಗಿ ದಾವಣಗೆರೆ ದಕ್ಷಿಣದಿಂದ ಮುಸ್ಲಿಂ ಅಭ್ಯರ್ಥಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವಂತೆ ಕೇಳಿದ್ದರು. ಈ ಹಿನ್ನಲೆಯಲ್ಲಿ ನಾವು ಹೈಕಮಾಂಡ್ ಗೆ ಬೇಡಿಕೆ ಇಟ್ಟಿದ್ದವು. ಆದರೆ, ಟಿಕೆಟ್ ಕೊಡುವುದು ಹೈಕಮಾಂಡ್ ನಿರ್ಧಾರ. ಪಕ್ಷದ ಸಂಪ್ರದಾಯದಂತೆ ಅನುಕಂಪದ ಹಿನ್ನೆಲೆಯಲ್ಲಿ ಹೈಕಮಾಂಡ್ ನಿರ್ದೇಶನದಂತೆ ಕುಟುಂಬದ ಸದಸ್ಯರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ನೂರಕ್ಕೆ 100ರಷ್ಟು ಗೆಲುವು ಸಾಧಿಸುತ್ತಾರೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಬಾರಿ ನಾಲ್ಕು ಮಂದಿ ಅಲ್ಪಸಂಖ್ಯಾತರ ಅಭ್ಯರ್ಥಿಗಳು ಕಣದಲ್ಲಿದ್ದು 3 ಸಾವಿರ ಮತ ಪಡೆದಿದ್ದರು. ಈ ಬಾರಿ 11 ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿದ್ದು, ಅವರನ್ನು ಮನವೊಲಿಸುವ ಕೆಲಸ ಮಾಡುತ್ತೇವೆ. ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಸೇರಿದಂತೆ ಅಸಮಾಧಾನಿತ ಎಲ್ಲಾ ಕಾಂಗ್ರೆಸ್ ಸದಸ್ಯರು ಒಂದೇ ಕುಟುಂಬವಿದ್ದಂತೆ. ಕುಟುಂಬದಲ್ಲಿ ಸಣ್ಣ-ಪುಟ್ಟ ಭಿನ್ನಾಭಿಪ್ರಾಯಗಳು ಸಹಜ. ಅಸಮಾಧಾನಿತರೊಂದಿಗೆ ಮಾತನಾಡಿ ಪ್ರಚಾರಕ್ಕೆ ಕರೆಯುತ್ತೇನೆ ಎಂದು ಅವರು ತಿಳಿಸಿದರು.

ನನ್ನ ಮತ್ತು ಸಚಿವ ಮಲ್ಲಿಕಾರ್ಜುನ್ ನಡುವೆ ಯಾವುದೇ ಮುನಿಸು, ಮನಸ್ತಾಪ ಇಲ್ಲ, ನಾವು ಆತ್ಮೀಯ ಸ್ನೇಹಿತರು. ಕೆಲವರು



ಉದ್ದೇಶಪೂರ್ವಕವಾಗಿಗೊಂದಲಸೃಷ್ಟಿಸಲುಅಪಪ್ರಚಾರಮಾಡುತ್ತಿದ್ದಾರೆ. ಇದನ್ನು ಯಾರೂ ನಂಬಬಾರದು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸೂಚನೆ ಮೇರೆಗೆ ದಾವಣಗೆರೆಗೆ ಬಂದು ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಪರ ಪ್ರಚಾರ ಮಾಡುತ್ತಿದ್ದೇನೆ. ಅಸಮಾಧಾನಗೊಂಡಿರುವವರನ್ನು ಪಕ್ಷದ ಕೆಲಸಕ್ಕೆ ತೊಡಗಿಸುತ್ತೇವೆ. ಎಲ್ಲವೂ ಶೀಘ್ರದಲ್ಲೇ ಸರಿಯಾಗಲಿದೆ ಎಂದು ಅವರು ನುಡಿದರು.

ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾತನಾಡಿ, ಜಮೀರ್ ನಾವು ಆತ್ಮೀಯ ಸ್ನೇಹಿತರು. ಆತ್ಮೀಯವಾಗಿ ಬಾರೋ, ಹೋಗೋ ಅಂತಾ ಏಕವಚನದಲ್ಲಿಯೇ ಮಾತನಾಡಿಕೊಳ್ಳುತ್ತೇವೆ. ಮಾತನಾಡುವ ಭರದಲ್ಲಿ ಆಡಿದ್ದನ್ನು ತಪ್ಪಾಗಿ ಅರ್ಥೈಸಲಾಗಿದೆ. ಅದನ್ನು ಬೆಳೆಸಿಕೊಂಡು ಹೋಗುವ ಅಗತ್ಯವಿಲ್ಲ, ನಮ್ಮ ಮಧ್ಯೆ ಯಾವುದೇ ವೈಯಕ್ತಿಕ ದ್ವೇಷವಿಲ್ಲ, ನಾವು ಒಗ್ಗಟ್ಟಾಗಿ ಪಕ್ಷದ ಹಿತಕ್ಕಾಗಿ ಕೆಲಸ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ರಾಜ್ಯ ಚುನಾವಣಾ ಉಸ್ತುವಾರಿ ಅಭಿಷೇಕ ದತ್ತ, ಸಚಿವ ಎಂ.ಸಿ.ಸುಧಾಕರ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ.ಮಂಜಪ್ಪ, ಅಭ್ಯರ್ಥಿ ಸಮರ್ಥ ಶಾಮನೂರು, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹಾಜರಿದ್ದರು.

# ಸಿದ್ದರಾಮಯ್ಯ ಡೋಂಗಿ ರಾಜಕಾರಣಿ

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಮರ ಸ್ಥಿತಿ ಕೇಳುವಂತೆಯೇ ಇಲ್ಲ, ಇಲ್ಲಿ ಅವರು ಕಾಂಗ್ರೆಸ್ ನ್ನು ಸಂಪೂರ್ಣವಾಗಿ ನಂಬಿದ್ದರು. ಬಿಜೆಪಿ ಬಂದರೆ ಹಾಗೆ ಮಾಡ್ತಾರೆ, ಹೀಗೆ ಮಾಡ್ತಾರೆ ಅಂತಾ ಕಾಂಗ್ರೆಸ್ಸಿನವರು ಸುಳ್ಳು ಹೇಳಿದ್ದರು. ಕಳೆದ 12 ವರ್ಷದಿಂದ ನರೇಂದ್ರ ಮೋದಿಯವರು ದೇಶದಲ್ಲಿ ಆಡಳಿತ ನಡೆಸುತ್ತಿದ್ದಾರೆ. ಬಿಜೆಪಿ ಸರ್ಕಾರ ಯಾರಿಗೂ ಅನ್ಯಾಯ ಮಾಡಲ್ಲ, ದಲಿತರನ್ನು ಕೂಡಿಸುವ, ಶಕ್ತಿ ತುಂಬಿಸುವ ಕೆಲಸವನ್ನು ಬಿಜೆಪಿ ಮಾಡಿದೆ. ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆಯ ಈ ಚುನಾವಣೆಯಲ್ಲಿ ಮುಸ್ಲಿಮರ ಸ್ವಾಭಿಮಾನದ ಪ್ರಶ್ನೆ ಬಂದಿದೆ. ಅವರ ಸ್ವಾಭಿಮಾನವನ್ನು ಅವರೇ ಕಾಪಾಡಿಕೊಳ್ಳಬೇಕು. ಕಾಂಗ್ರೆಸ್ ಸೋತರೆ ಮಾತ್ರ ಮುಸ್ಲಿಮರ ಸ್ವಾಭಿಮಾನ ಗೆಲ್ಲುತ್ತದೆ. ಈ ಬಾರಿ ಕಾಂಗ್ರೆಸ್ ಸೋಲಿಸುತ್ತೇವೆ ಅಂತಾ ಮುಸ್ಲಿಮರೇ ಎಲ್ಲಾ ಕಡೆ ಹೇಳುತ್ತಿದ್ದಾರೆ. ಕಾಂಗ್ರೆಸ್ ಬದುಕಿರುವವರೆಗೆ ದೇಶದ ಭವಿಷ್ಯ ಅಡಕತ್ತರಿಯಲ್ಲಿ ಸಿಕ್ಕಿದಂತೆ ಇರುತ್ತದೆ. ಓಟ್ ಬ್ಯಾಂಕ್ ರಾಜಕಾರಣ ಮಾಡುವ ಕಾಂಗ್ರೆಸ್ಸನ್ನು ಆದಷ್ಟು ಬೇಗ ಯುವಕರು



ಮುಗಿಸುವ ಕೆಲಸ ಮಾಡಬೇಕು ಎಂದು ಛಲವಾದಿ ನಾರಾಯಣಸ್ವಾಮಿಅಭಿಪ್ರಾಯಪಟ್ಟರು.

ಸಿದ್ದರಾಮಯ್ಯ ಸಮಾಜವಾದಿ ಅಲ್ಲ, ಅವರೊಬ್ಬ ಮಜಾವಾದಿ. ಅವರು ಕಾಂಗ್ರೆಸ್ ಹೊಸ್ತಿಲು ತುಳಿಯುವವರೆಗೆ ನಾನೂ ಅವರ ಅಭಿಮಾನಿಯಾಗಿದ್ದೆ. ಜನತಾ ದಳದಲ್ಲಿ ಇದ್ದಾಗ ಚೆನ್ನಾಗಿದ್ದರು. ಅನಂತರ ಬದಲಾದರು. ಅಪ್ಪಟ ಕಾಂಗ್ರೆಸ್ಸಿನವರು ಹೇಳುವ ಸುಳ್ಳಿಗಿಂತ ಹೆಚ್ಚು ಸುಳ್ಳನ್ನು ಸಿದ್ದರಾಮಯ್ಯ ಹೇಳುತ್ತಾರೆ. ಸುಳ್ಳು ಹೇಳದಿದ್ದರೆ ಹಾಗೂ ವಂಚನೆ ಮಾಡದಿದ್ದರೆ ಕಾಂಗ್ರೆಸ್ಸಿನಲ್ಲಿ ಬದುಕಲು ಆಗಲ್ಲ, ಪರಿಶಿಷ್ಟ ಜಾತಿಗಳು ಮೀಸಲಾತಿಯಲ್ಲಿ ನ್ಯಾಯ ಸಿಗದೆ ಬೀದಿಯಲ್ಲಿ ನಿಲ್ಲಲು ಸಚಿವ ಹೆಚ್.ಸಿ.ಮಹದೇವಪ್ಪ ಎಂದು ಅವರು ಆರೋಪಿಸಿದರು.

ಬಾಗಲಕೋಟೆಯಲ್ಲಿ ರಸ್ತೆಗಳಿಗೆ ಕೆಂಪುಮಣ್ಣು ಹಾಕಿ ಮುಚ್ಚಿದ್ದಾರೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ನ್ನೂ ಜನರು ಕೆಂಪು ಮಣ್ಣು ಹಾಕಿ ಮುಚ್ಚುತ್ತಾರೆ. ರಾಜ್ಯದ ಜನ ಕಾಂಗ್ರೆಸ್ ಆಡಳಿತದಿಂದ ಕೋಪಗೊಂಡಿದ್ದಾರೆ. ಈ ಬಾರಿಯ ಎರಡು ಸೀಟು ಮಾತ್ರವಲ್ಲ, ಮುಂದಿನ ಬಾರಿಯ ಚುನಾವಣೆಯಲ್ಲೂ ಕಾಂಗ್ರೆಸ್ ಸ್ಥಿತಿ ಗಂಭೀರವಾಗುತ್ತದೆ ಅನ್ನೋದು ಸಿದ್ದರಾಮಯ್ಯಗೆ ಮನದಟ್ಟಾಗಿದೆ. ಯಾಕೆಂದರೆ ಸರ್ಕಾರ ಕೆಟ್ಟ ಸ್ಥಿತಿಯಲ್ಲಿದೆ. ಫಲಿತಾಂಶ ಏನು ಬರಬಹುದೋ ಅಂತಾ ಸಿಎಂ ಊಟ, ತಿಂಡಿ ಬಿಟ್ಟಿದ್ದಾರೆ. ರಾಜ್ಯದಲ್ಲಿ ನಾವು ನಡೆದುಕೊಂಡ ರೀತಿ ಸರಿಯಾಗಿಲ್ಲ ಅಂತಾ ಅವರಿಗೆ ಮನದಟ್ಟಾಗಿದೆ ಎಂದರು.

ಒಳ ಮೀಸಲಾತಿಯನ್ನು ಹಾಳು ಮಾಡಿ ಎಲ್ಲಾ ಪರಿಶಿಷ್ಟ ಜಾತಿಯವರನ್ನು ಬೀದಿಯಲ್ಲಿ ನಿಲ್ಲಿಸಿರುವ ಕಾಂಗ್ರೆಸ್ಸಿಗೆ ದಲಿತರು ಯಾಕೆ ಓಟ್ ಹಾಕಬೇಕು. ಅವರ ಬಳಿ ಓಟ್ ಕೇಳುವ ಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ, ಬಸವರಾಜ ಬೊಮ್ಮಾಯಿಯವರು ಎಸ್ಸಿ-ಎಸ್ಟಿಗಳಿಗೆ ಸೂಕ್ತ ಮೀಸಲಾತಿ ಹೆಚ್ಚಿಸಿದ್ದರು. ಅದನ್ನೂ ಸರಿಯಾಗಿ ಈಗಿನ ಕಾಂಗ್ರೆಸ್ ಸರ್ಕಾರ ಪಾಲಿಸಲಿಲ್ಲ, ನ್ಯಾಯಾಲಯಕ್ಕೆ ಹೇಳಲು ಇವರಿಗೆ ಬುದ್ಧಿ ಇಲ್ಲ, ಪರಿಶಿಷ್ಟ ವರ್ಗಕ್ಕೆ ಜಾತಿ ಆಧಾರಿತವಾಗಿ ಮೀಸಲಾತಿ ಕೊಡಬೇಕು ಎಂಬುದು ಇದೆ. ಈ ಬಗ್ಗೆ ಪರಿಜ್ಞಾನವೇ ಕಾಂಗ್ರೆಸ್‌ಗೆ ಇಲ್ಲ ಎಂದು ಅವರು ದೂರಿದರು.

ಮಾಜಿ ಕೇಂದ್ರ ಸಚಿವ ಡಾ.ಜಿ.ಎಂ.ಸಿದ್ದೇಶ್ವರ್, ಮಾಜಿ ಸಚಿವ ಮುರುಗೇಶ ನಿರಾಣಿ ಸೇರಿದಂತೆ ಬಿಜೆಪಿ ಮುಖಂಡರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

## ಕಂದಾಯ ನಿರೀಕ್ಷಕ ಲೋಕಾಯುಕ್ತ ಬಲೆಗೆ

• **ದಾವಣಗೆರೆ:** ಜಮೀನು ಹದ್ದುಬಸ್ತಿಗೆ 50 ಸಾವಿರ ರೂ. ಲಂಚ ಪಡೆಯುವಾಗ ಕಂದಾಯ ನಿರೀಕ್ಷಕ ಲೋಕಾಯುಕ್ತ ಬಲೆಗೆ ಬಿದ್ದ ಘಟನೆ ನಗರದಲ್ಲಿ ನಡೆದಿದೆ.

ತಾಲೂಕು ಕಚೇರಿಯ ಕಂದಾಯ ನಿರೀಕ್ಷಕ ಚಂದ್ರಪ್ಪ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಅಧಿಕಾರಿ. ವೈದ್ಯ ಡಾ.ಉಮೇಶ್ ಹಿರೇಮಠ ಎಂಬುವರು ನಾಗನೂರು ಗ್ರಾಮದ ಸರ್ವೆ ನಂಬರ್ 158ರಲ್ಲಿ ಹೊಂದಿರುವ ಜಮೀನಿಗೆ ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಿಕಾಸವೇಶನಕ್ಕೆ ಅನುಮೋದನೆ ಪಡೆದಿದ್ದರು. ಆದರೆ, ಪಕ್ಕದ ಜಮೀನಿನವರು ಹದ್ದುಬಸ್ತು ಮಾಡಿಸದೆ ವಿಕಾಸವೇಶನ ಮಾಡಿಸಲು ತಕರಾರು ವ್ಯಕ್ತಪಡಿಸಿದ್ದರು. ಹೀಗಾಗಿ, ಉಮೇಶ್ ಹದ್ದುಬಸ್ತಿಗೆ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು.

ಜಮೀನು ಹದ್ದುಬಸ್ತು ವರದಿ ಮಾಡಿಕೊಡಲು ಕಂದಾಯ ನಿರೀಕ್ಷಕ ಚಂದ್ರಪ್ಪ ಮಾರ್ಚ್ 18ರಂದು ವೈದ್ಯರ ಖಾಸಗಿ ಆಸ್ಪತ್ರೆಗೆ ತೆರಳಿ, 50,000 ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅದರಂತೆ ಏ.4ರಂದು ಚಂದ್ರಪ್ಪ ತಮ್ಮ ಕಚೇರಿಯಲ್ಲಿ ದೂರುದಾರ ಡಾ.ಉಮೇಶ ಹಿರೇಮಠರಿಂದ 50,000 ರೂ. ಲಂಚದ ಹಣ ಸ್ವೀಕರಿಸುವಾಗ ಲೋಕಾಯುಕ್ತಕ್ಕೆ ಸಿಕ್ಕಿಬಿದ್ದಿದ್ದಾರೆ.

ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪೂರೆ ಮಾರ್ಗದರ್ಶನದಲ್ಲಿ ಪೊಲೀಸ್ ಉಪಾಧೀಕ್ಷಕಿ ಕಲಾವತಿ, ಪೊಲೀಸ್ ನಿರೀಕ್ಷಕರುಗಳಾದ ಗುರುಬಸವರಾಜ, ಪ್ರಭು ಬ.ಸೂರಿನ, ಪಿ.ಸರಳ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಆರೋಪಿಯನ್ನು ವಶಕ್ಕೆ ಪಡೆದಿರುವ ಲೋಕಾಯುಕ್ತ ಅಧಿಕಾರಿಗಳು, ಮುಂದಿನ ತನಿಖೆ ಕೈಗೊಂಡಿದ್ದಾರೆ.

## ದಾವಣಗೆರೆ ರಾಷ್ಟ್ರಮಟ್ಟದಲ್ಲಿ ಗುರುತಾಗಲು ಎಸ್ಸೆಸ್ ಕಾರಣ

• **ದಾವಣಗೆರೆ:** ರಾಷ್ಟ್ರಮಟ್ಟದಲ್ಲಿ ದಾವಣಗೆರೆಯನ್ನು ಗುರುತಿಸುವಂತಾಗಲು ದಿವಂಗತ ಶಾಮನೂರು ಶಿವಶಂಕರಪ್ಪ ಕಾರಣ. ಅವರ ಮೊಮ್ಮಗ ಸಮರ್ಥ್ ಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದು, ಸಮರ್ಥ್‌ಗೆ ಗೆಲ್ಲಿಸುವಂತೆ ಸಚಿವ ಎಂ.ಬಿ.ಪಾಟೀಲ್ ಮನವಿ ಮಾಡಿದರು.

ನಗರದಲ್ಲಿ ಭಾನುವಾರ ಕಾಂಗ್ರೆಸ್ ಅಭ್ಯರ್ಥಿ ಪರ ಚುನಾವಣಾ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಪಕ್ಷದವರು ಕಾಂಗ್ರೆಸ್ ಏನು ಮಾಡಿದೆ ಅಂತಾ ಕೇಳುತ್ತಾರೆ. ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದೇ

ಕಾಂಗ್ರೆಸ್ ಪಕ್ಷ. ಆಗ ಬಿಜೆಪಿಯವರು ಏನು ಮಾಡುತ್ತಿದ್ದರು? ಬ್ರಿಟೀಷರ ಏಜೆಂಟರಾಗಿ ಕೆಲಸ ಮಾಡುತ್ತಿದ್ದರು ಎಂದು ಟೀಕಿಸಿದರು.

ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಹಾಲಿ ಶಾಸಕರಾಗಿದ್ದವರು ಮೃತರಾದ ಹಿನ್ನೆಲೆಯಲ್ಲಿ ಉಭಯ ಕುಟುಂಬದ ಸಮರ್ಥ ಶಾಮನೂರು ಹಾಗೂ ಉಮೇಶ ಮೇಟಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ನಮ್ಮ ತಂದೆ ಬಿ.ಎಂ.ಪಾಟೀಲರು ನಿಧನರಾದ ನಂತರ ನಾನೂ ಹೀಗೆಯೇ ಅಭ್ಯರ್ಥಿಯಾಗಿ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕನಾದವನು ಎಂದು ಅವರು ಸಮರ್ಥಿಸಿಕೊಂಡರು.

ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ನೀಡಿದ್ದ



ಭರವಸೆ ಈಡೇರಿಸಿಲ್ಲ, ಬದಲು ಬೆಲೆ ಏರಿಕೆಯಾಗಿದೆ. ಕಪ್ಪು ಹಣ ತಂದು ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರೂ. ಹಾಕುತ್ತೇವೆ, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದಿದ್ದರು. ಶೋಭಕ್ಕಾ, ನಿರ್ಮಲಾ ಸೀತಾರಾಮನ್ ತಲೆ ಮೇಲೆ ಸಿಲಿಂಡರ್ ಹೊತ್ತು ಪ್ರತಿಭಟಿಸಿದ್ದರು. ಈಗ ಅಡುಗೆ ಅನಿಲ ದರ ಏರಿಕೆಯಾಗಿದ್ದರೂ ಏಕೆ ಮೌನವಾಗಿದ್ದಾರೆ? ಎಂದು ಅವರು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿದೆ. ನಮ್ಮ ಗ್ಯಾರಂಟಿಗಳನ್ನು ಟೀಕಿಸಿದ್ದರು. ನಾವು ಎಲ್ಲಾ ಗ್ಯಾರಂಟಿ ನೀಡುತ್ತಿದ್ದೇವೆ. ನಮ್ಮ ಗ್ಯಾರಂಟಿಗಳು ಬಡ, ಮಧ್ಯಮ ವರ್ಗದ ಕುಟುಂಬಗಳಿಗೆ ಆಸರೆಯಾಗಿವೆ. ಆದರೆ ಬಿಹಾರದಲ್ಲಿ ಚುನಾವಣೆಗೆ ಮುನ್ನ ಬಿಜೆಪಿಯವರು ಹಣ ಕೊಟ್ಟು, ನಂತರ ನಿಲ್ಲಿಸಿದರು. ಮಹಾರಾಷ್ಟ್ರದಲ್ಲಿ ಲಡಕಿ ಬೆಹನಾ ಯೋಜನೆಯಡಿ ಹಣ ನೀಡಿ, ನಿಲ್ಲಿಸಿದ್ದಾರೆ. ನಮ್ಮ ಸರ್ಕಾರವು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳನ್ನೂ ಮಾಡುತ್ತಿದೆ, ಪಂಚ ಗ್ಯಾರಂಟಿ ಯೋಜನೆಗಳನ್ನೂ ಜನರಿಗೆ ನೀಡುತ್ತಿದೆ ಎಂದು ಅವರು ನುಡಿದರು.

## ಇಂದು ಪ್ರತಿಭಟನೆ

**ಹೊಸದುರ್ಗ:** ತಾಲೂಕಿನಾದ್ಯಂತ ಶುದ್ಧ ಕುಡಿಯುವ ನೀರಿನ ಘಟಕಗಳ ಅವ್ಯವಸ್ಥೆ ಹಾಗೂ ಜಲ ಜೀವನ್ ಮಿಷನ್ ಕಾರ್ಯಕ್ರಮದಲ್ಲಿ ಆಗಿರುವ ಕಳಪೆ ಕಾಮಗಾರಿ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಸೋಮವಾರ ಬೆಳಗ್ಗೆ 10 ಗಂಟೆಗೆ ಹೊಸದುರ್ಗ ತಾಲ್ಲೂಕ್ ಪಂಚಾಯಿತಿಯ ಮುಂದೆ ಪ್ರತಿಭಟನೆ ಹಮ್ಮಿಕೊಂಡಿದ್ದು ಕಾರ್ಯಾಧ್ಯಕ್ಷರಾದ ಸಿದ್ದವೀರಪ್ಪ ಈಚಘಟ್ಟ ಹಾಗೂ ನಮ್ಮ ಜಿಲ್ಲಾಧ್ಯಕ್ಷರಾದ ಕೆ ಟಿ ತಿಪ್ಪೇಸ್ವಾಮಿ ಹಿರಿಯೂರು ಹಾಗೂ ತಾಲೂಕಿನ ಅನೇಕ ಸಂಘಟನೆಗಳು ಸೇರಿಕೊಂಡು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿವೆ. ಬೆಳಗ್ಗೆ 10 ಕ್ಕೆ ನಗರದ ಕೆನರಾ ಬ್ಯಾಂಕ್ ಸರ್ಕಲ್ಲಿಗೆ ತಾಲೂಕಿನ ರೈತರು ಹಾಗೂ ಮಹಿಳೆಯರು ಹಾಗೂ ನಾಗರಿಕರು ಬಂದು ಶುದ್ಧ ಕುಡಿಯುವ ನೀರಿನ ಘಟಕಗಳು ಕೆಲಸ ನಿರ್ವಹಿಸದೆ ಇದ್ದರೆ ಪೋಟೋ ತೆಗೆದುಕೊಂಡು ಹಾಗೂ ಅಲ್ಲಿನ ಪಿಡಿಒ ದೂರವಾಣಿ ಸಂಖ್ಯೆ ತೆಗೆದುಕೊಂಡು ಬರಬೇಕು. ಸಾರ್ವಜನಿಕರೆಲ್ಲರೂ ಈ ಕಾರ್ಯಕ್ರಮಕ್ಕೆ ಆಗಮಿಸಬೇಕು ಎಂದು ನಿರಂಜನ್ ನಾಗತಿಹಳ್ಳಿ ತಿಳಿಸಿದ್ದಾರೆ.



**ಮಲೇಬೆನ್ನೂರು ಪಟ್ಟಣದಲ್ಲಿ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬದ ಅಂಗವಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಮಲೇಬೆನ್ನೂರಿನಲ್ಲಿ ವಾತ್ಸಲ್ಯ ಯೋಜನೆ ಫಲಾನುಭವಿಗಳಿಗೆ ಹಣ್ಣು ವಿತರಣೆ ಮಾಡಲಾಯಿತು.**

# ಸಿದ್ಧಗಂಗಾದಲ್ಲಿ ರಾಜ್ಯಮಟ್ಟದ ಕ್ವಿಜ್‌ಸ್ಪರ್ಧೆ



• **ದಾವಣಗೆರೆ:** ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಎಂ.ಎಸ್.ಎಸ್ ಕ್ವಿಜ್ ಸ್ಪರ್ಧೆಗೆ ರಾಜ್ಯದ ನಾನಾ ಜಿಲ್ಲೆಗಳಿಂದ ಮಕ್ಕಳ ಮಹಾಪೂರ ಹರಿದು ಬಂದು ಅಭೂತಪೂರ್ವ ಯಶಸ್ಸು ಕಂಡಿತು.

ಬೀದರ್ ನಿಂದ ಚಾಮರಾಜನಗರದವರೆಗಿನ ಸುಮಾರು 8 ಸಾವಿರ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಆಗಮಿಸಿದ್ದರು. 10ನೇ ತರಗತಿ ಪರೀಕ್ಷೆ ಬರೆದ ಮಕ್ಕಳಿಗಾಗಿ ಪರೀಕ್ಷೆ ಮುಗಿದ ನಂತರ ಪ್ರತೀ ವರ್ಷ ಏರ್ಪಡಿಸುವ ಈ ಲಿಖಿತ ಕ್ವಿಜ್ ಎರಡು ಹಂತಗಳಲ್ಲಿ ನಡೆಯಿತು.

ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಡಾ.ಎಂ.ಎಸ್.ಶಿವಣ್ಣನವರ ಗೌರವಾರ್ಥ ಕಳೆದ 12 ವರ್ಷಗಳಿಂದ ನಡೆಯುತ್ತಿರುವ ಕ್ವಿಜ್ ನಲ್ಲಿ ಪ್ರಥಮ ಬಹುಮಾನವಾಗಿ 50 ಸಾವಿರ, ದ್ವಿತೀಯ ಬಹುಮಾನ 25 ಸಾವಿರ, ತೃತೀಯ ಬಹುಮಾನ 10 ಸಾವಿರ ರೂ. ಮತ್ತು ತಲಾ 1 ಸಾವಿರದಂತೆ 10 ಸಮಾಧಾನಕರ ಬಹುಮಾನ ನೀಡಲಾಗುವುದು. ಜೊತೆಗೆ ಹೆಚ್ಚು ಅಂಕ ಗಳಿಸಿದ 100 ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ.

ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೋಜ, ಅಧ್ಯಕ್ಷ ಡಿ.ಎಸ್.ಪ್ರಶಾಂತ್, ಕಾರ್ಯದರ್ಶಿ ಡಿ.ಎಸ್.ಹೇಮಂತ್, ನಿರ್ದೇಶಕರಾದ ಡಾ.ಡಿ.ಎಸ್.ಜಯಂತ್, ಡಾ.ಪ್ರಿತೀಶ್ ಸೇರಿದಂತೆ ಸಿಬ್ಬಂದಿ ವರ್ಗದವರು ಕಾರ್ಯಕ್ರಮವನ್ನು ಅತ್ಯಂತ ಶಿಸ್ತಿನಿಂದ ಯಶಸ್ವಿಯಾಗಿ ನಿರ್ವಹಿಸಿದರು.



**ಮಲೇಬೆನ್ನೂರು ಸಮೀಪದ ನಿಟ್ಟೂರಿನಲ್ಲಿ ಭಾನುವಾರ ಶ್ರೀ ಆಂಜನೇಯಸ್ವಾಮಿ ರಥೋತ್ಸವ ವೈಭವದಿಂದ ನಡೆಯಿತು.**

## ಸಾಮಾನ್ಯಸಭೆಯಲ್ಲಿ ವಾಗ್ವಾದ



• **ಮಲೇಬೆನ್ನೂರು:** ಪಟ್ಟಣದ ಪುರಸಭೆ ಸಾಮಾನ್ಯಸಭೆಯಲ್ಲಿ ವ್ಯಕ್ತಿಯೊಬ್ಬ ಇ ಖಾತಾ ಮಾಡಿಕೊಡಲು ಆಗ್ರಹಿಸಿ ಆಕ್ಷೇಪಾರ್ಹ ಪದ ಬಳಕೆ ಮಾಡಿ ವಾಗ್ವಾದ ನಡೆಸಿದ ಘಟನೆ ನಡೆಯಿತು.

ಬಳಿಕ ಪೊಲೀಸರು ವ್ಯಕ್ತಿಯನ್ನು ಸಭೆಯಿಂದ ಹೊರಗೆ ಹಾಕಿ ಸಭೆ ನಡೆಯಲು ಅನುವು ಮಾಡಿಕೊಟ್ಟರು.

ಘಟನೆ ತಿಳಿದ ಸಾರ್ವಜನಿಕರು ಪೊಲೀಸರ ಜೊತೆ ವಾಗ್ವಾದ ನಡೆಸಿ ಕೈಕೈ ಮಿಲಾಯಿಸುವ ಹಂತಕ್ಕೆ ಹೋಯಿತು.

ಸದಸ್ಯ ಬೋವಿ ಶಿವು ಮಾತನಾಡಿ, ಇ ಖಾತಾ ವಿಳಂಬ, ತುರ್ತು ಕಾಮಗಾರಿ ಮಾಡಿಕೊಡಲು ಸದಸ್ಯರಿಗೆ ಆಗುತ್ತಿಲ್ಲ, ನಾವು ವಾರ್ಡುಗಳಲ್ಲಿ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತಿದೆ ಎಂದರು. ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಮುಖ್ಯಾಧಿಕಾರಿ ರವಿಪ್ರಕಾಶ್ ಅವ್ಯವಸ್ಥೆ ಸರಿಪಡಿಸುವುದಾಗಿ ಹೇಳಿದರು.

ಪ್ರಭಾರಿ ಅಧ್ಯಕ್ಷೆ ಅಕ್ಕಮ್ಮ ಭಾನುವಳ್ಳಿ ಸುರೇಶ, ಶಿವಕುಮಾರ, ಉಮೇಶ ಇದ್ದರು.

## ಕಿರುಸುದ್ದಿ

### ವಿದ್ಯುತ್ ಮೋಟಾರ್ ಕಳ್ಳತನ

• **ಚಿಕ್ಕಮಗಳೂರು:** ಮೂಡಿಗೆರೆ ತಾಲೂಕು ಕಿರುಗುಂದ ಗ್ರಾಮ ಪಂಚಾಯಿತಿ ಬೆಟ್ಟದಮನೆ ಗ್ರಾಮದ ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡಲು ಅಳವಡಿಸಲಾಗಿದ್ದ 50 ಸಾವಿರ ರೂ. ಮೌಲ್ಯದ 7.5 ಹೆಚ್‌ಪಿ ವಿದ್ಯುತ್ ಮೋಟಾರ್‌ನ್ನು ಕಳ್ಳರು ಅಪಹರಿಸಿದ್ದಾರೆ ಎಂದು ಪಿಡಿಓ ಪೊಲೀಸರಿಗೆ ದೂರು ನೀಡಿದ್ದಾರೆ.

### ಅಕ್ರಮ ಮರಳು ಸಾಗಾಟ: ಓರ್ವನ ಬಂಧನ

• **ಚಿಕ್ಕಮಗಳೂರು:** ತರೀಕೆರೆಯ ಗಾಂಧಿ ಪಾರ್ಕ್ ಬಳಿ ಅಕ್ರಮವಾಗಿ ಲಾರಿಯಲ್ಲಿ ಮರಳು ಸಾಗಿಸುವಾಗ ಪೊಲೀಸರು ದಾಳಿ ನಡೆಸಿ ದುಗ್ಲಾಪುರದ ಅಕ್ರಮ್ ಪಾಷಾ ಎಂಬಾತನನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ಮರಳನ್ನು ಭದ್ರಾ ನದಿ ತಟದಿಂದ ಪರವಾನಗಿ ಇಲ್ಲದೆ ತುಂಬಿಕೊಂಡು ಬರಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

### ಮಾನಸಿಕ ಅಸ್ವಸ್ಥ ನಾಪತ್ತೆ

• **ಚಿಕ್ಕಮಗಳೂರು:** ಕೌಂಟುಂಬಿಕ ಸಮಸ್ಯೆಯಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ಬಿ.ಟಿ.ರುದ್ರೇಶ್ ಎಂಬುವವರು ಕಾಣೆಯಾಗಿದ್ದಾರೆ ಎಂದು ಬಂಡಿಹಳ್ಳಿ ಗ್ರಾಮದ ತೀರ್ಥಕುಮಾರ್ ಎಂಬುವವರು ದೂರು ನೀಡಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

### ಯುವಕ ಆತ್ಮಹತ್ಯೆ



• **ಶೃಂಗೇರಿ:** ಬೇಗಾರ್ ಗ್ರಾಮ ಪಂಚಾಯಿತಿ ಬೋಳೂರಿನ ಯುವಕ ಋತ್ವಿಕ್ (22) ಶನಿವಾರ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರಿಗೆ ತಾಯಿ, ತಮ್ಮ ಇದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ, ಪ್ರಕರಣ ಸ್ಥಳೀಯ ಠಾಣೆಯಲ್ಲಿ ದಾಖಲಾಗಿದೆ.

### ಯುವತಿ ನಾಪತ್ತೆ

• **ಚಿಕ್ಕಮಗಳೂರು:** ಯುವತಿಯೊಬ್ಬಳು ಕಾಣೆಯಾಗಿರುವ ಬಗ್ಗೆ ನಗರದ ಮಹಿಳಾ ಠಾಣೆಯಲ್ಲಿ ದೂರು ದಾಖಲಾಗಿದೆ. ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿರುವ ನಗರದ ಗಜಾಲ ರೆಹಮಾನ್ ಕಾಣೆಯಾದ ಯುವತಿಯಾಗಿದ್ದು, ಅವರ ತಾಯಿ ಈ ಸಂಬಂಧ ದೂರು ಸಲ್ಲಿಸಿದ್ದಾರೆ.

ಬೆಂಗಳೂರಿನಲ್ಲೇ ವಾಸವಿದ್ದ ಗಜಾಲ ರೆಹಮಾನ್ ಮೊನ್ನೆ ಚಿಕ್ಕಮಗಳೂರಿನ ತಾಯಿ ಮನೆಗೆ ಬಂದಿದ್ದಾಗ ಮದುವೆ ವಿಚಾರ ಪ್ರಸ್ತಾಪಿಸಿದ ಕಾರಣ ಕೋಪಗೊಂಡ ಆಕೆ ಮದುವೆಯಾಗುವುದಿಲ್ಲ ಎಂದು ತಿಳಿಸಿದ್ದಾಳೆ ನಂತರ ಆಕೆ ನಾಪತ್ತೆಯಾಗಿದ್ದು, ಫೋನ್ ಸ್ವಿಚ್ ಆಫ್ ಆಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

### ಬಾಲ ಭವನದಿಂದ ಬಾಲಕಿ ನಾಪತ್ತೆ

• **ಚಿಕ್ಕಮಗಳೂರು:** ನಗರದ ಹೌಸಿಂಗ್‌ಬೋರ್ಡ್‌ನಲ್ಲಿರುವ ಬಾಲ ಭವನದಲ್ಲಿ ರಕ್ಷಣೆ ಪಡೆಯುತ್ತಿದ್ದ ಬಾಲಕಿಯೊಬ್ಬಳು ನಾಪತ್ತೆಯಾಗಿರುವುದಾಗಿ ಅಲ್ಲಿನ ಸಿಬ್ಬಂದಿ ಭಾಗ್ಯ ಎಂಬುವವರು ಪೊಲೀಸರಲ್ಲಿ ದೂರು ನೀಡಿದ್ದಾರೆ.

ಬಾಲಕಿಯು ಬಾಲ ಭವನದ ಟೆರೇಸ್‌ನಿಂದ ಬಟ್ಟೆ ತರುವುದಾಗಿ ನಿನ್ನೆ ಮಧ್ಯಾಹ್ನ ಹೋದಾಕೆ ವಾಪಾಸ್ ಬಾರದ ಕಾರಣ ಟೆರೇಸ್ ಮೇಲೆ ಹುಡುಕಾಡಿದ್ದು ಆಕೆ ಕಾಣಿಸಿಲ್ಲ, ಹೌಸಿಂಗ್ ಬೋರ್ಡ್ ಸುತ್ತಮುತ್ತ ಸಹ ಹುಡುಕಾಡಿದರೂ ಪತ್ತೆಯಾಗಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

### ಜೂಜಾಟ: ಓರ್ವನ ಬಂಧನ

• **ಚಿಕ್ಕಮಗಳೂರು:** ಮೂಡಿಗೆರೆ ಸಮೀಪ ಮುಗ್ರವಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಮಟ್ಕಾ ಜೂಜಾಡಿಸುತ್ತಿದ್ದ ದೀಕ್ಷಿತ್ ಎಂಬಾತನನ್ನು ಮೂಡಿಗೆರೆ ಪೊಲೀಸರು ಬಂಧಿಸಿ ಆತನಿಂದ 7000 ರೂ.ನಗದು ವಶಪಡಿಸಿಕೊಂಡಿದ್ದಾರೆ.

### ಮದ್ಯ ಮಾರಾಟ: ಬಂಧನ

• **ಚಿಕ್ಕಮಗಳೂರು:** ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಗೋಣೀಬೀಡು ಸಮೀಪದ ಅಂಗಡಿ ಗ್ರಾಮದ ಪದ್ಮನಾಭ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

### 8 ಜನರ ಬಂಧನ

• **ಚಿಕ್ಕಮಗಳೂರು:** ತೇಗೂರು ಗ್ರಾಮದ ಮೆಡಿಕಲ್ ಕಾಲೇಜು ಹಿಂಭಾಗದ ತಿಮ್ಮಾಳಮ್ಮ ದೇವಸ್ಥಾನದ ಮುಂಭಾಗ ಇಸ್ಪೀಟ್ ಜೂಜಾಡುತ್ತಿದ್ದ 8 ಜನರ ವಿರುದ್ಧ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅವರಿಂದ ಪಣಕ್ಕಿಟ್ಟಿದ್ದ 5500 ನಗದು ವಶಪಡಿಸಿ ಕೊಂಡಿದ್ದಾರೆ.



ಅಜ್ಜಂಪುರ ತಾಲೂಕ ಕಚೇರಿಯಲ್ಲಿ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು . ತಾಲೂಕು ದಡ್ಡಾಧಿಕಾರಿಗಳಾದ ವಿನಯ್ ಸಾಗರ್, ದಲಿತ ಮುಖಂಡರಾದ ಮಹೇಂದ್ರ ಸ್ವಾಮಿ, ಶಿವಣ್ಣ ಹೆಬ್ಬೂರು, ಪಟ್ಟಣ ಪಂಚಾಯಿತಿ ಸದಸ್ಯ ಅಣ್ಣಪ್ಪ ಶಾಂತವೀರಪ್ಪ ಮಧುಮಾಲತಿ, ಶಿವಮೂರ್ತಿ ಭಾಗವಹಿಸಿದ್ದರು.

## ಅನಂತಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವ

• **ಶೃಂಗೇರಿ:** ಅಡ್ಡಗದ್ದೆ ಗ್ರಾಮ ಪಂಚಾಯಿತಿಯ ಹೆಗ್ಗದ್ದೆ ಶ್ರೀ ಅನಂತ ಪದ್ಮನಾಭ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ಪುರುಷ ಸೂಕ್ತ ಹೋಮ ಮತ್ತಿತರ ಧಾರ್ಮಿಕ ಕಾರ್ಯಕ್ರಮ ಭಾನುವಾರ ಏರ್ಪಡಿಸಲಾಗಿತ್ತು.

ದೇವಸ್ಥಾನವನ್ನು ವಾರ್ಷಿಕೋತ್ಸವದ ಅಂಗವಾಗಿ ತಳಿರು ತೋರಣ, ಬಾಳೆ ಕಂಬ ಹಾಗೂ ರಂಗೋಲಿ ಹಾಕಿ ಶೃಂಗರಿಸಲಾಗಿತ್ತು.ಪುರೋಹಿತರಾದ ಹೊಸಕೊಪ್ಪ ಶಿವಸ್ವಾಮಿ ಶರ್ಮ ಹಾಗೂ ಶೃಂಗೇಶ್ವರ ಭಟ್ಟ ನೇತೃತ್ವದಲ್ಲಿ ಪುರುಷಸೂಕ್ತ ಹೋಮ ನಡೆಯಿತು. ಬೆಳಗ್ಗೆ 11 ಕ್ಕೆ ಹೋಮದ ಪೂರ್ಣಾಹುತಿ ನಡೆಯಿತು. ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ಮಾಡಲಾಯಿತು. ಮಾರ್ಕಾಂಡೇಯ, ಪಂಡರೀಶ, ಬಾಲಚಂದ್ರ ಭಟ್, ಶಿವಾನಂದರಾವ್, ಶಿವಶಂಕರ್ ಇತರರು ಇದ್ದರು.



ಕೊಟ್ಟಿಗೆಹಾರದಿಂದ ಧರ್ಮಸ್ಥಳ–ಹೊರನಾಡು ರಸ್ತೆ | ಹದಗೆಡುತ್ತಿರುವ ವಾತಾವರಣ

# ಹೆದ್ದಾರಿಯಲ್ಲಿ ಬೆಳೆಯುತ್ತಿರುವ ಕಸದ ರಾಶಿ

• **ಚಿಕ್ಕಮಗಳೂರು:** ಕೊಟ್ಟಿಗೆಹಾರದಿಂದ ಧರ್ಮಸ್ಥಳ-ಹೊರನಾಡು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಕಸದ ರಾಶಿ ದಿನೇ ದಿನೇ ಬೆಳೆಯುತ್ತಿದ್ದು, ವಾತಾವರಣವನ್ನು ಹದಗೆಡಿಸುತ್ತಿದೆ. ಸಂಬಂಧಪಟ್ಟ ಪ್ರಾಧಿಕಾರದವರು ಕೂಡಲೇ ಕಸ ಸುರಿಯುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಮಾಲಿನ್ಯ ನಿಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಗಳು ಕೇಳಿಬಂದಿವೆ.

ಬಿದ್ರಹಳ್ಳಿ ಕೆಎಸ್‌ಆರ್‌ಟಿಸಿ ಡಿಪೋ ಎದುರು ಹಾಗೂ ಮೂಡಿಗೆರೆಯ ಹ್ಯಾಂಡ್‌ಪೋಸ್ಟ್ ಸಮೀಪ ಕೃಷಿ ಸಂಶೋಧನಾ ಕೇಂದ್ರ ಮತ್ತು ತೋಟಗಾರಿಕಾ ಕಾಲೇಜು ಪ್ರದೇಶದಲ್ಲಿ ಅಕ್ರಮವಾಗಿ ಕಸ ಹಾಕಲಾಗುತ್ತಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಈ ಮಾರ್ಗವು ಪ್ರವಾಸೋದ್ಯಮದ ದೃಷ್ಟಿಯಿಂದ ಅತ್ಯಂತ ಪ್ರಮುಖವಾಗಿದ್ದು, ಪ್ರತಿದಿನ ಸಾವಿರಾರು ಭಕ್ತರು ಹಾಗೂ ಪ್ರವಾಸಿಗರು ಸಂಚರಿಸುತ್ತಾರೆ. ಆದರೆ ರಸ್ತೆ ಪಕ್ಕದಲ್ಲೇ ಕಸದ ದುರ್ವಾಸನೆ ಹರಡುವುದರಿಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಸಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.



ಸ್ಥಳೀಯರ ಹೇಳಿಕೆಯ ಪ್ರಕಾರ, ಕಸದ ಸಂಗ್ರಹಣೆ ವ್ಯವಸ್ಥೆ ಇದ್ದರೂ, ಕೆಲವರು ತಮ್ಮ ಮನೆಯ ಕಸವನ್ನು ಸರಿಯಾಗಿ ಕಸದ ಗಾಡಿಗಳಿಗೆ ನೀಡದೇ ರಾತ್ರಿ ವೇಳೆ ರಸ್ತೆ ಪಕ್ಕಕ್ಕೆ ತಂದು ಬಿಸಾಡುತ್ತಿರುವುದು ಸಮಸ್ಯೆಗೆ ಮುಖ್ಯ ಕಾರಣವಾಗಿದೆ.

ಮನೆ ಸ್ವಚ್ಛತೆಯನ್ನು ಹೇಗೆ ಕಾಪಾಡುತ್ತೇವೋ ಅದೇ ರೀತಿಯಲ್ಲಿ ನಮ್ಮ ಊರಿನ ಸ್ವಚ್ಛತೆಯನ್ನೂ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂಬುದನ್ನು ಸ್ಥಳೀಯರು ಅರಿತುಕೊಳ್ಳಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ದಿಗಂತ ವಿಶೇಷ

ಗ್ರಾಮದ ಸ್ವಚ್ಛತೆ ಕಾಪಾಡುವುದು ಕೇವಲ ಆಡಳಿತದ ಹೊಣೆಗಾರಿಕೆ ಮಾತ್ರವಲ್ಲ, ಅದು ಸ್ಥಳೀಯರ ಸಹಭಾಗಿತ್ವದಿಂದಲೇ ಸಾಧ್ಯ. ಆದರೆ ಕೆಲವರ ನಿರ್ಲಕ್ಷ್ಯದಿಂದ ಗ್ರಾಮದೆಲ್ಲೆಡೆ ಕಸದ ರಾಶಿಗಳು ಕಾಣಿಸಿಕೊಳ್ಳುತ್ತಿದ್ದು, ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಮಳೆಗಾಲದಲ್ಲಿ ಈ ಕಸ ಇನ್ನಷ್ಟು ಹರಡಿ ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗುವ ಭೀತಿ ಇದೆ.

ಕೃಷಿ ಸಂಶೋಧನಾ ಕೇಂದ್ರ ಹಾಗೂ ಆರ್ಟಿಕಲ್ಚರ್ ಕಾಲೇಜು ಸುತ್ತಮುತ್ತಲಿನ ಪ್ರದೇಶದಲ್ಲಿಯೇ ಇಂತಹ ಅಸ್ವಚ್ಛತೆ ಕಂಡುಬರುವುದು ವಿಷಾದನೀಯ ಸಂಗತಿಯಾಗಿದೆ. ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗೂ ಇದರಿಂದ ತೊಂದರೆ ಉಂಟಾಗಿದೆ.

> ಕಸದ ವಾಹನ ಮನೆಮನೆಗೂ ಹೋಗುತ್ತಿದೆ. ಆದರೂ ಕೆಲವರು ಮಧ್ಯರಾತ್ರಿ ವೇಳೆ ಕಸವನ್ನು ರಸ್ತೆ ಪಕ್ಕಕ್ಕೆ ತಂದು ಹಾಕುತ್ತಿದ್ದಾರೆ. ಸ್ಥಳೀಯರು ಸಹಕರಿಸಬೇಕು. ಇನ್ನೆರಡು ದಿನಗಳಲ್ಲಿ ಸಂಪೂರ್ಣ ಸ್ವಚ್ಛತೆ ಕಾರ್ಯ ಕೈಗೊಳ್ಳಲಾಗುತ್ತದೆ.
>
> ■ ದುಗ್ಗಮ್ಮ, ಪಿಡಿಒ

> ಗ್ರಾಮದ ಸ್ವಚ್ಛತೆ ಕಾಪಾಡಲು ಸ್ಥಳೀಯರ ಸಹಕಾರ ಅತ್ಯಗತ್ಯ. ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
>
> ■ ದಯಾವತಿ, ತಾ.ಪಂ. ಇಒ

ಮನೆ ಹೇಗೆ ಸ್ವಚ್ಛವಾಗಿಟ್ಟುಕೊಳ್ಳುತ್ತೇವೋ, ಹಾಗೆಯೇ ನಮ್ಮ ಊರನ್ನೂ ಸ್ವಚ್ಛವಾಗಿಡುವುದು ನಮ್ಮೆಲ್ಲರ ಕರ್ತವ್ಯ. ಸ್ಥಳೀಯರು ಜವಾಬ್ದಾರಿಯುತವಾಗಿ ನಡೆದುಕೊಂಡರೆ ಮಾತ್ರ ಗ್ರಾಮ ಸುಂದರವಾಗಿರಲು ಸಾಧ್ಯ. ಕಸವನ್ನು ಅಕ್ರಮವಾಗಿ ರಸ್ತೆ ಪಕ್ಕಕ್ಕೆ ಹಾಕದೇ, ಸರಿಯಾದ ವ್ಯವಸ್ಥೆಗೆ ಒಪ್ಪಿಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಬೇಕಿದೆ ಎಂದು ಸುತ್ತಲ ಗ್ರಾಮಸ್ಥರು ಹೇಳುತ್ತಾರೆ.

ಸಾರ್ವಜನಿಕರು ಸಮಸ್ಯೆ ಬಗ್ಗೆ ಮೂಡಿಗೆರೆ ತಹಶೀಲ್ದಾರ್ ಅಶ್ವಿನಿ ಅವರ ಗಮನಕ್ಕೆ ತಂದು ಕಸ ಸುರಿಯುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿರುವ ಅವರು, ಸ್ಥಳ ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ. ಸಾರ್ವಜನಿಕರು ಸಹ ಜವಾಬ್ದಾರಿಯುತವಾಗಿ ವರ್ತಿಸಬೇಕು ಎಂದು ತಿಳಿಸಿದ್ದಾರೆ.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ. ಮಂಜೇಗೌಡ ಬಣ್ಣನೆ

# ಬಾಬೂಜಿ ಬದುಕು ದಾರಿದೀಪ

• **ಚಿಕ್ಕಮಗಳೂರು:** ಹಸಿರು ಕ್ರಾಂತಿಯ ರೂವಾರಿ, ಅಸಮಾನತೆಯ ವಿರುದ್ಧ ಹೋರಾಟ ಕಟ್ಟಿದ ಡಾ.ಬಾಬು ಜಗಜೀವನ್ ರಾಮ್ ಬದುಕು ಇಂದಿನ ಯುವಜನತೆಗೆ ದಾರಿದೀಪ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಮಂಜೇಗೌಡ ಬಣ್ಣಿಸಿದರು.

ನಗರದ ಕುವೆಂಪು ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್‌ರಾಮ್‌ರವರ 119ನೇ ಜನ್ಮ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಾಬೂಜಿ ಅವರು ಕೇವಲ ಒಬ್ಬ ರಾಜಕಾರಣಿಯಲ್ಲ, ಅವರು ಈ ದೇಶದ ರೈತರು, ಕಾರ್ಮಿಕರು ಮತ್ತು ದಲಿತರ ಧ್ವನಿಯಾಗಿದ್ದರು. ಸ್ವಾತಂತ್ರ್ಯ ಹೋರಾಟದಿಂದ ಹಿಡಿದು, ದೇಶದ ರಕ್ಷಣಾ ಸಚಿವರಾಗಿ ಮತ್ತು ಉಪಪ್ರಧಾನಿಯಾಗಿ ಅವರು ನೀಡಿದ ಕೊಡುಗೆ ಅಪಾರ ಎಂದು ತಿಳಿಸಿದರು.

ವಿದ್ಯಾರ್ಥಿ ದೆಸೆಯಿಂದಲೇ ದೇಶದ ಸ್ವಾತಂತ್ರ್ಯಕ್ಕಾಗಿ ಮಹಾತ್ಮ ಗಾಂಧೀಜಿಯವರೊಂದಿಗೆ ಹೋರಾಡಿದ ಮಹಾನ್ ನಾಯಕ ಬಾಬೂಜೀ ಎಂದು ಸ್ಮರಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ಮಾತನಾಡಿ, ಸಾಮಾನ್ಯ ಕುಟುಂಬದಲ್ಲಿ ಜನಿಸಿ ದೇಶದ ಅತ್ಯುನ್ನತ ಸ್ಥಾನಕ್ಕೇರಿದ ಡಾ. ಬಾಬು ಜಗಜೀವನ್ ರಾಮ್ ಶೋಷಿತ ಸಮುದಾಯಗಳಿಗೆ ಸದಾ ದಾರಿದೀಪವಾಗಿದ್ದಾರೆ ಎಂದರು.

ಬಾಬೂಜಿಯವರು ವಿದ್ಯಾರ್ಥಿ ಜೀವನದಲ್ಲೇ ಅಸ್ಪೃಶ್ಯತೆಯಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತಿದ್ದರು. ಶಾಲಾ ದಿನಗಳಲ್ಲಿ ಮಡಕೆ ಒಡೆದು ಪ್ರತಿಭಟಿಸುವ ಮೂಲಕ ತಮ್ಮ ಧೈರ್ಯವನ್ನು ಪ್ರದರ್ಶಿಸಿದ್ದರು. ವಾರಣಾಸಿಯಂತಹ ಕಡೆಗಳಲ್ಲಿ ಶೋಷಣೆಗೆ ಒಳಗಾದರೂ, ಛಲ ಬಿಡದೆ ಕೊಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಬಾಬೂಜಿಯವರ ಹಾದಿ ನಮಗೆಲ್ಲರಿಗೂ ಪ್ರೇರಣೆ.



> ದೇಶವು ಆಹಾರದ ಕ್ಷಾಮ ಎದುರಿಸುತ್ತಿದ್ದ ಸಂದರ್ಭದಲ್ಲಿ ಕೃಷಿ ಮಂತ್ರಿಯಾಗಿ ರೈತರಿಗೆ ಧೈರ್ಯ ತುಂಬಿ, ಹಸಿರು ಕ್ರಾಂತಿಯ ಮೂಲಕ ಭಾರತವನ್ನು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಭಾರತ ಮತ್ತು ಪಾಕಿಸ್ತಾನದ ಯುದ್ಧದ ಸಮಯದಲ್ಲಿ ರಕ್ಷಣಾ ಸಚಿವರಾಗಿ ದೇಶಕ್ಕೆ ಗೆಲುವು ತಂದುಕೊಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.
>
> ■ ಹೆಚ್.ಪಿ. ಮಂಜೇಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಅವರ ಜೀವನದ ಛಲ ನಮ್ಮ ಮೆದುಳಿನಲ್ಲಿ ಶಾಶ್ವತವಾಗಿ ದಾಖಲಾಗಬೇಕು ಎಂದರು.

ಹಸಿವು ಮುಕ್ತ ಭಾರತದ ಕನಸು ಕಂಡಿದ್ದ ಡಾ. ಬಾಬು ಜಗಜೀವನ್ ರಾಂ ಅವರ ಆಶಯದಂತೆ ಬಡತನ ನಿರ್ಮೂಲನೆ ಮಾಡುವುದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಎಸ್.ಜಿ.ಶಿವಪ್ರಸಾದ್ ಉಪನ್ಯಾಸ ನೀಡಿ, ಭಾರತದಲ್ಲಿ ಸಮಾನತೆ ತರಲು ಹೋರಾಡಿದ ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ್ ರಾಮ್ ಎಂಬ ಇಬ್ಬರು ಮಹಾನ್ ಚೇತನಗಳು ಜನ್ಮ ತಾಳಿದ ಈ ತಿಂಗಳು ಶೋಷಿತ ಸಮಾಜಕ್ಕೆ ಅತ್ಯಂತ ಮಹತ್ವವಾದದ್ದು ಎಂದು ಹೇಳಿದರು.

ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಮ್- ಈ ಇಬ್ಬರ ಮಾರ್ಗಗಳು ಭಿನ್ನವಾಗಿದ್ದರೂ, ಅವರ ಅಂತಿಮ ಗುರಿ ಶೋಷಣೆಯ ವಿರುದ್ಧದ ಹೋರಾಟ ಮತ್ತು ಸಮಾನತೆಯ ಸ್ಥಾಪನೆಯೇ ಆಗಿತ್ತು. ಶೋಷಿತ ಅಥವಾ ದಲಿತ ಸಮಾಜ ಎಂಬುದು ಏಕರೂಪವಲ್ಲ, ಅದು ಸಂಕೀರ್ಣತೆಯಿಂದ ಕೂಡಿದೆ. ಅಲ್ಲಿರುವ ಸಮಸ್ಯೆಗಳೂ ಸಹ ಏಕರೂಪವಲ್ಲ, ಆದ್ದರಿಂದ ಪ್ರತಿ ಶೋಷಿತ ಸಮುದಾಯದ ಸಮಸ್ಯೆಗಳನ್ನು ಅರ್ಥೈಸಿಕೊಂಡು, ಹೊಸ ಮಾನಸಿಕ ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹೆಚ್.ಎಸ್.ಕೀರ್ತನಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಟಿ.ಜಯಕುಮಾರ್, ನಗರಸಭೆ ಆಯುಕ್ತ ಬಿ.ಸಿ.ಬಸವರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸಿ.ರಮೇಶ್, ತಹಸೀಲ್ದಾರ್ ರೇಷ್ಮಾ ಶೆಟ್ಟಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ವಿವಿಧ ಸಮುದಾಯಗಳ ಮುಖಂಡರು ಕಾರ್ಯಕ್ರಮದಲ್ಲಿದ್ದರು. ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಬಿ.ಮಾಲತಿ ಸ್ವಾಗತಿಸಿದರು.

# ಮಾನಸಿಕ ದೃಢತೆಗೆ ಕ್ರೀಡೆ ಸಹಕಾರಿ

• **ಬಾಳೆಹೊನ್ನೂರು:** ಮಾನಸಿಕ ದೃಢತೆಗೆ ಕ್ರೀಡೆ ಸಹಕಾರಿಯಾಗಿದ್ದು, ಪ್ರತಿಯೊಬ್ಬರು ಕ್ರೀಡೆಯಲ್ಲಿ ತೊಡಗಿಸಿಕೊಂಡು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಠಾಣಾಧಿಕಾರಿ ಅಂಬರೀಶ್ ತಿಳಿಸಿದರು.

ಕಲಾರಂಗ ಕ್ರೀಡಾಂಗಣದಲ್ಲಿ ಪ್ರಜ್ವಲ್ ಗೌಡ ಗೆಳೆಯರ ಬಳಗ ಹಾಗೂ ಚಿಕ್ಕಮಗಳೂರಿನ ಕಾಫಿ ಲ್ಯಾಂಡ್ ಕ್ಲಬ್ ನವರು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಫುಟ್ಬಾಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ದುಶ್ಚಟಕ್ಕೆ ದಾಸರಾಗದೆ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಕ್ರೀಡೆಯಲ್ಲಿ ಸಾಮರಸ್ಯವನ್ನು ಕಾಪಾಡಿಕೊಂಡು ಸೋತವರು ಕುಗ್ಗದೆ, ಗೆದ್ದವರು ಹಿಗ್ಗದೆ ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಬೇಕು ಪ್ರತಿಯೊಬ್ಬರು ಕ್ರೀಡಾ ನಿಯಮವನ್ನು ಪಾಲಿಸಬೇಕೆಂದು ಕರೆ ನೀಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ರವಿಚಂದ್ರ ಮಾತನಾಡಿ, ಇದೇ ಮೊದಲ ಬಾರಿಗೆ ಪಟ್ಟಣದಲ್ಲಿ ಫುಟ್ಬಾಲ್ ಪಂದ್ಯಾವಳಿಯನ್ನು ಏರ್ಪಡಿಸಿರುವುದು ದಿಟ್ಟ ಹೆಜ್ಜೆಯಾಗಿದೆ. ಕ್ರೀಡಾಂಗಣದಲ್ಲಿ ಕ್ರಿಕೆಟ್, ಖೋ ಖೋ, ವಾಲಿಬಾಲ್ ಪಂದ್ಯಾವಳಿಗಳು ನಡೆಯುತ್ತದೆ. ನನ್ನ ಅಧ್ಯಕ್ಷರ ಅವಧಿಯಲ್ಲಿ ಇರುವ ಕ್ರೀಡಾಂಗಣವನ್ನು ಸ್ವಚ್ಛ ಗೊಳಿಸಿ ಆಟಗಾರರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದರು.

ಚಲನ ಚಿತ್ರ ಕಲಾವಿದ ಕಾಫಿ ಗಿರೀಶ್ ಮಾತನಾಡಿ, ಹಳ್ಳಿ ಹಳ್ಳಿಯಲ್ಲೂ ಕ್ರಿಕೆಟ್ ಆಟದ ಅಬ್ಬರವಿರುವಾಗ ಫುಟ್ಬಾಲ್ ಪಂದ್ಯಾವಳಿಯನ್ನು ಏರ್ಪಡಿಸಿರುವುದು ಸಮಯೋಚಿತವಾಗಿದೆ ಎಂದು ತಿಳಿಸಿದರು.

ಹಿರಿಯ ಕ್ರಿಕೆಟ್ ಆಟಗಾರ ಯಜ್ಞಪುರುಷ ಭಟ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಗೆಳೆಯರ ಬಳಗದ ಪ್ರಜ್ವಲ್ ಗೌಡ ಅಧ್ಯಕ್ಷತೆ ವಹಿಸಿದ್ದರು. ಕೊಪ್ಪದ ಕೀರ್ತನ್, ನಿಶ್ಚಿತ್ , ಕೃಷ್ಣಪ್ಪ, ಸುರೇಶ್, ರಘು, ವೀಕ್ಷಕ ವಿವರಣೆಗಾರ ಸಚಿನ್ ಸೇರಿದಂತೆ ನೂರಾರು ಜನ ಪಂದ್ಯಾವಳಿಯಲ್ಲಿ ಭಾಗವಹಿಸಿದರು. ಅರಳಿಕೊಪ್ಪ ಜಗದೀಶ್ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.



ಕೆಟ್ಟು ಹೋದ ಇನ್ವರ್ಟರ್ ಮತ್ತು ಕುಡಿಯುವ ನೀರಿನ ಫಿಲ್ಟರ್ | ಸಿಬ್ಬಂದಿಗಳಿಗೆ 5 ತಿಂಗಳಿಂದ ಸಂಬಳವಿಲ್ಲ

# ಸಮಸ್ಯೆಗಳ ಸರಮಾಲೆ ಹೊತ್ತ ಶಾರದಾ ನಗರದ ಇಂದಿರಾ ಕ್ಯಾಂಟೀನ್

ರಮೇಶ್, ಕರುವಾನೆ

• **ಶೃಂಗೇರಿ:** ಪಟ್ಟಣದ ಎರಡನೇ ವಾರ್ಡಿನ ಶಾರದಾ ನಗರದಲ್ಲಿರುವ ಇಂದಿರಾ ಕ್ಯಾಂಟೀನ್ ಹೊರ ನೋಟದಲ್ಲಿ ಸುಂದರವಾಗಿ ಕಾಣುತ್ತಿದ್ದರೂ ಕಟ್ಟಡದ ಒಳಗಿನ ವ್ಯವಸ್ಥೆ ಸರಿಯಿಲ್ಲದೆ ಸಮಸ್ಯೆಗಳ ಸರಮಾಲೆಯನ್ನೇ ಹೊತ್ತಿದೆ.

2018ರಲ್ಲಿ ಉದ್ಘಾಟನೆಗೊಂಡ ಇಂದಿರಾ ಕ್ಯಾಂಟೀನ್ ಪಟ್ಟಣ ಪಂಚಾಯಿತಿ ಉಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತಿತ್ತು. ಚಿಕ್ಕಮಗಳೂರಿನ ಕೃಷ್ಣೇಗೌಡ ಎಂಬುವವರು ಕ್ಯಾಂಟೀನ್ ನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿ ಒಟ್ಟು ನಾಲ್ಕು ಸಿಬ್ಬಂದಿಗಳು ದಿನನಿತ್ಯ ಕರ್ತವ್ಯ ನಿರ್ವಹಿಸುತ್ತಿದ್ದು ಒಬ್ಬರು ಅಡುಗೆ ತಯಾರಿಕರು ಒಬ್ಬರು ಸಹಾಯಕ ಸಿಬ್ಬಂದಿ ಹಾಗೂ ಇಬ್ಬರು ಮಹಿಳಾ ಸ್ವಚ್ಛತಾ ಸಿಬ್ಬಂದಿ ಇದ್ದಾರೆ.

**ಸೌದೆ ಒಲೆಯಿಂದ ಅಡುಗೆ ತಯಾರಿ:** ಅನಿಲ ಸಿಲಿಂಡರ್ ಸಮಸ್ಯೆ ತಲೆದೋರಿ ರುವುದರಿಂದ ಸೌದೆ ಒಲೆಯಲ್ಲಿ ಅಡುಗೆ ಮಾಡಲಾಗುತ್ತಿದೆ. ಪ್ರತಿನಿತ್ಯ ಬೆಳಗ್ಗೆ 7.30ರಿಂದ 10.30ರವರೆಗೆ ಟಿಫನ್ ಮಧ್ಯಾಹ್ನ 12.30ರಿಂದ 3 ಗಂಟೆಯವರೆಗೆ ಊಟ ರಾತ್ರಿ ಏಳು ಗಂಟೆಯಿಂದ ಒಂಭತ್ತು ಗಂಟೆಯವರೆಗೆ ಊಟ ನೀಡಲಾಗುತ್ತಿದೆ. ಬೆಳಗ್ಗೆ ಟಿಫನ್‌ನಿಗೆ ಸುಮಾರು 400 ಜನರು ಮಧ್ಯಾಹ್ನ 200 ಮಂದಿ ಊಟಕ್ಕೆ ಬರುತ್ತಿದ್ದು ರಾತ್ರಿ ಊಟ ಸುಮಾರು 70 ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಇಲ್ಲಿ ಯಾವುದೇ ದರವನ್ನು ಹೆಚ್ಚಿಸಿಲ್ಲ . ಟಿಫನ್ ಹಾಗೂ ಊಟಕ್ಕೆ ಪೂರ್ವ ನಿಗದಿತ ಆದೇಶದಂತೆ ದರ ಪಡೆಯಲಾಗುತ್ತದೆ.





**ಕೆಟ್ಟು ನಿಂತ ಯಂತ್ರಗಳು:** ಸ್ಟೀಮ್ ಬಾಯ್ಲರ್ ಕೆಟ್ಟು ಹೋಗಿದ್ದು ಗ್ಯಾಸ್ ಅನಿಲ ಸಿಲಿಂಡರ್ ಮೂಲಕ ಅಡುಗೆ ಮಾಡಲಾಗುತ್ತಿತ್ತು. ಈಗ ಗ್ಯಾಸ್ ಸಿಲಿಂಡರ್ ಕೊರತೆಯಿಂದ ಸೌದೆ ಬಳಸಿ ಅಡುಗೆ ತಯಾರಿ ಮಾಡಲಾಗುತ್ತಿದೆ. ಅನಿಯಮಿತ ವಿದ್ಯುತ್ ಸೌಲಭ್ಯಕ್ಕಾಗಿ ಇನ್ವರ್ಟರ್ ಹಾಳಾಗಿದೆ. ಇದನ್ನು ದುರಸ್ತಿ ಪಡಿಸಬೇಕಾಗಿದೆ. ಕುಡಿಯುವ ನೀರಿನ ಫಿಲ್ಟರ್ ಹಾಳಾಗಿದ್ದು, ಇದರಿಂದ ಗ್ರಾಹಕರಿಗೆ ತೊಂದರೆ ಉಂಟಾಗಿದೆ ಇದನ್ನು ಕೂಡ ದುರಸ್ತಿ ಪಡಿಸಬೇಕಾಗಿದೆ.

ದಿಗಂತ ವಿಶೇಷ

**ಐದು ತಿಂಗಳಿಂದ ಸಂಬಳವಿಲ್ಲ:** ಕ್ಯಾಂಟೀನ್‌ನಲ್ಲಿ ಕೆಲಸ ಮಾಡುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಕಳೆದ ಐದು ತಿಂಗಳಿನಿಂದ ಸಂಬಳ ಬಂದಿಲ್ಲ, ಈ ಬಗ್ಗೆ ಸರ್ಕಾರ ತುರ್ತು ಗಮನ ನೀಡಬೇಕಾಗಿದೆ.

**ಮೂಲಸೌಕರ್ಯಗಳ ಕೊರತೆ:** ಕ್ಯಾಂಟೀನ್ ಕಟ್ಟಡ ಸುಂದರವಾಗಿದ್ದರೂ ಕ್ಯಾಂಟೀನ್‌ನ 5 ಪ್ರವೇಶ ದ್ವಾರದಲ್ಲಿ ಒಂದು ದ್ವಾರ ಸಂಪೂರ್ಣ ಹಾಳಾಗಿದೆ. ಕಟ್ಟಡ ಮೇಲ್ಚಾವಣಿ ಶಿಥಿಲಾವಸ್ಥೆಗೆ ತಲುಪಿದ್ದು ಮಳೆಗಾಲದಲ್ಲಿ ಎಲ್ಲಾ ಕಡೆ ಸೋರುತ್ತಿದೆ. ಸಂಬಂಧಪಟ್ಟವರು ಕ್ಯಾಂಟೀನ್ ಸಮಸ್ಯೆ ಬಗ್ಗೆ ಗಮನಹರಿಸಬೇಕು ಎಂಬುದು ಗ್ರಾಹಕರ ಒತ್ತಾಯವಾಗಿದೆ.

> ಕ್ಯಾಂಟೀನ್‌ನಲ್ಲಿ ಹೊಟ್ಟೆಗೆ ಸಾಕಾಗುವಷ್ಟು ಊಟ ತಿಂಡಿ ಸಿಗುತ್ತಿದೆ. ರುಚಿ ಶುಚಿ ಚೆನ್ನಾಗಿದ್ದು ಆಹಾರ ಪಟ್ಟಿಯಲ್ಲಿ ಸ್ವಲ್ಪ ಬದಲಾವಣೆ ತರುವ ಮೂಲಕ ಇನ್ನಷ್ಟು ಸುಧಾರಣೆ ಮಾಡಬೇಕಿದೆ.
>
> ■ ಅಶೋಕ್, ಹಮಾಲಿ ಶೃಂಗೇರಿ.

## ಕಿರುಸುದ್ದಿ

### ಅಡಿಕೆ ಧಾರಣೆ

| ಶಿವಮೊಗ್ಗ | ಸಾಗರ |
| --- | --- |
| ಸರಕು-54,859-92,550 | ರಾಶಿ-23,105-31,105 |
| ರಾಶಿ-51,000-53,000 | ಚಾಲಿ-27,105-28,205 |
| ಬೆಟ್ಟೆ-65,009-65,009 | ಕೆಂಪುಗೋಟು-12,105-12,105 |
| ಗೊರಬಲು-19,005-32,000 | ಬಿಳೆಗೋಟು-10,105-11,205 |
| | ಸಿಪ್ಪೆಗೋಟು-8,919-22,630 |

## 33 ವರ್ಷಗಳ ನಂತರ ಬಂಧನ

• **ಶಿವಮೊಗ್ಗ:** ಕಳೆದ 33 ವರ್ಷಗಳಿಂದ ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಪ್ರಕರಣದಲ್ಲಿನ ಆರೋಪಿ ಬೆಂಗಳೂರಿನ ಇಟ್ಟಮಡು ನಿವಾಸಿ ವಿಘ್ನೇಶ (62)ನನ್ನು ಕೋಟೆ ಪೊಲೀಸರು ತಲಾಶ್ ಮಾಡಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ನ್ಯಾಯಾಲಯದ ವಿಚಾರಣೆಗೆ ಹಾಜರಾಗದಿದ್ದರಿಂದಾಗಿ ಬಂಧನ ವಾರೆಂಟ್ ಹೊರಡಿಸಲಾಗಿತ್ತು. ಕೋಟೆ ಠಾಣೆಯ ಪಿಐ ಹರೀಶ್ ಕೆ. ಪಟೇಲ್ ನೇತೃತ್ವದಲ್ಲಿ, ಪಿಎಸ್‌ಐ ಸಂತೋಷ್ ಭಾಗೋಜಿ, ಎಚ್‌ಸಿಗಳಾದ ಧನಂಜಯ್, ಚಂದ್ರು, ಅವನನ್ನು ಪತ್ತೆ ಮಾಡಿ ಬಂಧಿಸಿದ್ದಾರೆ.

## ಗೌರವಧನ ಪಡೆಯಲು ಅರ್ಜಿ

• **ಶಿವಮೊಗ್ಗ:** ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಜಿಲ್ಲೆಯಲ್ಲಿರುವ ನೋಂದಾಯಿತ ಬೌದ್ಧ ವಿಹಾರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಧರ್ಮಾಚಾರಿಗಳು ಮತ್ತು ಸಹಾಯಕ ಧರ್ಮಾಚಾರಿಗಳಿಗೆ ಮಾಸಿಕ ಗೌರವಧನವನ್ನು ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಜಿ ನಮೂನೆಯನ್ನು ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಏ.09ರೊಳಗಾಗಿ ಸಲ್ಲಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 08182-220206, ಅಲ್ಪಸಂಖ್ಯಾತರ ಜಿಲ್ಲಾ ಮಾಹಿತಿ ಕೇಂದ್ರ 7676888388, ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರ, ಭದ್ರಾವತಿ 9538853680, ತೀರ್ಥಹಳ್ಳಿ 8861982835, ಸೊರಬ 9513815513, ಶಿಕಾರಿಪುರ 7829136724, ಹೊಸನಗರ 9008447029, ಸಾಗರ 7338222907 ಸಂಪರ್ಕಿಸುವುದು.

## ಉಚಿತ ಮಹಿಳಾ ಟೈಲರಿಂಗ್ ತರಬೇತಿ ಶಿಬಿರ

• **ಶಿವಮೊಗ್ಗ:** ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ನಿರುದ್ಯೋಗಿ ಮಹಿಳೆಯರಿಗೆ 31 ದಿನಗಳ ಅವಧಿಯ ಉಚಿತ ಮಹಿಳಾ ಟೈಲರಿಂಗ್ ತರಬೇತಿ ಶಿಬಿರವನ್ನು ಏ. 17 ರಿಂದ ಪ್ರಾರಂಭಿಸಲಾಗುತ್ತಿದ್ದು, ಸ್ವಯಂ ಉದ್ಯೋಗಿಗಳಾಗಲು ಬಯಸುವ 18 ರಿಂದ 49 ವರ್ಷ ವಯಸ್ಸಿನ ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಯ ನಿರುದ್ಯೋಗಿ ಮಹಿಳೆಯರು ಈ ಶಿಬಿರದಲ್ಲಿ ಪಾಲ್ಗೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ಏ.8ರ ಬೆಳಗ್ಗೆ 9.30ಕ್ಕೆ ದಾಖಲಾತಿಗಳೊಂದಿಗೆ ಹಾಜರಿರಬೇಕು. ಸಂದರ್ಶನಕ್ಕೆ ಹಾಜರಾಗಲು ಅಸಾಧ್ಯವಾದಲ್ಲಿ ಏ.8 ರೊಳಗೆ 8970476050, 9591514154, 9686248369, 6363139123, 9505894247 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳುವಂತೆ ತಿಳಿಸಲಾಗಿದೆ.

## ಎಐ ಕುರಿತು ರಾಷ್ಟ್ರಮಟ್ಟದ ಕಾರ್ಯಾಗಾರ

• **ಶಿವಮೊಗ್ಗ:** ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಎಂಕಾಂ ವಿಭಾಗದಿಂದ ಕಾಲೇಜಿನ ಆವರಣದಲ್ಲಿ ಏ.8ರಂದು ಬೆಳಗ್ಗೆ 10.30ಕ್ಕೆ ಎ.ಐ. ವಿಭಾಗದಲ್ಲಿ ಉದಯೋನ್ಮುಖ ತಂತ್ರಜ್ಞಾನ ಮತ್ತು ವಾಣಿಜ್ಯ ಕುರಿತು ಒಂದು ದಿನದ ರಾಷ್ಟ್ರಮಟ್ಟದ ಕಾರ್ಯಾಗಾರ ಆಯೋಜಿಸಲಾಗಿದೆ.

ಕಾರ್ಯಾಗಾರವನ್ನು ಕುವೆಂಪು ವಿವಿ ಕುಲಸಚಿವ (ಮೌಲ್ಯಮಾಪನ) ಡಾ.ತಿಮ್ಮರಾಯಪ್ಪ ಉದ್ಘಾಟಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಕುವೆಂಪು ವಿ.ವಿ ಹಿರಿಯ ಪ್ರಾಧ್ಯಾಪಕ ಹಾಗೂ ಹಣಕಾಸು ಅಧಿಕಾರಿ ಪ್ರೊ.ಹೆಚ್. ಎನ್. ರಮೇಶ್, ಬೆಳಗಾವಿ ರಾಣಿ ಚೆನ್ನಮ್ಮ ವಿವಿ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಪ್ರೊ.ಆಕಾಶ್ ಎಸ್.ಬಿ., ಕುವೆಂಪು ವಿವಿ ನಿರ್ವಹಣಾ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಆರ್. ಹಿರೇಮಣಿ ನಾಯಕ್ ಭಾಗವಹಿಸುವರು. ಅಧ್ಯಕ್ಷತೆಯನ್ನು ಸಹ್ಯಾದ್ರಿ ವಾಣಿಜ್ಯ ಕಾಲೇಜಿನ ಪ್ರಾಂಶುಪಾಲ ಪ್ರೊ.ಅವಿನಾಶ್ ಟಿ. ವಹಿಸುವರು.

ಮಧ್ಯಾಹ್ನ 3.30ಕ್ಕೆ ಸಮಾರೋಪ ನಡೆಯಲಿದೆ. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕುವೆಂಪು ವಿವಿ ವಾಣಿಜ್ಯ ಕಾಲೇಜಿನ ಪ್ರಾಧ್ಯಾಪಕ ಪ್ರೊ. ವೆಂಕಟೇಶ್ ಎಸ್, ಪ್ರೊ.ಮಂಜುನಾಥ್ ಕೆ.ಆರ್, ಕಾಲೇಜಿನ ಪ್ರಾಧ್ಯಾಪಕರುಗಳಾದ ಪ್ರೊ.ಮಮತಾ ಎಸ್.ಎಂ., ಪ್ರೊ.ಗಿರಿಧರ್ ಕೆ.ವಿ., ಡಾ.ವೀರಪ್ಪ ಜಿ. ರಾಥೋಡ್, ಬಾಲಸ್ವಾಮಿ, ಡಾ.ಶಶಿರಾಜ್ ಯು., ಸಹ ಸಂಚಾಲಕಿ ಸರಳಾ ಕೆ.ಎಸ್. ಸೇರಿದಂತೆ ಬೋಧಕ ಮತ್ತು ಬೋಧಕೇತರ ವರ್ಗದವರು ಭಾಗವಹಿಸಲಿದ್ದಾರೆ.



## ಯುವಕರು ರಂಗಭೂಮಿಯಲ್ಲಿ ತೊಡಗಿರುವುದು ಆಶಾದಾಯಕ: ಮಾಯಪ್ಪ

• **ಚಂದ್ರಗುತ್ತಿ:** ಗ್ರಾಮೀಣ ಭಾಗದಲ್ಲಿ ಧಾರ್ಮಿಕ ಆಚರಣೆಗಳ ಜೊತೆಗೆ ಸಾಮಾಜಿಕ ನಾಟಕಗಳನ್ನು ಏರ್ಪಡಿಸುವ ಮೂಲಕ ಸುಪ್ತ ಕಲೆಗಳನ್ನು ಜೀವಂತವಾಗಿಸುವ ಯುವಕರ ಪ್ರಯತ್ನ ನಿಜಕ್ಕೂ ಶ್ಲಾಘನೀಯ ಎಂದು ಬೆಣ್ಣೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಾಯಪ್ಪ ತಿಳಿಸಿದರು.

ಸಮೀಪದ ಅಂಬ್ಳಿಕೊಪ್ಪ ಗ್ರಾಮದಲ್ಲಿ ಶ್ರೀಭೂತೇಶ್ವರ ಗೆಳೆಯರ ಬಳಗ ನಾಟ್ಯ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಸಾಮಾಜಿಕ ನಾಟಕದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಇಂದಿನ ಆಧುನಿಕ ಯುಗದಲ್ಲಿ ತಂತ್ರಜ್ಞಾನದ ಹಾವಳಿಯಿಂದಾಗಿ ನಾಟಕ ಕಲೆಗಳು ಸೊರಗುತ್ತಿವೆ. ಇಂತಹ ಸಂಕಷ್ಟದ ಕಾಲದಲ್ಲೂ ಗ್ರಾಮೀಣ ಭಾಗದ ಯುವಕರು ಸಂಘಟಿತರಾಗಿ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿಕೊಡುವ ಇಂತಹ ಪ್ರಯತ್ನಗಳು ನಿರಂತರವಾಗಿ ನಡೆಯಬೇಕು ಎಂದು ಹೇಳಿದರು.

ಕಲಾವಿದರ ಪರಿಶ್ರಮಕ್ಕೆ ಸಾರ್ಥಕತೆ ಸಿಗುವುದು ಪ್ರೇಕ್ಷಕರಿಂದ ಮಾತ್ರ. ಸಾರ್ವಜನಿಕರು ನಾಟಕಗಳನ್ನು ಸಂಪೂರ್ಣವಾಗಿ ವೀಕ್ಷಿಸಿ, ಕಲಾವಿದರನ್ನು ಪ್ರೋತ್ಸಾಹಿಸುವ ಮೂಲಕ ಕಲೆ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಲು ಬೆನ್ನೆಲುಬಾಗಿ ನಿಲ್ಲಬೇಕು ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರಿಯಪ್ಪ ನೆರವೇರಿಸಿದರು. ಕನ್ನಪ್ಪ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಸಮಿತಿ ಅಧ್ಯಕ್ಷ ಕುಮಾರ್, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಮಂಜುನಾಥ್ ನಾಯ್ಕ, ಸದಸ್ಯರಾದ ಚಂದ್ರಕಲಾ, ವಿನಾಯಕ್ ಹೆಗಡೆ , ಪ್ರಮುಖರಾದ ಗಣಪತಿ, ಪರಶುರಾಮ್, ಹಾಲಪ್ಪ, ಕೈ.ಬಿ. ತಿಮ್ಮಪ್ಪ, ಸಣ್ಣಪ್ಪ, ಈರಪ್ಪಯ್ಯ, ನಾರಾಯಣಪ್ಪ, ಮುತ್ತಪ್ಪ ಉಪಸ್ಥಿತರಿದ್ದರು.

### ಬಿದನೂರಿನಿಂದ ಆರಂಭಗೊಂಡ ಪಾದಯಾತ್ರೆ | ಮೂಲೆಗದ್ದೆ ಮಠದ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ

# ಆಡಳಿತಾತ್ಮಕ ಸುವ್ಯವಸ್ಥೆಗೆ ಪ್ರತ್ಯೇಕ ಕ್ಷೇತ್ರ ರಚನೆಯೇ ಪರಿಹಾರ

• **ಹೊಸನಗರ:** ಹೊಸನಗರ ವಿಧಾನಸಭಾ ಕ್ಷೇತ್ರವನ್ನು ಪುನರ್‌ಸ್ಥಾಪನೆಗೆ ಬೇಡಿಕೆ ಸಲ್ಲಿಸುವ ಹಕ್ಕು ಇಲ್ಲಿನ ಜನತೆಗಿದೆ. ಮುಳುಗಡೆಯಿಂದ ಬದುಕು ಕಳೆದುಕೊಂಡ ಜನತೆಗೆ ಆಡಳಿತಾತ್ಮಕ ಸುವ್ಯವಸ್ಥೆ ಸಿಗುವಂತಾಗಲು ಪ್ರತ್ಯೇಕ ಕ್ಷೇತ್ರ ರಚನೆಯೇ ಪರಿಹಾರವಾಗಿದೆ ಎಂದು ಹೊಸನಗರ ವಿಧಾನಸಭಾ ಕ್ಷೇತ್ರ ಪುನರ್‌ರಚನಾ ಸಮಿತಿ ಅಧ್ಯಕ್ಷರು ಹಾಗೂ ಮೂಲೆಗದ್ದೆ ಮಠದ ಶ್ರೀ ಅಭಿನವ ಚನ್ನಬಸವ ಸ್ವಾಮೀಜಿ ಹೇಳಿದರು.

ತಾಲೂಕಿನ ಬಿದನೂರು ನಗರದಿಂದ ಭಾನುವಾರ ಆರಂಭಗೊಂಡ ಪಾದಯಾತ್ರೆಯ ಮೊದಲ ದಿನದ ಸಭೆಯಲ್ಲಿ ಮಾತನಾಡಿದರು.

ಹೊಸನಗರದ ಜನತೆ ಒಂದಲ್ಲಾ ಒಂದು ಸಂಕಷ್ಟ ಅನುಭವಿಸುತ್ತಲೇ ಬಂದಿದ್ದಾರೆ. ಕಳೆದ 25 ವರ್ಷಗಳ ಹಿಂದೆ ಕ್ಷೇತ್ರವನ್ನೂ ಕಳೆದುಕೊಂಡಿದ್ದೇವೆ. ತಾಲೂಕನ್ನು ಇಬ್ಭಾಗ ಮಾಡಿ ಎರಡು ಕ್ಷೇತ್ರಗಳಿಗೆ ಹಂಚಿರುವುದು ಅನ್ಯಾಯ. ಈಗ ಕಾಲ ಕೂಡಿಬಂದಿದೆ. ನಮ್ಮ ಧ್ವನಿ ಗಟ್ಟಿಯಾಗಬೇಕಿದೆ. ಹೊಸನಗರ ವಿಧಾನಸಭಾ ಕ್ಷೇತ್ರ ರಚನೆ ಆಗುವವರೆಗೂ ಹೋರಾಟದ ನಿರಂತರತೆ ಕಾಪಾಡಿಕೊಳ್ಳಬೇಕಿದೆ. ಸಾರ್ವಜನಿಕರು ಭಿನ್ನಭೇದ ಮರೆತು ಪಾಲ್ಗೊಳ್ಳಬೇಕೆಂದು ಅವರು ಕರೆ ನೀಡಿದರು.

ಶಾಸಕ ಆರಗ ಜ್ಞಾನೇಂದ್ರ ಮಾತನಾಡಿ, 2008ರ ಮೊದಲು ನಡೆದ ಕ್ಷೇತ್ರ ಮರುವಿಂಗಡಣೆ ಸಂದರ್ಭದಲ್ಲಿಯೇ ತಮಗೆ ಆಡಳಿತಾತ್ಮಕ ಸಮಸ್ಯೆ ಆಗುವ ಮುನ್ಸೂಚನೆ ಸಿಕ್ಕಿತ್ತು. ನಾವು ಹಾಗೂ ಕಾಗೋಡು ತಿಮ್ಮಪ್ಪ ಹೊಸನಗರ ಕ್ಷೇತ್ರ ರದ್ದುಗೊಳಿಸುವ ತೀರ್ಮಾನವನ್ನು ವಿರೋಧಿಸಿದ್ದೆವು. ಆದರೆ ಅಂದಿನ ಆಯೋಗ ನಮ್ಮ ಅಹವಾಲನ್ನು ಮಾನ್ಯ ಮಾಡಲಿಲ್ಲ, ಕೇಂದ್ರ ಸರಕಾರ ಈಗ ಪುನರ್ ವಿಂಗಡಣೆಗೆ ಮುಂದಾಗಿದೆ. ವಿಶೇಷ ಲೋಕಸಭಾ ಅಧಿವೇಶನ ಸಹ ನಡೆಯಲಿದೆ. ಮತ್ತೊಮ್ಮೆ ಕ್ಷೇತ್ರ ಪುನರ್‌ರಚನೆ ಆಗುವ ವಿಶ್ವಾಸವಿದೆ ಎಂದರು.





> ತಾಲೂಕು ಭೌಗೋಳಿಕವಾಗಿ ವಿಸ್ತಾರವಾಗಿದೆ. ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ನಮ್ಮದಲ್ಲದ ತಪ್ಪಿಗೆ ಮುಳುಗಡೆ ಸಮಸ್ಯೆ ಅನುಭವಿಸಿದ್ದೇವೆ. ಇದರಿಂದಾಗಿಯೇ ಇಲ್ಲಿ ಜನಸಂಖ್ಯೆ ಕಡಿಮೆಯಾಗಿದೆ. ಇದನ್ನೇ ಕಾರಣವಾಗಿಟ್ಟುಕೊಂಡು ನಮ್ಮ ಬೇಡಿಕೆ ತಿರಸ್ಕರಿಸುವುದು ನ್ಯಾಯವಲ್ಲ.
>
> ■ **ಶ್ರೀ ಅಭಿನವ ಚೆನಬಸವ ಸ್ವಾಮೀಜಿ, ಮೂಲೆಗದ್ದೆ ಮಠ**

ಶಾಸಕ ಬೇಳೂರು ಗೋಪಾಲಕೃಷ್ಣ ಮಾತನಾಡಿ, ಹೊಸನಗರ ಕ್ಷೇತ್ರ ಹೋರಾಟಕ್ಕೆ ತಮ್ಮ ಸಂಪೂರ್ಣ ಸಹಮತವಿದೆ. ಒಂದು ತಾಲೂಕು ಎರಡು ಕ್ಷೇತ್ರಗಳಿಗೆ ಹಂಚಿ ಹೋಗಿರುವುದರಿಂದ ಕೇವಲ ಜನತೆಗಷ್ಟೇ ಅಲ್ಲ, ಆಡಳಿತ ನಡೆಸುವವರಿಗೂ ಸಮಸ್ಯೆಗಳಾಗುತ್ತವೆ ಎಂದು ಹೇಳಿದರು.

ನಾರಾಯಣಗುರು ಮಠದ ಶ್ರೀರೇಣುಕಾನಂದ ಸ್ವಾಮೀಜಿ, ಮಾಜಿ ಸಚಿವರಾದ ಹರತಾಳು ಹಾಲಪ್ಪ, ಕಿಮ್ಮನೆ ರತ್ನಾಕರ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ. ಮಂಜುನಾಥಗೌಡ, ಶಿಮುಲ್ ಅಧ್ಯಕ್ಷ ಗುರುಶಕ್ತಿ ವಿದ್ಯಾಧರ, ಹೋರಾಟ ಸಮಿತಿಯ ಪ್ರಮುಖರಾದ ಮಾಜಿ ಶಾಸಕ ಬಿ. ಸ್ವಾಮಿರಾವ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕಲಗೋಡು ರತ್ನಾಕರ, ಕೆ.ವಿ. ಕೃಷ್ಣಮೂರ್ತಿ, ಹಾಲಗದ್ದೆ ಉಮೇಶ್, ಮಾಸ್ತಿಕಟ್ಟೆ ಸುಬ್ರಹ್ಮಣ್ಯ, ಎನ್.ಆರ್. ದೇವಾನಂದ್, ಚಿದಂಬರ, ಆಲುವಳ್ಳಿ ವೀರೇಶ್, ಎಂ.ಎಂ. ಪರಮೇಶ್, ಬಂಡಿ ರಾಮಚಂದ್ರ, ಶ್ವೇತಾ ಬಂಡಿ, ಸುಮಾ ಸುಬ್ರಹ್ಮಣ್ಯ, ಕರುಣಾಕರ ಶೆಟ್ಟಿ, ನಾರಾಯಣ ಕಾಮತ್, ಸುರೇಶ್ ಸ್ವಾಮಿರಾವ್, ಮುರುಳಿ, ಚಂದ್ರಮೌಳಿ ಗೌಡ, ರಿಪ್ಪನ್‌ಪೇಟೆ ಬಾಬುಸಾಬ್, ರಿಪ್ಪನ್‌ಪೇಟೆ ವರ್ಗೀಸ್, ಚರ್ಚ್ ಪಾದ್ರಿಗಳು, ಮಸೀದಿಯ ಧರ್ಮಗುರುಗಳು ಹಾಗೂ ವಿವಿಧ ಧಾರ್ಮಿಕ ಸಂಸ್ಥೆ ಪ್ರಮುಖರು ಸೇರಿದಂತೆ ಹಲವರು ವೇದಿಕೆಯಲ್ಲಿದ್ದರು.



### ಮಾಜಿ ಶಾಸಕ ಬಿ. ಸ್ವಾಮಿರಾವ್ ಭಾಗಿ

ನನ್ನ ಜೀವಿತಾವಧಿಯಲ್ಲಿ ಹೊಸನಗರ ಕ್ಷೇತ್ರ ಮಾಡಬೇಕು. ಹೊಸನಗರ ಕ್ಷೇತ್ರಕ್ಕೆ ಶಾಸಕರನ್ನು ಮಾಡಬೇಕು ಎಂಬ ಹಠ ಹಿಡಿದು ಈ ಹೋರಾಟದ ರೂವಾರಿಯಾಗಿರುವ ಹೊಸನಗರ ಕ್ಷೇತ್ರದ ಮಾಜಿ ಶಾಸಕರಾದ ಬಿ. ಸ್ವಾಮಿರಾವ್ ಅವರು 95ನೇ ವಯಸ್ಸಿನಲ್ಲಿಯೂ ನಗರ ಬಿದನೂರಿನಿಂದ ಹೊಸನಗರಕ್ಕೆ ಸುಮಾರು 16 ಕಿ.ಮೀ ಕಾಲ್ನಡಿಗೆಯಲ್ಲಿ ಪಾದಯಾತ್ರೆ ನಡೆಸಿದರು. ನಾಳೆಯೂ ಸುಮಾರು 26 ಕಿ.ಮೀ ದೂರದ ರಿಪ್ಪನ್‌ಪೇಟೆವರೆಗೂ ನಡೆಯುವುದಾಗಿ ಹೇಳಿದ್ದು ಯಾರ ಮಾತಿಗೂ ಸಪ್ಪು ಹಾಕದೆ ಯಾವುದೇ ವಾಹನವನ್ನು ಏರದೆ ಪಾದಯಾತ್ರೆ ನಡೆಸುತ್ತಿದ್ದಾರೆ.

### ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಸ್ವಾಮಿ

## ಹಿಂದುತ್ವದ ಸರ್ಕಾರ ತರಲು ಪ್ರಯತ್ನಿಸೋಣ

• **ಶಿವಮೊಗ್ಗ:** ಮುಂದಿನ ಚುನಾವಣೆಯಲ್ಲಿ ಜಾತಿಯನ್ನು ಬದಿಗಿಟ್ಟು ಹಿಂದುತ್ವದ ಆಧಾರದ ಸರ್ಕಾರ ಆಯ್ಕೆ ಮಾಡುವ ನಿಟ್ಟಿನಲ್ಲಿ ಸಂಘಟಿತ ಯತ್ನ ನಡೆಸಬೇಕಿದೆ ಎಂದು ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಸ್ವಾಮಿ ಹೇಳಿದರು.

ಹಿಂದೂ ಜನಜಾಗೃತಿ ಸಮಿತಿಯಿಂದ ನಗರದ ಬೆಕ್ಕಿನ ಕಲ್ಮಠ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಪ್ರಾಂತೀಯ ಹಿಂದೂ ರಾಷ್ಟ್ರ ಅಧಿವೇಶನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಾತಿ ವ್ಯವಸ್ಥೆಯಿಂದಾಗಿ ಹಿಂದೂಗಳಲ್ಲಿ ಒಗ್ಗಟ್ಟು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಹಿಂದುತ್ವದ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಬರಲು ಸಾಧ್ಯವಾಗುತ್ತಿಲ್ಲ ಎಂದರು.

ಹಿಂದೂ ರಾಷ್ಟ್ರದ ಪರಿಕಲ್ಪನೆ ಇಂದಿನದಲ್ಲ, ಅದು ಹಿಂದಿನಿಂದಲೂ ಇದೆ. ಮಹಾಭಾರತ ಕಾಲದಲ್ಲಿಯೇ ಹಿಂದೂ ರಾಷ್ಟ್ರದ ಪರಿಕಲ್ಪನೆ ಅಫಘಾನಿಸ್ತಾನದವರೆಗೂ ಇತ್ತು. ಆದರೆ ಬೇರೆ ಬೇರೆ ಕಾರಣಗಳಿಗಾಗಿ ಭರತಖಂಡ ಕೆಲವು ಭೂಭಾಗಗಳನ್ನು ಕಳೆದುಕೊಳ್ಳುತ್ತಾ ಬಂದಿದೆ. ಈಗ ಭಾರತವೊಂದೇ ಹಿಂದೂಗಳಿಗೆ ಇರುವುದರಿಂದ ಉಳಿಸಿಕೊಳ್ಳಬೇಕಿದೆ ಎಂದರು.

ಕೆಲವರ ಸ್ವಾರ್ಥ ಸಾಧನೆಗಾಗಿ ಸಂವಿಧಾನದಲ್ಲಿ ಸೆಕ್ಯೂಲರ್ ಪದವನ್ನು 1976 ರಲ್ಲಿ ಸೇರಿಸಲಾಯಿತು. ಇದರಿಂದಾಗಿ ಧಾರ್ಮಿಕವಾಗಿಯೂ ಅಪಾಯವಾಗುತ್ತಿದೆ. ಈ ಪದವನ್ನು ಮುಂದಿಟ್ಟುಕೊಂಡು ಅಲ್ಪಸಂಖ್ಯಾತರ ಓಲೈಕೆ ಹೆಚ್ಚಾಗಿದೆ. ಅವರನ್ನು ವೋಟ್ ಬ್ಯಾಂಕ್ ಮಾಡಿಕೊಳ್ಳುವ ಸಲುವಾಗಿ ಹಿಂದೂಗಳ ವಿರುದ್ಧ ಎತ್ತಿ ಕಟ್ಟುವ ಕೆಲಸವಾಗುತ್ತಿದೆ. ಹೆಸರಿನ ಮುಂದೆ ಜಾತಿ ಸೂಚಕ ಪದಗಳು ಬರುವುದಕ್ಕಿಂತ ಹಿಂದು ಎಂಬ ಪದ ಬಂದರೆ ಅದರಿಂದ ಸಾಕಷ್ಟು ಬದಲಾವಣೆಯಾಗಲಿದೆ. ಮುಂದಿನ ಚುನಾವಣೆಯಲ್ಲಿ ಯೋಗಿ ಆದಿತ್ಯನಾಥ್ ಅಂತಹವರನ್ನು ಆಯ್ಕೆ ಮಾಡುವ ಮೂಲಕ ಹಿಂದೂ ರಾಷ್ಟ್ರ ನಿರ್ಮಾಣವಾಗಬೇಕಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹಿಂದೂ ಜನಜಾಗೃತಿ ಸಮಿತಿಯ ಪ್ರಮುಖರಾದ ಚಂದ್ರ ಮೊಗೇರ, ರಾಜ್ಯದಲ್ಲಿ ಹಿಂದೂಗಳ ಮೇಲೆ ನಡೆಯುತ್ತಿರುವ ಆಕ್ರಮಣಗಳನ್ನು ಗಮನಿಸಿದರೆ, ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಾಗುತ್ತಿರುವ ಹಿಂದೂಗಳ ದಯನೀಯ ಸ್ಥಿತಿಯು ನೆನಪಾಗುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.



> ಹಿಂದುತ್ವ ಜೀವನ ಕ್ರಮವಾಗಿರುವುದರಿಂದಲೇ ಹಿಂದುಗಳ್ಯಾರು ಒಂದೇ ದೇವರು ಪೂಜಿಸುವುದಿಲ್ಲ. ಬಹು ಆರಾಧನೆ, ಬಹುಸಂಸ್ಕೃತಿ, ಆಚಾರವಿಚಾರವಿದೆ. ದೇವರ ಪೂಜೆಯನ್ನು ಯಾರೂ ಹೇಳಿಕೊಡುವುದಿಲ್ಲ, ಅವರವರ ವಿವೇಚನೆಯಲ್ಲಿ ಭಕ್ತಿ ಇದೆ. ಇದಲ್ಲಿ ಏಕತೆ ಕಾಣಲು ಹಾಗೂ ಹಿಂದು ರಾಷ್ಟ್ರ ನಿರ್ಮಾಣ ಮಾಡಲು ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ.
>
> ■ **ರಾಘವೇಂದ್ರ ಸ್ವಾಮಿ**

ಹಿಂದೂ ಉತ್ಸವಗಳ ಮೇಲೆ ಕಲ್ಲು ತೂರಾಟ, ಹಿಂದೂಗಳ ಹತ್ಯೆ, ಮೂರ್ತಿಭಂಜನ ನೋಡಿದರೆ ನಾವು ಯಾವ ರಾಷ್ಟ್ರದಲ್ಲಿದ್ದೇವೆ ಎಂಬ ಆತಂಕ ಶುರುವಾಗುತ್ತದೆ. ರಾಜ್ಯ ಸರ್ಕಾರ ಅಲ್ಪಸಂಖ್ಯಾತರಿಗೆ ಸಾವಿರಾರು ಕೋಟಿ ಅನುದಾನ, ವಕ್ಫ್ ಭೂಮಿ ಅಭಿವೃದ್ಧಿಗೆ ನೂರಾರು ಕೋಟಿ ನೀಡುತ್ತಿರುವುದು ಯಾರ ತೆರಿಗೆ ಹಣವೆಂದು ಪ್ರಶ್ನಿಸಿದರು.

ವೇದಿಕೆಯಲ್ಲಿ ಕೋಟೆ ದುರ್ಗಾಪರಮೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಂಕರಾನಂದ ಜೋಯಿಸ್, ಗಾಂಧಿ ಬಜಾರ್ ವರ್ತಕರ ಸಂಘದ ಅಧ್ಯಕ್ಷ ವಿಜಯಕುಮಾರ್ ದಿನಕರ್ ಇದ್ದರು. ಈ ಸಂದರ್ಭದಲ್ಲಿ ಶಿಲ್ಪಿ ವಿಶ್ವನಾಥ, ಸೇವಾಲಾಲ್ ಧರ್ಮಗುರು ಮಂಜುಮಹಾರಾಜ್, ದಾವಣಗೆರೆಯ ಸಂದೀಪ್ ಬಿ ಅವರನ್ನು ಸನ್ಮಾನಿಸಲಾಯಿತು.

### ಬಾಬು ಜಗಜೀವನ್ ರಾಮ್ ಜಯಂತ್ಯುತ್ಸವದಲ್ಲಿ ಶಾಸಕ ಚನ್ನಬಸಪ್ಪ

## ಶೋಷಿತರ ದಾರಿದೀಪ ಬಾಬು ಜಗಜೀವನ್ ರಾಮ್

• **ಶಿವಮೊಗ್ಗ:** ಬಾಬು ಜಗಜೀವನ್ ರಾಮ್ ಶೋಷಿತ ವರ್ಗದವರ ದಾರಿದೀಪವಾಗಿದ್ದು, ಸಮಾಜದ ಬೆಳವಣಿಗೆಗಾಗಿ ಶ್ರಮಿಸಿದ ಶ್ರೇಷ್ಠವ್ಯಕ್ತಿ ಎಂದು ಶಾಸಕ ಎಸ್.ಎನ್. ಚನ್ನಬಸಪ್ಪ ಹೇಳಿದರು.

ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಿದ್ದ ಡಾ. ಬಾಬು ಜಗಜೀವನ್ ರಾಮ್ ರವರ 119 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಜಗಜೀವನ್ ರಾಮ್ ಕೇವಲ ರಾಜಕಾರಣಿಯಾಗಿರದೇ, ದಲಿತರ ಮತ್ತು ಶೋಷಿತರ ಹಕ್ಕುಗಳಿಗಾಗಿ ಶ್ರಮಿಸಿದ ಮಹಾನ್ ನಾಯಕ. ಬಾಬೂಜಿರವರು ದೇಶಕ್ಕೆ ಪೂರಕವಾದ ನಿಲುವುಗಳನ್ನು ತಂದು ಕೊಟ್ಟ ಶ್ರೇಷ್ಠ ವ್ಯಕ್ತಿ. ಮಲಹೊರುವ ಅನಿಷ್ಟ ಪದ್ಧತಿ ನಿಷೇಧಿಸುವಲ್ಲಿ ಅಗ್ರಗಣ್ಯರಾಗಿ ನಿಂತವರು. ದಲಿತ ಸಮುದಾಯದಿಂದ ಬಂದು ದೇಶದ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದ ಇವರು, ಸಮಾನತೆಗಾಗಿ ನಡೆಸಿದ ಹೋರಾಟ ಅವಿಸ್ಮರಣೀಯವಾಗಿದ್ದು, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು. ಅವರ ಆಶಯಗಳನ್ನು ಮುಂದೆ ತೆಗೆದುಕೊಂಡು ಹೋಗಬೇಕು ಎಂದರು.

ಜಿಲ್ಲಾಧಿಕಾರಿಗಳಾದ ಪ್ರಭುಲಿಂಗ ಕವಳಿಕಟ್ಟಿ ಮಾತನಾಡಿ, ಯಾವುದೇ ವ್ಯಕ್ತಿಯನ್ನು ಸಂಕುಚಿತ ಮನೋ ಭಾವನೆಯಿಂದ ನೋಡಬಾರದು. ಶೋಷಿತರ ಧ್ವನಿಯಾಗಿದ್ದ ಬಾಬೂಜಿಯವರನ್ನು ನಾವು ಸಮಾಜದ ಶ್ರೇಷ್ಠ ವ್ಯಕ್ತಿಯನ್ನಾಗಿ ಸ್ವೀಕರಿಸಿ ಅವರ ತತ್ವಗಳು, ಕೊಡುಗೆಗಳನ್ನು ಮಾರ್ಗಸೂಚಿಗಳಾಗಿ ನಮ್ಮಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ದೇಶ ಕಟ್ಟುವ ಕಾರ್ಯದಲ್ಲಿ ಒಗ್ಗೂಡಿ ದೇಶವನ್ನು ಮುನ್ನಡೆಸಬೇಕು ಎಂದರು.

1936ರಿಂದ 1986 ರವರೆಗೆ 50 ವರ್ಷ ಶಾಸಕಾಂಗದಲ್ಲಿ ಜನರ ಗೋಸ್ಕರ ನಿರಂತರ ಕಾರ್ಯ ನಿರ್ವಹಿಸಿದಂತಹ ಉನ್ನತ ವ್ಯಕ್ತಿ ಬಾಬೂ ಜಿ. ಕಾರ್ಮಿಕ, ಕೃಷಿ, ರಕ್ಷಣಾ ಸಚಿವರಾಗಿ, ಉಪ ಪ್ರಧಾನಿ ಯಾಗಿ, ವಿಭಿನ್ನ ಕ್ಷೇತ್ರದಲ್ಲಿ ಕಾನೂನು ಮಾಡಿ ಸಾಮಾಜಿಕ ಕಳಕಳಿ ಮೆರೆದರು ಎಂದು ಸ್ಮರಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಜೀವಶಾಸ್ತ್ರ ವಿಭಾಗದ ಉಪನ್ಯಾಸಕ ಸತೀಶ್ ಜಿ. ಕೆ. ವಿಶೇಷ ಉಪನ್ಯಾಸ ನೀಡಿ, 1935 ರಿಂದ ರಾಜಕೀಯ ರಂಗಕ್ಕೆ ಪ್ರವೇಶ ಮಾಡಿ ದೇಶದಲ್ಲಿ ಸಕ್ರಿಯ ರಾಜಕೀಯ ವ್ಯವಸ್ಥೆ ನಿರ್ಮಿಸುವಲ್ಲಿ ಪ್ರಮುಖರಾದವರು ಬಾಬೂಜಿ. ಅಸ್ಪೃಶ್ಯ ಸಮಾಜದಲ್ಲಿ ಜನಿಸಿದ ಇವರು ತಮ್ಮ ನಿರಂತರ ಶ್ರಮದಿಂದ ಮೇಲ್ಪಟ್ಟಕ್ಕೆ ಬಂದು ಅಸ್ಪೃಶ್ಯತೆಯಿಂದ ಬಳಲುತ್ತಿದ್ದ ಕೋಟ್ಯಂತರ ಜನರ ಬದುಕು ಕಟ್ಟುವಲ್ಲಿ ಯಶಸ್ವಿಯಾಗಿದ್ದರು ಎಂದರು.

ಕಾರ್ಮಿಕರನ್ನೆಲ್ಲ ಒಗ್ಗೂಡಿಸಿ ಎಲ್ಲರಿಗೂ ಪರಿಚಿತರಾದರು. ತಮ್ಮ ಹಕ್ಕುಗಳ ರಕ್ಷಣೆಗಾಗಿ ರೈತರನ್ನು ಮತ್ತು ಕಾರ್ಮಿಕರನ್ನು ಜಾಗೃತ ಗೊಳಿಸುವ ಕಾರ್ಯ ಕೈಗೊಂಡರು. ದಲಿತರ, ಕಾರ್ಮಿಕರ ಮಕ್ಕಳಿಗಾಗಿ ಉಚಿತ ಶಿಕ್ಷಣವನ್ನು ಘೋಷಣೆ ಮಾಡಿದರು. ಕಾರ್ಮಿಕ ಮಂತ್ರಿಯಾಗಿ ಕಾರ್ಮಿಕರಿಗೆ ನ್ಯಾಯ ಒದಗಿಸಲು ಹೋರಾಟ ನಡೆಸಿ, ಅವರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ಭವಿಷ್ಯ ನಿಧಿ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್ಪಿ ನಿಖಿಲ್ ಬಿ., ಎಸಿ ಸತ್ಯನಾರಾಯಣ, ತಹಶೀಲ್ದಾರ್ ಎಸ್.ವಿ.ರಾಜೀವ್, ಮಹಾನಗರ ಪಾಲಿಕೆ ಆಯುಕ್ತ ಮಾಯಣ್ಣ ಗೌಡ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಲ್ಲೇಶಪ್ಪ ಡಿ., ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಶ್ರೀನಿವಾಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಉಮೇಶ್.ಹೆಚ್, ವಿವಿಧ ಸಂಘಟನೆಗಳ ಮುಖಂಡರು ಇದ್ದರು.



### ಬಾಬು ಜಗಜೀವನರಾಂ ಜಯಂತಿಯಲ್ಲಿ ಉಪನ್ಯಾಸಕ ಡಾ. ಕೆ.ಎಚ್. ಕುಮಾರಸ್ವಾಮಿ

## ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ನಾಯಕ ಜಗಜೀವನರಾಮ್

• **ಭದ್ರಾವತಿ:** ದೇಶದ ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನರಾಮ್‌ರವರು ಕೇವಲ ಅಸ್ಪೃಶ್ಯರು, ದಲಿತರಿಗಾಗಿ ಹೋರಾಟ ನಡೆಸಲಿಲ್ಲ, ದೇಶದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ನಾಯಕ. ಇಂತಹ ನಾಯಕನ ಜನ್ಮ ದಿನಾಚರಣೆ ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲರೂ ಸೇರಿ ಆಚರಿಸುವಂತಾಗಬೇಕೆಂದು ಉಪನ್ಯಾಸಕ ಡಾ. ಕೆ.ಎಚ್. ಕುಮಾರಸ್ವಾಮಿ ಹೇಳಿದರು.

ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಭಾನುವಾರ ತಾಲೂಕು ಪಂಚಾಯಿತಿ ಆವರಣದಲ್ಲಿ ಆಯೋಜಿಸಲಾಗಿದ್ದ ಡಾ. ಬಾಬು ಜಗಜೀವನರಾಮ್‌ರವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು.

ಬಾಬು ಜಗಜೀವನರಾಮ್ ಅವರು ಸಹ ತಮ್ಮ ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಚಳುವಳಿಗಳಲ್ಲಿ ಪಾಲ್ಗೊಂಡು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರಲ್ಲದೆ ಅನಂತರ ದೇಶವನ್ನು ಸಮಗ್ರವಾಗಿ ರೂಪಿಸುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ. ಸಂವಿಧಾನ ರಚನೆ ಕರಡು ಸಮಿತಿಯಲ್ಲಿ ಸದಸ್ಯರಾಗಿ ಡಾ. ಬಿ.ಆರ್. ಅಂಬೇಡ್ಕರ್‌ರವರ ನಿಲುವುಗಳನ್ನು ಬಲಪಡಿಸಿದರು. ಸರ್ಕಾರ ರಚನೆ ನಂತರ ಸುಧೀರ್ಘವಾದ ತಮ್ಮ ರಾಜಕೀಯ ಬದುಕಿನಲ್ಲಿ ಹಲವಾರು ಪರಿಣಾಮಕಾರಿ ಯೋಜನೆಗಳನ್ನು ಜಾರಿಗೆ ತಂದರು ಎಂದರು.



ದೇಶದ ಎಲ್ಲಾ ಸಮುದಾಯಗಳ, ವರ್ಗಗಳ ದೀನದಲಿತರು, ಶೋಷಿತರು, ಅಸ್ಪೃಶ್ಯರು ಸೇರಿದಂತೆ ಎಲ್ಲರ ಏಳಿಗೆಗಾಗಿ ಯೋಜನೆಗಳನ್ನು ರೂಪಿಸಿದರು. ಸ್ವಾತಂತ್ರ್ಯ ನಂತರ ದೇಶದಲ್ಲಿ ಉಂಟಾದ ಆಹಾರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿದರು. ಹಲವಾರು ನೀರಾವರಿ ಯೋಜನೆಗಳನ್ನು ರೂಪಿಸಿದರು. ಪಾಕಿಸ್ತಾನದ ವಿರುದ್ಧ ಯುದ್ಧಕ್ಕೆ ದೇಶವನ್ನು ಅಣಿಗೊಳಿಸಿದರು. ಭವಿಷ್ಯದಲ್ಲಿ ವಿಶ್ವದ ಯಾವ ದೇಶಗಳು ಸಹ ಭಾರತದ ಮೇಲೆ ಯುದ್ಧ ನಡೆಸದಿರುವಂತೆ ಅಣುಬಾಂಬ್ ಹೊಂದಲು ಕಾರಣಕರ್ತರಾದರು. ದೇಶದ ಗಡಿಗಳನ್ನು ಭದ್ರಗೊಳಿಸಿದರು. ತಮ್ಮ ಸುದೀರ್ಘ ರಾಜಕೀಯದಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸುವ ಮೂಲಕ ಇಂದಿಗೂ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ ಎಂದರು.

ನಗರಸಭೆ ಅಧ್ಯಕ್ಷೆ ಜೆ.ಸಿ. ಗೀತಾ ರಾಜಕುಮಾರ್ ಮತ್ತು ಹಿರಿಯ ಸದಸ್ಯ ಬಿ.ಕೆ. ಮೋಹನ್ ಸೇರಿದಂತೆ ಇನ್ನಿತರರು ಕಾರ್ಯಕ್ರಮ ಉದ್ಘಾಟಿಸಿದರು. ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಾಸಕ ಬಿ.ಕೆ. ಸಂಗಮೇಶ್ವರ್, ತಹಶೀಲ್ದಾರ್ ಪರುಸಪ್ಪ ಕುರುಬರ, ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಂ. ಆಶಾಲತ, ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಬಿ.ಎಸ್. ಗಣೇಶ್, ನಗರಸಭೆ ಪೌರಾಯುಕ್ತ ಕೆ.ಎನ್. ಹೇಮಂತ್, ಸದಸ್ಯರಾದ ಚನ್ನಪ್ಪ, ಬಸವರಾಜ ಬಿ. ಆನೇಕೊಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಬಿ. ಸಿದ್ದಬಸಪ್ಪ, ದಲಿತ ಮುಖಂಡರಾದ ಶಿವಬಸಪ್ಪ, ಬಿ.ವಿ. ಮಂಜುನಾಥ್, ವಿ. ವಿನೋದ್, ಎಂ. ಶಿವಕುಮಾರ್, ನಾಗರಾಜ್, ಶಿವಪ್ಪ, ರಾಜೇಂದ್ರ, ಮಂಜುಳ ರಾಮಚಂದ್ರ, ಪುಟ್ಟರಾಜ್ ಸೇರಿದಂತೆ ಇನ್ನಿತರರಿದ್ದರು.

ಸಿದ್ದಾರ್ಥ ಅಂಧರ ಕೇಂದ್ರದ ಕಲಾವಿದರು ಪ್ರಾರ್ಥಿಸಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಶಿಕುಮಾರ್ ನಿರೂಪಿಸಿದರು. ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೆ.ಜಿ ಶಿವಕುಮಾರ್ ಸ್ವಾಗತಿಸಿದರು.

### ಪ್ರಧಾನಮಂತ್ರಿ ಪೋಷಣ್ ಅಭಿಯಾನದ ಮುಖ್ಯಸ್ಥ ಪರಶುರಾಮಪ್ಪ

## ನಿವೃತ್ತರಾದಾಗ ತೋರುವ ಅಭಿಮಾನ ಬೆಲೆ ಕಟ್ಟಲಾಗದ್ದು

• **ಸಾಗರ:** ಮಕ್ಕಳ ಪ್ರೀತಿಗೆ ಪಾತ್ರವಾಗಿ, ಜನರ ಮೆಚ್ಚುಗೆ ಗಳಿಸಿಕೊಂಡು ಶಿಕ್ಷಕ ವೃತ್ತಿ ನಡೆಸುವುದು ಸವಾಲಿನ ಕೆಲಸ. ನಿರಂತರ ಸೇವೆ ಸಲ್ಲಿಸಿ ನಿವೃತ್ತರಾದಾಗ ಜನರು ತೋರಿಸುವ ಅಭಿಮಾನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಶಿಕ್ಷಣ ಇಲಾಖೆಯ ಪ್ರಧಾನಮಂತ್ರಿ ಪೋಷಣ್ ಅಭಿಯಾನದ ಮುಖ್ಯಸ್ಥ ಪರಶುರಾಮಪ್ಪ ಈ ತಿಳಿಸಿದರು.

ತಾಲೂಕಿನ ಸೈದೂರು ಶಾಂತಾವೇರಿ ಗೋಪಾಲಗೌಡ ಪ್ರೌಢಶಾಲೆಯಲ್ಲಿ ಭಾನುವಾರ ಶಿಕ್ಷಕರಾಗಿ 32 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಸೀತಾರಾಮ ನಾಯ್ಕ ದಂಪತಿಗಳಿಗೆ ಬೀಳ್ಕೊಡುಗೆ ಹಾಗೂ ನಾಗರೀಕ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಸೀತಾರಾಮ ಅವರದ್ದು ಅತ್ಯಂತ ಅಪರೂಪದ ವ್ಯಕ್ತಿತ್ವ. ಸದಾ ಕ್ರಿಯಾಶೀಲವಾಗಿ ಮಕ್ಕಳ ಶ್ರೇಯೋಭಿವೃದ್ಧಿಗೆ ಅವರು ಶ್ರಮಿಸಿದವರು. ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗುತ್ತಿರುವ ಸೀತಾರಾಮ ನಾಯ್ಕ ಅವರು ಎಲ್ಲರಿಂದಲೂ ಮೆಚ್ಚುಗೆ ಪಡೆದವರು. ಇಲಾಖೆ ಮತ್ತು ಪೋಷಕರ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು ಎಂದು ತಿಳಿಸಿದರು.

ಸಹ ಶಿಕ್ಷಕರ ಸಂಘದ ಅಧ್ಯಕ್ಷ ಲಕ್ಷ್ಮಣ್ ಆರ್. ನಾಯಕ್ ಮಾತನಾಡಿ, ಸೀತಾರಾಮ್ ನಾಯ್ಕ ಅವರ ವ್ಯಕ್ತಿತ್ವ ಕಿರಿಯರಿಗೆ ಮಾರ್ಗದರ್ಶನವಾಗಿದೆ. ಯಾವುದೇ ರೀತಿಯ ಕಿಂಚಿತ್ ಇಲ್ಲದೆ ಅವರು ನಿವೃತ್ತಿ ಜೀವನ ಕಳೆಯಬೇಕಾದದ್ದು ಬೇಸರದ ಸಂಗತಿ. ಉತ್ತಮ ಶೈಕ್ಷಣಿಕ ಸೇವೆ ಸಲ್ಲಿಸಿದವರಿಗೆ ಅಪಾರ ಪ್ರೀತಿ ಸಿಗುತ್ತದೆ ಎನ್ನುವುದಕ್ಕೆ ಇಲ್ಲಿ ನಡೆಯುತ್ತಿರುವ ನಾಗರೀಕ ಸನ್ಮಾನವೇ ಸಾಕ್ಷಿಯಾಗಿದೆ ಎಂದು ಹೇಳಿದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥೆಯ ಅಧ್ಯಕ್ಷ ಎಚ್.ಎನ್. ದಿವಾಕರ್ ಮಾತನಾಡಿದರು. ಈ ಸಂದರ್ಭದಲ್ಲಿ ರಾಮಪ್ಪ, ಎಚ್.ಎಸ್. ಗಜೇಂದ್ರ, ದತ್ತಾತ್ರೇಯ ಭಟ್, ಮಾರುತಿ ನಾಯ್ಕ, ಶಿವಾನಂದ್, ರಾಜೇಶ್, ರತ್ನಾಕರ ನಾಯ್ಕ, ಮಹಾಬಲೇಶ್ವರ, ಗೋವಿಂದಪ್ಪ, ಬಾಲಚಂದ್ರ, ಗೌರಮ್ಮ ಇನ್ನಿತರರಿದ್ದರು.

## ಸಂಪಾದಕೀಯ

### ಪಿಒಕೆ: ದೇಶ ಮಾತಾಡಬೇಕಾಗಿದೆ

ಭಾರತದ ಹಿಡಿತದಲ್ಲಿಲ್ಲದ ಕಾಶ್ಮೀರದ ಉತ್ತರ ಭಾಗದ (ಪಾಕ್ ಆಕ್ರಮಿತ ಕಾಶ್ಮೀರ) ಸಮೇತ ಭೂಪಟವನ್ನು ಬಿಡಿಸಿದರಷ್ಟೇ ಅದು ಸಂಪೂರ್ಣ ಭಾರತ! ಸ್ವಾತಂತ್ರ್ಯಾನಂತರದಿಂದಲೂ ಇದು ಭಾರತೀಯರಿಗೆ ಅದೆಷ್ಟು ಒಗ್ಗಿಹೋಗಿದೆಯೆಂದರೆ ಭೂಪಟವನ್ನು ಬಿಡಿಸುತ್ತಲೇ ಬೃಹತ್ತಾದ ಸಮಸ್ಯೆಯನ್ನು ಮೂಲೆಗೆ ಮಾಡಿಬಿಟ್ಟೆವು. ಆದರೆ ಕಳೆದೊಂದು ದಶಕದಿಂದ ಜನರಲ್ಲಿ ಹೊಸ ಅಭಿಪ್ರಾಯವೊಂದು ರೂಪುಗೊಂಡಿದೆ. ಹಿಂದೆಲ್ಲಾ ಪಾಕ್ ಆಕ್ರಮಿತ ಕಾಶ್ಮೀರವೆಂದರೆ ಅದೆಲ್ಲಿದೆ ಎನ್ನುತ್ತಿದ್ದವರಿಗೆ ಇಂದು ಅದರ ನಿಜಸ್ವರೂಪದ ಅರಿವಾಗಿದೆ. ಪಾಕಿಸ್ತಾನದ ದುರುಳತನ ಮತ್ತು ಮೋಸದಾಟ ಇಂದು ದೇಶಕ್ಕೆ ತಿಳಿದಿದೆ. ಹಿಂದಿನಿಂದಲೂ ಆ ಭಾಗವನ್ನು ದೇಶದ ಅವಿಭಾಜ್ಯ ಅಂಗ ಎನ್ನುತ್ತಾ ಬಂದ ಏಕೈಕ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘ. ಪಾಕ್



ಆಕ್ರಮಿತ ಕಾಶ್ಮೀರವನ್ನು ಎಲ್ಲರೂ ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿ ಪರಿಗಣಿಸಿ ಸ್ವಾಭಿಮಾನವನ್ನು ಒತ್ತೆ ಇಡುವ ಕೆಲಸವನ್ನು ಮಾತ್ರ ಮಾಡಿತು. ಮುಂದೆ ಭಾರತೀಯ ಜನಸಂಘ ಮತ್ತು ಭಾರತೀಯ ಜನತಾ ಪಾರ್ಟಿ ಸತ್ಯಾಸತ್ಯತೆಯನ್ನು ದೇಶದ ಮುಂದಿಡುವ ಕಾರ್ಯವನ್ನು ಮಾಡಿದಾಗ ಸೆಕ್ಯುಲರ್ ಪಕ್ಷಗಳು ಅವುಗಳಿಗೆ ಉಗ್ರ ರಾಷ್ಟ್ರೀಯತೆಯ ಪಟ್ಟವನ್ನು ಕಟ್ಟುತ್ತಿದ್ದರು. ಕಾಶ್ಮೀರವನ್ನು ಭಾರತ ಮಾತೆಯ ಸಿಂದೂರ ಎಂದು ಘೋಷಣೆ ಹಾಕಿದ್ದವರೇ ಅಲ್ಲಿ ಅಸ್ತಿತ್ವದಲ್ಲಿದ್ದ 370ನೇ ವಿಧಿಯನ್ನು ರದ್ದು ಪಡಿಸಿದ್ದೆಲ್ಲವೂ ಇಂದು ಇತಿಹಾಸ.

ಆದರೆ ಇಂದು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ದೇಶ ಮಾತಾಡುತ್ತಿದೆ. ಅದರಲ್ಲೂ ಬಾಲಾಕೋಟ್ ಭಯೋತ್ಪಾದಕ ಕೇಂದ್ರದ ಮೇಲೆ ಭಾರತ ದಾಳಿ ಮಾಡಿದ ಅನಂತರ ಆ ಭಾಗದ ಬಗ್ಗೆ ಜನರ ಗಮನ ಹೆಚ್ಚಾಗಿದೆ. ಪಾಕ್ ಆಜಾದಿ ಕಾಶ್ಮೀರ ಎಂದು ಹೇಳಿಕೊಳ್ಳುವ ಈ ಭಾಗ ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಭಯೋತ್ಪಾದಕ ಶಕ್ತಿಗಳ ಕೇಂದ್ರ. ಭಾರತದ ವಿರುದ್ಧ ಪಾಕಿಸ್ತಾನ ಆಕ್ರಮ ಶಸ್ತ್ರಾಸ್ತ್ರ ಮತ್ತು ಫಿದಾಯಿನ್‌ಗಳನ್ನು ರವಾನಿಸುವ ಹೆಬ್ಬಾಗಿಲಾಗಿ ಈ ಪ್ರದೇಶ ಕಾರ್ಯಾಚರಿಸುತ್ತಿತ್ತು. ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್-ಬಾಲ್ಟಿಸ್ತಾನ್, ಮುಜಫರಾಬಾದಿನಲ್ಲಿ ನಾಗರಿಕ ಹಕ್ಕುಗಳನ್ನು ಕಿತ್ತುಕೊಂಡ ಪಾಕ್ ಅಲ್ಲಿನ ಜನರನ್ನು ಭಾರತದ ವಿರುದ್ಧ ದಾಳವಾಗಿ ಬಳಸುತ್ತಿದ್ದರು. ಅಲ್ಲಿನ ಸಂಪನ್ಮೂಲಗಳ ಬಹುಪಾಲನ್ನು ಪಂಜಾಬಿಗಳು ಮತ್ತು ಪಠಾಣರು ಅನುಭವಿಸುತ್ತಾ ಬಂದರು. ಹೇಗೆ ಬಲೂಚ್ ಮತ್ತು ಸಿಂಧ್ ಭಾಗಗಳಲ್ಲಿ ಪಾಕ್ ಆಡಳಿತ ತಾರತಮ್ಯವನ್ನು ಎಸಗುತ್ತದೋ ಹಾಗೆಯೇ ಮುಜಫರಾಬಾದ್ ಮತ್ತು ಗಿಲ್ಗಿಟ್-ಬಾಲ್ಟಿಸ್ತಾನ್‌ಗಳಲ್ಲೂ ಎಸಗಲಾಯಿತು. ಪರಿಣಾಮ ಅಲ್ಲಿನ ಪರಿಸ್ಥಿತಿ ಹೀನಾಯವಾಯಿತು. ಇಂದು ಇವೆಲ್ಲದರ ಬಗ್ಗೆ ಸ್ಥಳೀಯರು ಆಕ್ರೋಶಿತರಾಗಿದ್ದಾರೆ. ಸಾಮೂಹಿಕ ನರಮೇಧಗಳು ಸಾಮಾನ್ಯವೆಂಬಂತೆ ನಡೆಯುತ್ತಿವೆ. ಇದರ ಸುದ್ದಿಗಳು ಭಾರತಕ್ಕೂ ಮುಟ್ಟುತ್ತಿವೆ. ಇಂಥದ್ದರ ನಡುವೆ ಭಾರತದಲ್ಲಿ ಆ ಭಾಗವನ್ನು ಭಾರತದೊಳಗೆ ಸೇರಿಸಿಕೊಳ್ಳುವ ಮಾತುಗಳನ್ನು ವಿವಿಧ ಕ್ಷೇತ್ರಗಳ ಜನರು ಆಡುತ್ತಿರುವುದು ಸ್ವಾಗತಾರ್ಹ. ಭಾರತದ ಪ್ರಮುಖ ಇಸ್ಲಾಂ ನಾಯಕರಾದ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿಯವರು ಕೂಡ ಈಗ ಅದರ ಬಗ್ಗೆ ಮಾತಾಡಿದ್ದಾರೆ. ದೇಶದ ಭೂಭಾಗ ಪರರ ವಶದಲ್ಲಿದೆ ಎನ್ನುವ ಜಾಗೃತಿ ಆಗಬೇಕಾಗಿದೆ. ಇಂಥ ಬೆಳವಣಿಗೆಗಳು ಮುಂದೊಂದು ದಿನ ಆಕ್ರಮಿತ ಪ್ರದೇಶ ಭಾರತದ ಆಡಳಿತಕ್ಕೊಳಪಡುವ ದಿನಗಳು ದೂರವಿಲ್ಲ ಎಂಬುದನ್ನು ಹೇಳುತ್ತವೆ.

# ಪವಾಡ ಪುರುಷನಾದ ಸಾಮಾನ್ಯ ಸೈನಿಕ

ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕತೆಯಿದು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಸೈನಿಕನೊಬ್ಬ ನಿವೃತ್ತಿಯಾಗುವವರೆಗೆ ಅಥವಾ ತನ್ನ ವೀರಮರಣದವರೆಗೆ ದೇಶಸೇವೆಯಲ್ಲಿ ನಿರತನಾಗುವ ಸಂಗತಿ ನಮಗೆ ಗೊತ್ತು. ಆದರೆ ತನ್ನ ಮರಣದ ನಂತರವೂ ದೇಶದ ರಕ್ಷಣೆಗಾಗಿ ಗಡಿಯಲ್ಲಿ ಕರ್ತವ್ಯನಿರತನಾಗಿರುತ್ತಾನೆ ಎಂದರೆ ನೀವು ಖಂಡಿತ ನಂಬುವುದಿಲ್ಲ. 'ಏನು ತಮಾಷೆ ಮಾಡ್ತಿದೀರಾ?' ಎಂದು ನೀವು ಕಾಲೆಳೆಯ ಬಹುದು. ಆದರಿದು ತಮಾಷೆಯಲ್ಲ, ನಿಜದತಲೆಗೆ ಹೊಡೆಯುವಂತಹ ನಿಜ. ಭಾರತೀಯ ಸೈನ್ಯಪಡೆಯಲ್ಲಿ ಜರುಗಿದ ವಾಸ್ತವ ಘಟನೆ.

ಪಂಜಾಬ್ ಪ್ರಾಂತದ ಕಪೂರ್ತಲ ಜಿಲ್ಲೆಯಲ್ಲಿ 1946ರ ಆಗಸ್ಟ್ 30ರಂದು ಜನಿಸಿದ ಹರ್‌ಭಜನ್‌ಸಿಂಗ್ ಚಿಕ್ಕಂದಿನಿಂದಲೇ ದೇಶಪ್ರೇಮ, ಪರೋಪಕಾರ, ಧರ್ಮ ರಕ್ಷಣೆಯ ಸ್ವಭಾವಗಳನ್ನು ಮೈಗೂಡಿಸಿಕೊಂಡಿದ್ದ. ಹತ್ತನೇ ತರಗತಿ ಓದಿದ ಬಳಿಕ ಭಾರತೀಯ ಸೇನೆಗೆ 1966ರಲ್ಲಿ ಒಬ್ಬ ಸಾಮಾನ್ಯ ಸಿಪಾಯಿಯಾಗಿ ಆತ ಸೇರ್ಪಡೆಗೊಂಡ. ಸಾಮಾನ್ಯ ಸಿಪಾಯಿಯಾಗಿದ್ದರೂ ಆತನ ಧೈರ್ಯ, ಕರ್ತವ್ಯನಿಷ್ಠೆ, ದೇಶಪ್ರೇಮ ಸೈನ್ಯಾಧಿಕಾರಿಗಳ ಗಮನಕ್ಕೆ ಬಿದ್ದಿತ್ತು. ಭಾರತದ ವಿರುದ್ಧ ಚೀನೀ ಸೈನಿಕರು ಗಡಿಯಲ್ಲಿ ಕಿರುಕುಳ ನೀಡತೊಡಗಿದ್ದರು. ಸಿಕ್ಕಿಂನ ನಾಥುಲಾ ಪಾಸ್‌ಗೆ ಭಾರತೀಯ ಸೈನಿಕರನ್ನು ಕಳಿಸುವ ಪ್ರಕ್ರಿಯೆ ನಡೆದಿತ್ತು. ಪಂಜಾಬ್ 23ನೇ ರೆಜಿಮೆಂಟ್ ಸೈನಿಕರನ್ನೂ ಕರ್ತವ್ಯ ನಿರ್ವಹಣೆಗಾಗಿ ನಾಥುಲಾ ಗಡಿಗೆ ಕಳಿಸಲಾಗಿತ್ತು. ಆ ರೆಜಿಮೆಂಟ್‌ನಲ್ಲಿದ್ದವನೇ ಸಿಪಾಯಿ ಹರ್ ಭಜನ್ ಸಿಂಗ್.

ನಾಥುಲಾ ಗಡಿಯೆಂದರೆ ಎಂತಹ ಎಂಟೆದೆಯ ಸೈನಿಕನಿಗೂ ಹೆದರಿಕೆ ಹುಟ್ಟಿಸುವ ಪ್ರದೇಶ. ಸಮುದ್ರಮಟ್ಟದಿಂದ 13 ಸಾವಿರ ಅಡಿ ಎತ್ತರ, ಭಯಾನಕ ಕೊರೆಯುವ ಹಿಮಚಳಿ. ಮೈನಸ್ 20–22 ಡಿಗ್ರಿ ಉಷ್ಣತೆಯ ಕೊರೆಯುವ ಚಳಿಯಲ್ಲಿ ಎತ್ತರೆತ್ತರದ ಚೂಪಾದ ಹಿಮಶಿಖರ, ಕೆಳಗೆ ಭೀಕರ ಪ್ರಪಾತದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಸ್ಥಿತಿ. 13 ಸಾವಿರ ಅಡಿ ಎತ್ತರದ ಹಿಮ ಶಿಖರದ ಮೇಲೆ ಸೈನ್ಯದ ಬಂಕರ್. ಅಷ್ಟೆತ್ತರಕ್ಕೆ ಕೆಳಗಿನಿಂದ ಮದ್ದುಗುಂಡು, ಇನ್ನಿತರ ಅಗತ್ಯ ವಸ್ತುಗಳನ್ನು ಸಾಗಿಸುವ ಕಾರ್ಯ ಅತ್ಯಂತ ಪ್ರಯಾಸಕರ. ಹರ್‌ಭಜನ್ ಸಿಂಗ್ ಒಂದು ದಿನ ಹೀಗೆ ಯುದ್ಧೋಪಕರಣಗಳನ್ನು ಕಾಲ್ನಡಿಗೆ ಮೂಲಕ ಸಾಗಿಸುತ್ತಿರುವಾಗ ಕಾಲುಜಾರಿ ಹಿಮನದಿಯಲ್ಲಿ ಕೊಚ್ಚಿಹೋದ. ರಾತ್ರಿಯಾದರೂ ಆತನ ಪತ್ತೆಯಾಗಲಿಲ್ಲ. ಈ ಕಠಿಣ ವಾತಾವರಣ ಹಾಗೂ ಮುಂದೆ ಬರಲಿರುವ ಯುದ್ಧಕ್ಕೆ ಹೆದರಿ ಆತ ಪಲಾಯನ ಮಾಡಿರಬೇಕೆಂದೇ ಎಲ್ಲರ ಊಹೆಯಾಗಿತ್ತು. ಏಕೆಂದರೆ ಆಗಿನ್ನೂ ಹರ್‌ಭಜನ್‌ಸಿಂಗ್‌ನಿಗೆ 22ರ ಹರೆಯ.

ಆದರೆ ಆತ ನಾಪತ್ತೆಯಾದ ಐದನೇ ದಿನ ರಾತ್ರಿ, ಹರ್‌ಭಜನ್‌ಸಿಂಗ್‌ನ ಇನ್ನೊಬ್ಬ ಸ್ನೇಹಿತ ಪ್ರೀತಂ ಸಿಂಗ್‌ನ ಕನಸಿನಲ್ಲಿ ಕಾಣಿಸಿಕೊಂಡು, ತಾನು ಹಿಮನದಿಯಲ್ಲಿ ಜಾರಿ ಸಾವನ್ನಪ್ಪಿರುವೆ. ನನ್ನ ಶವವನ್ನು ನೀವು ಇಂಥ ಕಡೆ ಹುಡುಕಿದರೆ ಸಿಗುತ್ತದೆ ಎಂದು ಹೇಳಿದಂತಾಯಿತು. ಕನಸನ್ನು ನಂಬುವುದು ಹೇಗೆ? ಆದರೂ ಕನಸಿನಲ್ಲಿ ಹರ್‌ಭಜನ್ ಸಿಂಗ್ ತಿಳಿಸಿದ ನಿರ್ದಿಷ್ಟ ಜಾಗಕ್ಕೆ ಸೈನಿಕರು ತೆರಳಿ ಹುಡುಕಿದಾಗ ಆತನ ಶವ ಪತ್ತೆಯಾಯಿತು. ಅನಂತರ ಶವದ ಅಂತ್ಯಸಂಸ್ಕಾರವೂ ನೆರವೇರಿತು.

ಇಲ್ಲಿಗೆ ಹರ್‌ಭಜನ್ ಸಿಂಗ್ ಎಂಬ ಸಿಪಾಯಿಯೊಬ್ಬನ ಕಥೆ ಅಂತ್ಯಗೊಳ್ಳಬೇಕಿತ್ತು. ಆದರೆ ಹಾಗಾಗಲಿಲ್ಲ. ಆತನ ಕಥೆ ಶುರುವಾಗಿದ್ದೇ ಅಲ್ಲಿಂದ. ನಾಥುಲಾ ಗಡಿಯಲ್ಲಿ ಚೀನಿ ಶತ್ರು ಸೈನಿಕರು ಎಲ್ಲೆಲ್ಲಿ ಅಡಗಿದ್ದಾರೆ, ಅವರನ್ನು ಹೇಗೆ ಸದೆಬಡಿಯಬೇಕು ಇತ್ಯಾದಿ ಮಾಹಿತಿಗಳನ್ನು ಹರ್‌ಭಜನ್ ಸಿಂಗ್‌ನ ಆತ್ಮ ಸಹಪಾಠಿ ಸೈನಿಕರ ಕನಸಿನಲ್ಲಿ ಬಂದು ಹೇಳುತ್ತಿತ್ತು. ಆ ಆತ್ಮ ಹೇಳಿದ್ದೆಲ್ಲವೂ ನಿಖರವಾಗಿರುತ್ತಿತ್ತು. ಆ ಆತ್ಮ ಹೇಳಿದ ಮಾಹಿತಿಗಳಿಂದ ಭಾರತೀಯ ಸೈನ್ಯಕ್ಕೆ ಶತ್ರುಗಳನ್ನು ಗಡಿಯೊಳಗೆ ನುಗ್ಗಿ ಬರದಂತೆ ಹದ್ದುಬಸ್ತಿನಲ್ಲಿಡಲು ತುಂಬಾ ನೆರವಾಗುತ್ತಿತ್ತು. ಚೀನಿ ಸೈನಿಕರು ಕೂಡ ತಾವು ಭಾರತದ ಗಡಿಯೊಳಗೆ ನುಗ್ಗದಂತೆ ಬಿಳಿಕುದುರೆ ಏರಿದ ಸೈನಿಕನೊಬ್ಬ ತಡೆಯುತ್ತಿರುವ ದೃಶ್ಯ ಕಂಡು ಹಿಂದೆ ಸರಿದರು.

ಈ ಎಲ್ಲ ಅನೂಹ್ಯ ವಿದ್ಯಮಾನಗಳು ಪಂಜಾಬ್ ರೆಜಿಮೆಂಟ್ ಸೈನಿಕರ ಪಾಲಿಗೆ ಪವಾಡಸದೃಶ ಎನಿಸತೊಡಗಿತು. ಅವರೆಲ್ಲರೂ ಹರ್‌ಭಜನ್ ಸಿಂಗ್ ಎಂಬ ಮೃತ ಸೈನಿಕನನ್ನು ಒಬ್ಬ ಬಾಬಾನಂತೆ ಭಕ್ತಿಭಾವದಿಂದ ಆರಾಧಿಸತೊಡಗಿದರು. ಗಡಿಪ್ರದೇಶದಲ್ಲಿ ಕರ್ತವ್ಯ ನಿರ್ವಹಣೆಗೆ ಮುಂಚೆ ಭಾರತೀಯ ಸೈನಿಕರು ಹರ್‌ಭಜನ್ ಸಿಂಗ್‌ನನ್ನು ಸ್ಮರಿಸುತ್ತಿದ್ದರು. ಸೈನಿಕರ ಮೀಟಿಂಗ್ ಸಂದರ್ಭದಲ್ಲಿ ಹರ್‌ಭಜನ್ ಸಿಂಗ್‌ಗೆ ಕುಳಿತುಕೊಳ್ಳಲು ಒಂದು ಕುರ್ಚಿ ಹಾಕಲಾಗುತ್ತಿತ್ತು. ಆ ಕುರ್ಚಿ ಮಾತ್ರ ಸದಾ ಖಾಲಿಯಾಗಿಯೇ ಇರುತ್ತಿತ್ತು. ಚೀನೀ ಸೈನಿಕರಂತೂ ಹರ್‌ಭಜನ್ ಸಿಂಗ್‌ನ ಆತ್ಮ ನಾಥುಲಾ ಕಣಿವೆಯ ಸುತ್ತ ಹಗಲುರಾತ್ರಿ ಗಸ್ತು ತಿರುಗುತ್ತಿದೆ ಎಂದೇ ಭಾವಿಸಿ ಹೆದರಿದ್ದರು. ತಾವೆಷ್ಟೇ ಗುಪ್ತ ತಯಾರಿ ಮಾಡಿಕೊಂಡರೂ ಅದು ಭಾರತೀಯ ಸೈನ್ಯಪಡೆಗೆ ಕ್ಷಣಮಾತ್ರದಲ್ಲಿ ತಿಳಿಯುತ್ತಿದ್ದುದರ ಹಿನ್ನೆಲೆ ಇದೇ ಹರ್‌ಭಜನ್ ಸಿಂಗ್‌ನ ಆತ್ಮ ಎಂದು ಭೀತರಾದರು. ತಮ್ಮ ಮೀಟಿಂಗ್ ವೇಳೆ ಆತನಿಗೊಂದು ಖಾಲಿ ಕುರ್ಚಿ ಇಟ್ಟು ಗೌರವಿಸತೊಡಗಿದರು.





ಇತ್ತ ಭಾರತೀಯ ಸೈನ್ಯಪಡೆಯಲ್ಲಿ ದಿನೇದಿನೇ ಹರ್‌ಭಜನ್ ಸಿಂಗ್ ಬಗ್ಗೆ ಗೌರವಾದರ ಹೆಚ್ಚತೊಡಗಿತು. ನಾಥುಲಾ ಗಡಿಗೆ ಕೊಂಚ ದೂರದಲ್ಲಿ ಬಂಕರ್ ನಿರ್ಮಿಸಿ, ಅಲ್ಲಿ ಹರ್‌ಭಜನ್ ಸಿಂಗ್ ಧರಿಸುತ್ತಿದ್ದ ಸೈನಿಕ ಸಮವಸ್ತ್ರ, ಬೂಟು, ಗನ್ ಜೋಡಿಸಿಡಲಾಯಿತು. ಪ್ರತಿನಿತ್ಯ ಆ ಸಮವಸ್ತ್ರಕ್ಕೆ ಇಸ್ತ್ರಿ ಮಾಡಿ, ಬೂಟು ಒರೆಸಿ ಇಡಲಾಗುತ್ತಿತ್ತು. ಆತನಿಗೆ ವಿಶ್ರಾಂತಿ ಪಡೆಯಲು ಒಂದು ಹಾಸಿಗೆಯನ್ನೂ ಇಡಲಾಗಿತ್ತು. ಆಶ್ಚರ್ಯವೆಂದರೆ ರಾತ್ರಿ ಜೋಡಿಸಿಟ್ಟ ಸಮವಸ್ತ್ರ, ಬೂಟು ಮರುದಿನ ಬೆಳಿಗ್ಗೆ ಬಳಸಿದಂತಿರುತ್ತಿತ್ತು. ಹಾಸಿಗೆ ಮುದುಡಿರುತ್ತಿತ್ತು. ಬೂಟಿಗೆ ಮಣ್ಣು ಮೆತ್ತಿರುತ್ತಿತ್ತು. ಸಮವಸ್ತ್ರ ಅಲ್ಲಲ್ಲಿ ಸುಕ್ಕಾಗಿ ಕೊಳೆ ಅಂಟಿಕೊಂಡಿರುತ್ತಿತ್ತು. ಹರ್‌ಭಜನ್ ಸಿಂಗ್ ಆತ್ಮ ರಾತ್ರಿಯಿಡೀ ಕರ್ತವ್ಯ ನಿರ್ವಹಿಸಿದೆ ಎಂಬುದರ ಸಂಕೇತ ಇದು ಎಂದು ಎಲ್ಲರೂ ಭಾವಿಸಿದರು.

ಹರ್‌ಭಜನ್‌ಸಿಂಗ್‌ಸೈನಿಕನಾಗಿದ್ದಾಗ ಪ್ರತಿಸೆಪ್ಟೆಂಬರ್ 15ರಿಂದ ನವೆಂಬರ್ 15 ರವರೆಗೆ ಎರಡು ತಿಂಗಳು ರಜೆಯಲ್ಲಿ ಊರಿಗೆ ತೆರಳಿ ತಾಯಿಯೊಂದಿಗೆ ಇರುತ್ತಿದ್ದ. ಹಾಗಾಗಿ ಆತ ಸತ್ತ ಮೇಲೂ ಪ್ರತಿ ವರ್ಷ ಆತನ ಸಮವಸ್ತ್ರ ಲಗೇಜ್ ಪ್ಯಾಕ್ ಮಾಡಿ ಇಬ್ಬರು ಸೈನಿಕರು ಕಪೂರ್ತಲದ ಆತನ ಮನೆಗೆ ಒಯ್ಯುತ್ತಿದ್ದರು. ಊರಿನ ಜನರೆಲ್ಲ ಅಲ್ಲಿಗಾಗಮಿಸಿ ಸಮವಸ್ತ್ರ, ಭಾವಚಿತ್ರಕ್ಕೆ ವಂದಿಸಿ ಹೋಗುತ್ತಿದ್ದರು. ರಜೆ ಮುಗಿದ ಬಳಿಕ ಮತ್ತೆ ಆತನ ಸಮವಸ್ತ್ರ ಲಗೇಜ್‌ನ್ನು ಪ್ಯಾಕ್ ಮಾಡಿ ನಾಥುಲದ ಬಂಕರಿಗೆ ಸೈನಿಕರು ತರುತ್ತಿದ್ದರು.

ಈ ನಡುವೆ ಸೈನ್ಯದಲ್ಲಿ ಆತನಿಗೆ (ಆತನ ಆತ್ಮಕ್ಕೆ) ಪದೋನ್ನತಿಯನ್ನು ನೀಡಲಾಯಿತು. ಸಿಪಾಯಿ ಆಗಿದ್ದ ಹರ್‌ಭಜನ್‌ಸಿಂಗ್ ಈಗ ಕ್ಯಾಪ್ಟನ್ ಹುದ್ದೆಗೇರಿದ್ದ. ಆತನ ವೇತನವನ್ನು ತಪ್ಪದೆ ಊರಿಗೆ ಕಳಿಸಲಾಗುತ್ತಿತ್ತು. ಕೊನೆಗೂ ಆತನಿಗೆ 60 ವರ್ಷವಾದಾಗ ನಿವೃತ್ತಿಗೊಳಿಸಲಾಯಿತು. ಆದರೆ ಅಷ್ಟರೊಳಗೆ ನಾಥುಲಾ ಸಮೀಪ ಹರ್‌ಭಜನ್‌ಸಿಂಗ್‌ಗೊಂದು ದೇಗುಲವನ್ನು ಸೈನಿಕರು ನಿರ್ಮಿಸಿದ್ದರು. ಹರ್‌ಭಜನ್‌ಸಿಂಗ್ ಭಾವಚಿತ್ರಕ್ಕೆ ಹಾರ ಹಾಕಿ ಪ್ರತಿನಿತ್ಯ ಧೂಪ, ದೀಪ ಸೇವೆ ಅಲ್ಲಿ ನಡೆಯುತ್ತಿತ್ತು. ಮಂದಿರ ಪ್ರವೇಶಿಸುವ ಮುನ್ನ ಸೈನಿಕರು ಬೂಟು ಕಳಚಿ ಒಳಗೆ ಬರುತ್ತಿದ್ದರು. ಬಾಬಾ ಹರ್‌ಭಜನ್ ಸಿಂಗ್ ಮಂದಿರವೆಂದೇ ಅದು ಪ್ರಖ್ಯಾತವಾಯಿತು. ಮಂದಿರಕ್ಕೆ ಸೈನಿಕರಲ್ಲದೆ ಸ್ಥಳೀಯ ನಿವಾಸಿಗಳೂ ಬಂದು ಗೌರವ ಸಲ್ಲಿಸ ತೊಡಗಿದರು.

1987ರ ಒಂದು ರಾತ್ರಿ ಚೀನಿ ಸೈನಿಕರು ಭಾರತದ ಗಡಿಯೊಳಗೆ ನುಗ್ಗಿ ಕಿರುಕುಳ ನೀಡಲು ಹೊಂಚು ಹಾಕಿದ್ದರು. ಆದರೆ ಆ ರಾತ್ರಿ ವಿಪರೀತ ಹಿಮಗಾಳಿ. ಹಿಮ ಪರ್ವತದಿಂದ ಹಿಮದ ಬಂಡೆಗಳು, ಜೊತೆಗೆ ತಲವಾರ್ ಹಿಡಿದ ಬಿಳಿ ಕುದುರೆ ಏರಿ ಬರುತ್ತಿದ್ದ ಸಿಖ್ ಯೋಧ. ಈ ದೃಶ್ಯ ನೋಡಿದ ಚೀನಿ ಸೈನಿಕರು ಹೆದರಿ, ಕಂಗಾಲಾಗಿ ಓಡಿ ಹೋಗಿದ್ದರು.

1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಇಡೀ ದೇಶದ ಎಲ್ಲಾ ಗಡಿಗಳಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಸೈನಿಕರು ಎಲ್ಲೆಡೆ ಗಡಿ ಕಾಯುತ್ತಿದ್ದರು. ಆದರೆ ನಾಥುಲಾ ಸೆಕ್ಟರ್ ಮಾತ್ರ ಶಾಂತವಾಗಿತ್ತು. ಒಂದೇ ಒಂದು ಗುಂಡಿನ ಸದ್ದು ಅಲ್ಲಿ ಕೇಳಿ ಬರಲಿಲ್ಲ. ಆಗ ಒಬ್ಬ ಭಾರತೀಯ ಸೈನ್ಯಾಧಿಕಾರಿ ಹೇಳಿದ್ದರಂತೆ ''ಬಾಬಾನೇ ಪಹಲೇ ಹಿ ಡಾಂಟ್ ದಿಯಾ ಹೋಗಾ'' (ಬಾಬಾ ಹರ್‌ಭಜನ್‌ಸಿಂಗ್ ಮೊದಲೇ ಇಲ್ಲಿ ಶತ್ರುಗಳಿಗೆ ಹೆದರಿಕೆ ಹುಟ್ಟಿಸಿದ್ದಿರಬಹುದು.)

ಚೀನಾದ ಕಾಮ್ರೇಡ್ ದೊರೆಗಳು ಬಾಬಾ ಹರ್‌ಭಜನ್‌ಸಿಂಗ್‌ನ ಆತ್ಮ ಭಾರತದ ಗಡಿಯನ್ನು ಸುರಕ್ಷಿತವಾಗಿಟ್ಟಿದೆ ಎಂಬುದನ್ನು ಸುತರಾಂ ನಂಬುವುದಿಲ್ಲ. ಆದರೆ ಗಡಿ ಕಾಯುವ ಚೀನಿ ಸೈನಿಕರು ಮಾತ್ರ ಬಾಂಬ್, ಕ್ಷಿಪಣಿಗಳಿಗಿಂತ ಬಾಬಾನ ಆಧ್ಯಾತ್ಮಿಕ ಶಕ್ತಿ ಹೆಚ್ಚು ಪ್ರಭಾವಶಾಲಿ. ಬಾಬಾನ ಆತ್ಮ ಶಕ್ತಿಯು ಸಕ್ರಿಯವಾಗಿರುವ ವರೆಗೆ ಭಾರತದ ಗಡಿಯೊಳಗೆ ನಮ್ಮ ಕಿತಾಪತಿ ಸಾಧ್ಯವಾಗದೆಂದು ನಂಬಿದ್ದಾರೆ.

ನಾಥುಲಾದಲ್ಲಿ ಈಗ ಬಾಬಾ ಹರ್‌ಭಜನ್‌ಸಿಂಗ್ ಹೆಸರಿನಲ್ಲಿ ಎರಡು ಮಂದಿರಗಳಿವೆ. ಒಂದು ಸಿಲ್ಕ್‌ರೋಡಿನಲ್ಲಿರುವ ಹಳೆಯ ಮಂದಿರ. ಇನ್ನೊಂದು ಜೋಕ್ಲಮ್‌ಗೆ ಸಮೀಪವಿರುವ ಹೊಸ ಮಂದಿರ. ಈ ಎರಡು ಮಂದಿರಗಳಿಗೆ ವರ್ಷವಿಡಿ ಅನೇಕ ಭಕ್ತರು, ಅಭಿಮಾನಿಗಳು ಆಗಮಿಸಿ ಗೌರವ ಸಲ್ಲಿಸುತ್ತಾರೆ. ಸಮವಸ್ತ್ರ ಧರಿಸಿದ ಸೈನಿಕರು ದಿನದ 24 ಗಂಟೆ ಈ ಮಂದಿರಗಳ ಕಾವಲು ಕಾಯುತ್ತಾರೆ. ಬಾಬಾ ಹರ್‌ಭಜನ್‌ಸಿಂಗ್ ಬಗ್ಗೆ ಅಂತಹ ಶ್ರದ್ಧೆ, ನಿಷ್ಠೆ ಅವರದು.

ಭಾರತೀಯ ಭೂಸೇನೆ ಹರ್‌ಭಜನ್‌ಸಿಂಗ್‌ಗೆ ಮರಣೋತ್ತರ ಮಹಾವೀರ ಚಕ್ರ ಬಿರುದು ನೀಡಿ ಗೌರವಿಸಿದೆ. ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಟ್ಟೆಚ್ಚರ ವಹಿಸಿ ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕಥೆಯನ್ನು ಕೆಲವು ವಿಚಾರವಾದಿಗಳು ಒಪ್ಪದಿರಬಹುದು. ಇದೆಲ್ಲ ಭ್ರಮೆ ಎಂದು ಲೇವಡಿ ಮಾಡಬಹುದು. ಆದರೆ ಪ್ರತ್ಯಕ್ಷ ಗಡಿ ಕಾಯುತ್ತಿರುವ ಭಾರತೀಯ ಸೈನಿಕರು ಮಾತ್ರ ಇದನ್ನು ಈಗಲೂ ನಂಬುತ್ತಾರೆ. ಬಾಬಾ ಹರ್‌ಭಜನ್ ಸಿಂಗ್ ಮಂದಿರಕ್ಕೆ ಬೂಟು ಕಳಚಿ, ಬರಿಗಾಲದಲ್ಲಿ ತೆರಳಿ ಪೂಜೆ ಸಲ್ಲಿಸುತ್ತಾರೆ. ತಮಗೂ ಅಂತಹುದೇ ದೇಶ ಪ್ರೇಮ, ಪರಾಕ್ರಮ, ಸಾಹಸ ಪ್ರಾಪ್ತವಾಗಲೆಂದು ಮೌನವಾಗಿ ಪ್ರಾರ್ಥಿಸುತ್ತಾರೆ. ಸಿಕ್ಕಿಂನ ಜೋಕ್ಲಮ್, ನಾಥುಲಾಕ್ಕೆ ನೀವೇನಾದರೂ ಹೋದರೆ ತಪ್ಪದೇ ಬಾಬಾ ಹರ್ ಭಜನ್ ಸಿಂಗ್ ಮಂದಿರದ ದರ್ಶನ ಮಾಡಿ ಬನ್ನಿ.

# ಹರೆಯದವರಲ್ಲಿ ಮಾನಸಿಕ ಕಾಯಿಲೆಗಳು

ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ.

ತಾರುಣ್ಯ ತಲ್ಲಣ
• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



'ಅರವತ್ತಕ್ಕೆ ಅರುಳೋ ಮರುಳೋ' ಎಂಬ ಗಾದೆಯಂತೆ ಮಕ್ಕಳು ಮತ್ತು ಹರೆಯದವರು ಮಾನಸಿಕವಾಗಿ ಕಾಯಿಲೆಗೆ ತುತ್ತಾಗುವುದಿಲ್ಲ ಎಂಬ ಕಾಲವೊಂದಿತ್ತು. ಹರೆಯದ ಹುಡುಗನೊಬ್ಬನಿಗೆ ಮಾನಸಿಕ ಕಾಯಿಲೆ ಇದೆಯೇ ಎಂದು ಯಾರಾದರೂ ಕೇಳಿದರೆ, ಅಯ್ಯೋ ಅವನು ಇನ್ನೂ ಹುಡುಗ. ಅವನಿಗೆ ಯಾವ ಜವಾಬ್ದಾರಿಯೂ ಇಲ್ಲ. ಹಾಗಾಗಿ ಅವನಿಗೆ ಮನೋರೋಗ ಎಲ್ಲಿಂದ ಬರಬೇಕು? ಎನ್ನುತ್ತಿದ್ದರು. ಈಗಲೂ ಈ ತಪ್ಪು ಕಲ್ಪನೆ ಸಮಾಜದಲ್ಲಿ ವ್ಯಾಪಕವಾಗಿದೆ.

ಹರೆಯದವರಲ್ಲಿ ನಾವು ನೋಡುವ ಆತಂಕ, ಗಾಬರಿ, ಬೇಸರ, ತುಂಟಾಟ, ಕೋಪ, ದುಃಖ ಇವುಗಳನ್ನು ಮನೋರೋಗ ಎನ್ನಬಹುದೇ ಎಂದು ಕೇಳುವವರಿದ್ದಾರೆ. ಹರೆಯದವರು ಎದುರಿಸಬೇಕಾದ ಒತ್ತಡಗಳು ಮತ್ತು ಸವಾಲುಗಳು ಅವರ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸುತ್ತವೆ. ಒತ್ತಡಗಳು ಮತ್ತು ಸವಾಲುಗಳಿಂದ ಅಪಕ್ವವಾದ ಹರೆಯದ ಮನಸ್ಸು ವಿಚಲಿತಗೊಳ್ಳುತ್ತದೆ. ಹರೆಯದಲ್ಲಿ ಸ್ರವಿಸುವ ಲೈಂಗಿಕ ಮತ್ತು ನರಚೋದನಿಕೆಗಳು ಮನಸ್ಸನ್ನು ಆತಂಕಕ್ಕೀಡು ಮಾಡುತ್ತವೆ. ಈ ವಿಧದ ಏರಿಳಿತಗಳು ಹರೆಯದವರಲ್ಲಿ ಸಾಮಾನ್ಯ. ಒಮ್ಮೆ ಸವಾಲುಗಳನ್ನು ಮತ್ತು ಒತ್ತಡಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಪರಿಹಾರ ಕಂಡುಕೊಂಡಾಗ ಮನಸ್ಸು ನಿರಾಳವಾಗಿ ಎಂದಿನಂತೆ ಸಾಧನೆಗೆ ಸೈ ಎನ್ನಲು ತಯಾರಾಗುತ್ತದೆ. ಇವು ಮನೋರೋಗಗಳು ಎನಿಸಿಕೊಳ್ಳುವುದಿಲ್ಲ. ಇದಕ್ಕೆ ಬಾಲ್ಯದಿಂದಲೂ ಜೀವನ ಕೌಶಲಗಳನ್ನು ರೂಢಿಸಿಕೊಳ್ಳುವುದು ಅವಶ್ಯ. ಒತ್ತಡಗಳನ್ನು ಆತ್ಮೀಯರೊಂದಿಗೆ ಹಂಚಿಕೊಂಡಾಗ, ಪರಿಹಾರ ದೊರೆತು ಮನಸ್ಸು ನಿರಾಳಗೊಳ್ಳುತ್ತದೆ. ಸವಾಲುಗಳನ್ನು ಸಮಾಧಾನ ಮತ್ತು ಧೈರ್ಯದಿಂದ ಎದುರಿಸಬಹುದು. ಅವು ಕಷ್ಟವೆನಿಸಿದಾಗ ಹಿರಿಯರು, ಪೋಷಕರು, ಉಪಾಧ್ಯಾಯರು ಮತ್ತು ಆತ್ಮೀಯ ಸ್ನೇಹಿತರೊಂದಿಗೆ ಹಂಚಿಕೊಂಡು, ಪರಿಹಾರ ಕಂಡುಕೊಳ್ಳಬೇಕು.



ಮೇಲಿನದನ್ನು ಅವಲೋಕಿಸಿದಾಗ ಹರೆಯದವರಲ್ಲಿ ಮನೋರೋಗಗಳು ಬರುವುದಿಲ್ಲವೇ? ಎಂಬ ಪ್ರಶ್ನೆ ಏಳುತ್ತದೆ. ಮೊದಲೇ ತಿಳಿಸಿದಂತೆ ಹರೆಯದ ಒತ್ತಡ ಮತ್ತು ಸವಾಲುಗಳನ್ನು ಎದುರಿಸಿಯೂ ಕೆಲವು ವೇಳೆ ಮನೋರೋಗಕ್ಕೆ ತುತ್ತಾಗಬಹುದು. ಅಧ್ಯಯನಗಳ ಪ್ರಕಾರ ಪ್ರತಿಶತ ಅರವತ್ತು ಭಾಗದ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುವುದು ಹರೆಯದ ಅವಧಿಯಲ್ಲಿ. ಆದರ ಅರ್ಧ ಸೌಮ್ಯತರದ ಮನೋರೋಗ ಲಕ್ಷಣಗಳು ಪ್ರಾರಂಭವಾಗಿ ಅವು ಯಾರ ಗಮನಕ್ಕೂ ಬರುವುದಿಲ್ಲ. ತಮ್ಮ ಮಗುವಿನ ನಡವಳಿಕೆಯಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ಕಂಡುಬಂದರೂ ಅದು ತೀವ್ರವಾಗುವವರೆಗೆ ಗಮನ ನೀಡುವುದಿಲ್ಲ. ಗಮನ ನೀಡಿದರೂ ಅದು ಯಾವುದೋ ದೆವ್ವ, ಭೂತಚೇಷ್ಟೆ, ಗ್ರಹಚಾರ ಎಂದು ಭಾವಿಸಿ, ಅವುಗಳ ಮೊರೆ ಹೋಗುತ್ತಾರೆ. ಅದು ಮನೋರೋಗ ಎಂದು ಭಾವಿಸುವುದಿಲ್ಲ. ಒಮ್ಮೆ ತಮ್ಮ ಮಗುವಿಗೆ ಮನೋರೋಗ ಇದೆ ಎಂದು ಅನಿಸಿದರೂ, ಅದಕ್ಕೆ ಮನೋವೈದ್ಯರನ್ನು ಸಂಪರ್ಕಿಸುವುದಿಲ್ಲ. ಅದಕ್ಕೆ ಕಾರಣ, ಅದು ಇತರರಿಗೆ ತಿಳಿದು ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಅಡ್ಡಗಾಲಾಗುವುದೋ ಎಂಬ ಪೋಷಕರ ಭಾವನೆ.

ಮನೋರೋಗಕ್ಕೆ ಕೌನ್ಸೆಲಿಂಗ್ ಉತ್ತಮವಾದ ಮದ್ದೆಂದು ನಂಬುವವರು ವ್ಯಾಪಕವಾಗಿದ್ದಾರೆ. ತೀವ್ರತರದ ಮನೋರೋಗಕ್ಕೆ ಕೌನ್ಸೆಲಿಂಗ್ ಚಿಕಿತ್ಸೆಯು ಒಂದು ಭಾಗವೇ ವಿನಃ, ಅದೇ ಮುಖ್ಯವಾದ ಚಿಕಿತ್ಸೆಯಲ್ಲ. ಔಷಧ ಚಿಕಿತ್ಸೆ ಅನಿವಾರ್ಯ. ಕೆಲವು ಪೋಷಕರು ತಮ್ಮ ಮಕ್ಕಳನ್ನು ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೇ ಕೌನ್ಸೆಲಿಂಗ್ ಮಾಡಿಸಿ ಕೊನೆಗೆ ಮನೋವೈದ್ಯರ ಹತ್ತಿರ ಚಿಕಿತ್ಸೆಗಾಗಿ ಕರೆತರುತ್ತಾರೆ.

ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸುವಾಗ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಅವುಗಳನ್ನು ಎರಡು ವಿಧಗಳಾಗಿ ಗುರುತಿಸಬಹುದು. ಮೊದಲನೆಯದು ಗುರುತಿಸಲು ಇರುವ ಅಡೆತಡೆಗಳು (Barriers). ಎರಡನೆಯದು ಸಹಾಯಕವಾಗುವ (Facililators) ಅಂಶಗಳು. ಹರೆಯದವರ ಸಮಸ್ಯೆಗಳನ್ನು ನಿಭಾಯಿಸುವುದು (Intervention) ಮೂರನೆಯ ಅಂಶ.

ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ. ಅದರಲ್ಲಿಯೂ ಹೆಚ್ಚಾಗಿ ಕಂಡುಬರುವುದು ಖಿನ್ನತೆ, ಆತಂಕ ಮತ್ತು ಭಯ. ಇದನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು, ಅದರ ಕುರಿತು ಪೋಷಕರಿಗೆ ಇರುವ ಕಳಂಕ ಮತ್ತು ತಪ್ಪು ಕಲ್ಪನೆಗಳು ಒಂದು ಅಡ್ಡಗೋಡೆ. ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಕುಂದು ಬರುತ್ತದೋ ಎಂಬ ಅನಿಸಿಕೆ. ಇದಕ್ಕೆ ಕಾರಣ ಮನೋರೋಗವು ಒಂದು ಕಳಂಕ ಮತ್ತು ಮನೋರೋಗಕ್ಕೆ ಮದ್ದಿಲ್ಲ ಎಂಬ ತಪ್ಪು ಕಲ್ಪನೆಗಳು. ಚಿಕಿತ್ಸೆ ಕೊಡಿಸಿದರೆ, ಮನೋವೈದ್ಯರು ನಿದ್ದೆ ಗುಳಿಗೆಗಳನ್ನು ಕೊಡುತ್ತಾರೆ. ಆಜೀವ ಪರ್ಯಂತ ಔಷಧಗಳನ್ನು ಸೇವಿಸಬೇಕಾಗುತ್ತದೆ ಎಂಬ ಭಯ. ಆದರಿಂದ ಅಡಿಕ್ಷನ್ ಆಗಿ ಮಕ್ಕಳ ಭವಿಷ್ಯ ಹಾಳಾಗುತ್ತದೆ ಎಂದು ಪೋಷಕರು ತಪ್ಪಾಗಿ ಭಾವಿಸುತ್ತಾರೆ. ಹರೆಯದ ಮಕ್ಕಳು ಬೇಸರ ಪಟ್ಟುಕೊಳ್ಳುವುದು, ಮಂಕಾಗಿರುವುದು ಅಥವಾ ತಮಗೆ ಓದುವುದಕ್ಕೆ ಆಸಕ್ತಿ ಇಲ್ಲ ಎಂದು ಹೇಳುವುದು ಸಾಮಾನ್ಯ ಎಂದು ಭಾವಿಸಿ, ತಿಂಗಳು-ವರ್ಷಗಟ್ಟಲೇ ಅವರ ಕುರಿತು ಗಮನಹರಿಸುವುದೇ ಇಲ್ಲ. ಮಗು ಏನಾದರೂ ಅಮ್ಮ ನನಗೆ ಸುಸ್ತಾಗುತ್ತದೆ, ಜೀವವೇ ಬೇಡ ಅನ್ನಿಸುತ್ತೆ ಎಂದರೆ, ಹಾಗೆಲ್ಲಾ ಹೇಳಬಾರದು. ಅದು ಅಪಶಕುನ. ಅಂಥಾದ್ದು ನಿನಗೇನಾಗಿದೆ. ಸುಮ್ಮನೆ ಓದು ಹೋಗು ಎಂದು ಪೋಷಕರು ಹೇಳುತ್ತಾರೆ.

ಮಾನಸಿಕ ಕಾಯಿಲೆಗಳನ್ನು ಗುರುತಿಸಲು ಸಹಾಯಕವಾಗುವ ಕೆಲವು ಅಂಶಗಳನ್ನು ತಿಳಿಯೋಣ. ''ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ಕೆಲವಂ ಮಾಳ್ಪವರಿಂದೆ ಕಂಡು, ಕೆಲವಂ ಸುಜ್ಞಾನದಿಂದ ನೋಡುತಂ ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಾ ಕೇಳ್ವುದಂ ಪಳ್ಳಸಮುದ್ರವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ'' ಎಂಬ ಹಾಗೆ ಆಕಾಶವಾಣಿ, ದೃಶ್ಯ ಮಾಧ್ಯಮಗಳು, ಚಲನ ಚಿತ್ರಗಳ ಮೂಲಕ ತಿಳಿಯುವ ಮಾಹಿತಿಗಳು, ಮುದ್ರಣ ಮಾಧ್ಯಮಗಳಲ್ಲಿ ಬರುವ ಲೇಖನಗಳು, ಅಕ್ಕ ಪಕ್ಕದವರು, ಆತ್ಮೀಯರು ತಮ್ಮ ಅನುಭವಗಳಿಂದ ತಿಳಿಸಿ ಹೇಳುವ ಮಾಹಿತಿಗಳು ಇವು ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು ಪೂರಕವಾಗುತ್ತವೆ.

ಮೇಲಿನ ಅಂಶಗಳು ಹರೆಯದವರಲ್ಲಿ ಮಾನಸಿಕ ಸಮಸ್ಯೆ ಅಥವಾ ಕಾಯಿಲೆಗಳನ್ನು ಪ್ರಾರಂಭದಲ್ಲೇ ಗುರುತಿಸಿ ಚಿಕಿತ್ಸೆ ಕೊಡಿಸಿದರೆ, ಅವರ ಮನೋರೋಗವನ್ನು ಪ್ರಾರಂಭದಲ್ಲೆ ಗುಣಪಡಿಸಬಹುದು.

ಕೆಲವು ಹರೆಯದವರು ತಮ್ಮ ಸಮಸ್ಯೆಗಳನ್ನು ತಾವೇ ನಿಭಾಯಿಸಬಲ್ಲರು. ಇದಕ್ಕೆ ಕಾರಣ ತಮಗೆ ಉಂಟಾಗುವ ವಿಫಲತೆ ಮತ್ತು ಸವಾಲುಗಳನ್ನು ನಿಭಾಯಿಸುವುದು ಹೇಗೆ ಎಂಬುದನ್ನು ತಾಳ್ಮೆಯಿಂದ ಯೋಚಿಸುತ್ತಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿದ್ದರೆ, ಪೋಷಕರು, ಆತ್ಮೀಯ ಗೆಳೆಯರು ಅಥವಾ ಹಿರಿಯರ ಹತ್ತಿರ ಕೇಳಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಸವಾಲಿನಲ್ಲಿ ವಿಫಲರಾದರೆ, ವಿಚಲಿತಗೊಳ್ಳದೇ ತಾಳ್ಮೆಯಿಂದ ಸಮಸ್ಯೆಯನ್ನು ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ಚಿಂತನೆ ನಡೆಸಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಪೋಷಕರು ಮತ್ತು ಸದಸ್ಯರು ಸದಾ ಇವರ ಬೆಂಬಲಕ್ಕಿರುತ್ತಾರೆ. ಬಾಲ್ಯದಿಂದಲೂ ಸಕಾರಾತ್ಮಕವಾಗಿ ಮಾರ್ಗದರ್ಶನ ಮಾಡುವ ಪೋಷಕರು ಅಥವಾ ಹಿರಿಯರ ಸಹಾಯದಿಂದ ಅವಶ್ಯವಾದ ಜೀವನ ಕೌಶಲಗಳನ್ನು ತಮ್ಮಲ್ಲಿ ಅಳವಡಿಸಿಕೊಂಡಿರುತ್ತಾರೆ.

ವಿಶ್ವ ಆರೋಗ್ಯ ಸಂಸ್ಥೆಯು ಹತ್ತು ಜೀವನ ಕೌಶಲಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ರೂಢಿಸಬೇಕೆಂಬ ಸಂದೇಶ ನೀಡಿದೆ. ಅವುಗಳು ಯಾವುವೆಂದರೆ, ಸಮಗ್ರವಾಗಿ ಯೋಚಿಸುವುದು, ಸೃಜನಾತ್ಮಕವಾಗಿ ಯೋಚಿಸುವುದು, ತೀರ್ಮಾನ ಕೈಗೊಳ್ಳುವುದು. ಸಮಸ್ಯೆಗಳನ್ನು ಪರಿಹರಿಸುವುದು, ಪರಿಣಾಮಕಾರೀ ಸಂವಹನ, ಮಾನವೀಯ ಸಂಬಂಧಗಳನ್ನು ನಿಭಾಯಿಸುವುದು, ಅನುಭೂತಿ, ಸ್ವಅರಿವು, ಒತ್ತಡಗಳನ್ನು ನಿಭಾಯಿಸುವುದು, ಮತ್ತು ಭಾವನೆಗಳನ್ನು ಹಿಡಿತದಲ್ಲಿಡುವುದು. ಇವುಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ಪೋಷಕರು ರೂಢಿಗೊಳಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಧೈರ್ಯ, ಸಕಾರಾತ್ಮಕ ಆಲೋಚನೆಗಳು ಮನಸ್ಸನ್ನು ಶಾಂತವಾಗಿಡುತ್ತದೆ. ಹರೆಯದವರು ತಮ್ಮ ಸವಾಲು ಮತ್ತು ಒತ್ತಡಗಳನ್ನು ಸುಲಭವಾಗಿ ನಿಭಾಯಿಸಬಲ್ಲರು.

# ಹಳೆಯ ಪುಸ್ತಕಗಳ, ಹಳತಾಗದ ನೆನಪುಗಳು!

ಮೊದಲೆಲ್ಲ ಪರೀಕ್ಷೆ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು.

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಶೈಕ್ಷಣಿಕ ವರ್ಷವೊಂದು ತನ್ನ ಕೊನೆ ದಿನಗಳನ್ನು ಎಣಿಸಲು ಶುರುವಿಟ್ಟುಕೊಂಡಿದೆ. ಇನ್ನೇನು ಕೆಲವೇ ದಿನಗಳಲ್ಲಿ ಅದು ನನ್ನ ಪಾಳಿ ಮುಗಿಯಿತು ಎಂದು ಎದ್ದು ನಡೆಯಲಿದೆ. ಪರೀಕ್ಷೆಗಳೂ, ಅದರ ಹಿಂದಿನ ಪೋಷಕರ ನಿರೀಕ್ಷೆಗಳೂ ಒಂದೇ ಸಮನೇ, ಏರುತ್ತಿರುವ ಬೇಸಿಗೆಯ ಬಿಸಿಯನ್ನೂ ಹಿಂದಿಕ್ಕಿ ಮೇಲೆ ಮೇಲೇರುತ್ತಲೇ ಇದೆ. ಈ ತಾಪಮಾನ, 'ಕೋಪ'ಮಾನಗಳನ್ನು ಅಳೆಯಲು ಯಾವ ಮಾಪಕವೂ ಸದ್ಯಕ್ಕೆ ಲಭ್ಯವಿಲ್ಲ ಎನ್ನಬಹುದು. ಅಂಕಗಳ ಅಂತರ್ಯದಲ್ಲಿ ಅಡಗಿರುವ ಆತಂಕವೂ ಮೆಲ್ಲಮೆಲ್ಲನೇ ಈಚೆ ಬರಲು ಹವಣಿಸುತ್ತಿರುವ ಕಾಲವಿದು. ಏನೇ ಆದರೂ ಈ ವರ್ಷದ ತನ್ನ ಪ್ರಯತ್ನ 'ರಿಮಾರ್ಕಬಲ್' ಎನಿಸಿಕೊಳ್ಳಬೇಕು, ಎಲ್ಲರಿಂದಲೂ ಅದಕ್ಕಾಗಿ ಹೊಗಳಿಸಿಕೊಳ್ಳಬೇಕು ಎಂದರೆ ಮಕ್ಕಳ ಕೈಯ್ಯಲ್ಲಿ ಇರುವ ಒಂದೇ ಆಯ್ಕೆ ಎಂದರೆ ಅದು ಒಳ್ಳೆಯ 'ಮಾರ್ಕ್' ಗಳಿಸುವುದು. ಇದಕ್ಕಾಗಿ ವರ್ಷ ಪೂರ್ತಿ ಸದ್ದಿಲ್ಲದೇ ಶ್ರಮಿಸುವಲ್ಲಿ ಪುಸ್ತಕಗಳ ಪಾತ್ರವೂ ದೊಡ್ಡದು. ಅಂತಿಪ್ಪ ಪುಸ್ತಕಗಳೂ ತಮ್ಮ ಕೆಲಸ ಮುಗಿಯಿತೆಂದು ಇನ್ನೇನು ನಿಧಾನಕ್ಕೆ ಬದಿಗೆ ಸರಿಯಲಿವೆ. ಹಳತಾದ ಪುಸ್ತಕಗಳ ಈ ಕಾಲದ ಹಳಹಳಿಕೆಗಳೇ ಬೇರೆ. ಆದರೆ ಈ ಹಳೆ ಪುಸ್ತಕಗಳ ಹಿಂದೆ ಎಂದೂ ಹಳತಾಗದ ನೆನಪಿನ ಹೊಳಹುಗಳು ಮಸ್ತಕದಲ್ಲಿ ಸಾಕಷ್ಟು ಸಂಗ್ರಹವಾಗಿದೆ ಎಂದರೆ ಅಂಥವರನ್ನು 90ರ ದಶಕದಲ್ಲಿ ಓದಿ, ಬೆಳೆದವರು ಎಂದು ಖಂಡಿತವಾಗಿಯೂ ಹೇಳಬಹುದು.



ಹಾಗೆ ನೋಡಿದರೆ ಆ ಕಾಲವೇ ಅಂಥದ್ದು. 'ಹಳತು ಹೊನ್ನು' ಎಂಬ ನಂಬಿಕೆ ಅತ್ಯಂತ ಬಲವಾಗಿದ್ದು, ಅದನ್ನು ಎಲ್ಲದರಲ್ಲೂ ಚಾಚೂ ತಪ್ಪದೇ ಪಾಲಿಸಲಾಗುತ್ತಿತ್ತು. 'ಹೊನ್ನು' ಎಂದ ಕಾರಣಕ್ಕೆ ಅದನ್ನು ಸುವರ್ಣ ಕಾಲ ಎನ್ನಬಹುದೇ? ಬರು ಬರುತ್ತಾ ಹೊನ್ನಿನ ದರವೂ ಎರ್ರಾಬಿರ್ರಿ ಏರಿಕೆಯಾಯಿತು. ಹಾಗೆಯೇ ಹಳತೆಲ್ಲ ಹೊನ್ನು ಎಂದು ಭಾವಿಸುವ ಮನೋಭಾವವೂ ಕ್ರಮೇಣ ಹೊಳಪು ಕಳೆದುಕೊಂಡು, ಇಂದಿನವರ ಪಾಲಿಗೆ ಅದು ಅಕ್ಷರಶಃ ಗೋಲ್ಡ್ ಅಲ್ಲ ರೋಲ್ಡ್‌ಗೋಲ್ಡ್ ಎಂದು ಅನಿಸಲೂ ಪ್ರಾರಂಭವಾಯಿತು. ಇರಲಿ ಅದು ಕಾಲದ ಬದಲಾವಣೆಯ ಪ್ರಭಾವವನ್ನಿ. ಮತ್ತೆ ನಾವು ಆ ಹಳೆಯದರತ್ತ ಕೊಂಚ ಹೊರಳೋಣ. ಹಾಗಂತ ಇದು ಬರೀ ಹಳಹಳಿಕೆಯೋ, ಅತಾರ್ಕಿಕ ಹೋಲಿಕೆಯೋ ಅಲ್ಲ.

ಆ ದಿನಮಾನಗಳಲ್ಲಿ ಹಳೆಯ ಪುಸ್ತಕಗಳಿಗೆ ಭಾರೀ ಡಿಮ್ಯಾಂಡ್ ಇದ್ದಿರುತ್ತಿತ್ತು. ಈ ವರ್ಷದ ಪರೀಕ್ಷೆ ಮುಗಿಯಿತು, ಇನ್ನು ಈ ಪುಸ್ತಕಗಳಿಗೆ ಚಿಕ್ಕಾಸಿನ ಬೆಲೆಯೂ ಇಲ್ಲವೇನೋ ಎಂಬಂತೆ ಎಲ್ಲೆಂದರಲ್ಲಿ ಎಸೆಯೋ ರೂಢಿ ಆಗ ಇರಲಿಲ್ಲವಾಗಿತ್ತು. ಪರೀಕ್ಷೆಗಳೆಲ್ಲ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಈ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು. ಅಲ್ಲಿಗೆ ಆ ಪುಸ್ತಕಗಳೆಲ್ಲವೂ ಮಾರುದ್ದದ ಭಾಷಣ, ಭಾರೀ ಪ್ರಚಾರದ ತೆವಲು ಇತ್ಯಾದಿಗಳಾವುವೂ ಇಲ್ಲದೇ ಮರುಬಳಕೆಯಾಗುತ್ತಿದ್ದವು.

ನಿಗದಿತ ತರಗತಿಯ ಪುಸ್ತಕಗಳು, ಆ ವರ್ಷ ಮುಗಿದಾಕ್ಷಣ ತಾವು ತೊಟ್ಟಿದ್ದ ಬಟ್ಟೆಯನ್ನು ಬಿಚ್ಚಿಟ್ಟುಕೊಂಡು, ಅಂದರೆ ಅದಕ್ಕೆ ಹಾಕಿದ್ದ ಬೈಂಡ್‌ನ್ನು ತೆಗೆದಿರಿಸಿಕೊಂಡು ಚೊಕ್ಕಟವಾಗಿ ಜೋಡಿಸಲ್ಪಡುತ್ತಿದ್ದವು. ಒಮ್ಮೆ ಆ ಎಲ್ಲಾ ಹಾಳೆಗಳನ್ನು ತಿರುವಿ ಹಾಕಿ ಅದರೊಳಗೆ ಏನಾದರೂ ಇರಿಸಿದ್ದರೆ ಅದನ್ನೆಲ್ಲಾ ತೆಗೆದು ಅವುಗಳ ಆ ವರ್ಷದ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗುತ್ತಿತ್ತು. ಆದರೆ ಅವುಗಳು ವ್ಯರ್ಥವಾಗುತ್ತಿರಲಿಲ್ಲ, ಬದಲಿಗೆ ನಾಳೆಯ ಇನ್ಯಾರದೋ ಓದಿಗೆ ಅವು ಆ ಮೂಲಕ ಸಜ್ಜುಗೊಳ್ಳುತ್ತಿದ್ದವು. ಆ ವರ್ಷ ಹಾಕಿದ್ದ ಬೈಂಡ್, ಲೇಬಲ್ ಮತ್ತು ಅದರ ಮೇಲೆ ಬರೆದ ಹೆಸರುಗಳಿಗೆ ಅಲ್ಲೇ ಶಾಶ್ವತ ನಿವೃತ್ತಿ. ಆ ಜಾಗಕ್ಕೆ ಇನ್ನು ಬೇರೆ ಪುಸ್ತಕಗಳು ಬಂದರೆ, ಖಾಲಿಯಾದ ಮತ್ಯಾವುದೋ ಜಾಗವನ್ನು ಭರ್ತಿ ಮಾಡಲು ಈ ಪುಸ್ತಕಗಳ ಕಟ್ಟು ಹೊರಡಲನುವಾಗುತ್ತಿತ್ತು. ಪ್ರತೀ ಶೈಕ್ಷಣಿಕ ವರ್ಷಾಂತ್ಯದಲ್ಲೂ ಅದು ತಪ್ಪದೇ ನಡೆಯುವ ಪ್ರಕ್ರಿಯೆ. ಪುಸ್ತಕದ ಗರಿ ಗರಿ ಹಾಳೆಗಳ ನಡುವೆ ಅಲ್ಲಲ್ಲಿ ಹಾಕಿದ್ದ ಚಿತ್ತು, ಕಾಟು, ಗೀಟು ಹಾಗೂ ಗೀಟುಗಳೆಲ್ಲವೂ ತಮ್ಮ ಆ ವರುಷದ ಮಾಲೀಕನಿಗೆ ವಿದಾಯ ಹೇಳಿ, ಇನ್ಯಾರದೋ ಕೈ ಸೇರಲು ಮನಸ್ಸಿಲ್ಲದ ಮನಸ್ಸಿನಲ್ಲಿ ಅನುವಾಗುತ್ತಿದ್ದವು.

ಈ ಹಳೆಯ ಪುಸ್ತಕಗಳ ಕೊಡು-ಕೊಳ್ಳುವಿಕೆ ಎನ್ನುವುದು ಅಂದಿನ ಮಕ್ಕಳಲ್ಲಿ ಒಂದು ರೀತಿಯ ವ್ಯಾಪಾರ ಹಾಗೂ ವ್ಯವಹಾರ ಜ್ಞಾನದ ಪ್ರಾಯೋಗಿಕ ಅನುಭವ ಮೂಡಿಸುವಲ್ಲಿ ಸಫಲವಾಗುತ್ತಿದ್ದವು. ಕೆಲವೊಮ್ಮೆ ಮನೆಯ ಹಿರಿಯರ ಪಾತ್ರವೂ ಇರುತ್ತಿತ್ತು. ಅವರೇ ಖುದ್ದು ಬಂದು ಮುಂದಿನ ವರ್ಷಕ್ಕೆ ಪುಸ್ತಕ ತಮ್ಮ ಮಕ್ಕಳಿಗೇ ನೀಡಬೇಕು ಎಂದು ಆ ಹಳೆಯ ಬುಕ್‌ಗಳನ್ನೇ ಪ್ರೀ-ಬುಕ್ ಮಾಡಿ ಹೋಗುತ್ತಿದ್ದರು. ಆಗೆಲ್ಲ ಸರ್ಕಾರಿಯೇ ಆಗಲಿ ಅಥವಾ ಖಾಸಗಿ ಶಾಲೆಗಳಲ್ಲೇ ಆಗಲಿ ಫ್ರೀ ಬುಕ್ಸ್ ನೀಡುವ ಪದ್ಧತಿ ಚಾಲ್ತಿಯಲ್ಲಿ ಇರಲಿಲ್ಲ. ತಮಗೆ ಬೇಕಾದ ಪುಸ್ತಕಗಳನ್ನು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ವ್ಯವಸ್ಥೆ ಮಾಡಿಕೊಳ್ಳಬೇಕಾದ್ದರಿಂದ ಈ ವಹಿವಾಟು ಒಂದು ಕ್ರಮಬದ್ಧ ರೀತಿಯಲ್ಲಿ ನಡೆಯುತ್ತಿತ್ತು. ತಮ್ಮಲ್ಲಿರುವ ಹಳೆಯ ಪುಸ್ತಕಗಳಿಗೆ ವಿದ್ಯಾರ್ಥಿಯೇ ಒಂದು ಸೆಕೆಂಡ್ ಹ್ಯಾಂಡ್ ದರವನ್ನು ನಿಗದಿಪಡಿಸುತ್ತಿದ್ದರೂ, ಕೆಲವೊಮ್ಮೆ ಅದಕ್ಕಾಗಿ ಹಿರಿಯರ ಸಲಹೆ-ಸೂಚನೆಯನ್ನೂ ಪಡೆದುಕೊಳ್ಳಲಾಗುತ್ತಿತ್ತು. ಪ್ರತೀ ಪುಸ್ತಕದಲ್ಲಿ ಅಚ್ಚಾಗಿರುತ್ತಿದ್ದ ಅಸಲಿ ದರದ ಮೇಲೆಯೇ, ಒಂದು ಪೆನ್ಸಿಲ್‌ನಲ್ಲಿ ಈ ಸೆಕೆಂಡ್ ಹ್ಯಾಂಡ್ ರೇಟ್‌ನ್ನು ನಮೂದಿಸಲಾಗುತ್ತಿತ್ತು. ಕೊನೆಗೆ ಆ ಎಲ್ಲಾ ಬೆಲೆಗಳನ್ನೂ ಒಂದು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ತಮ್ಮಲ್ಲಿರುವ ಗಣಿತದ ಎಲ್ಲಾ ಕೌಶಲ್ಯಗಳನ್ನೂ ಬಳಸಿಕೊಂಡು ಅದರ ಮೊತ್ತವನ್ನು ಲೆಕ್ಕ ಹಾಕಿ, ಇಷ್ಟು ರೂಪಾಯಿ, ಇಂತಿಷ್ಟು ಪೈಸೆ ಎಂದು ಸ್ಪಷ್ಟವಾಗಿ ಬರೆಯುವ ಮೂಲಕ ಬಲೆ ನಿಗದಿಯ ಟಾಸ್ಕ್ ಒಂದು ಹಂತಕ್ಕೆ ಮುಗಿಯುತ್ತಿತ್ತು. ಮತ್ತೇನಿದ್ದರೂ ಮನೆಯವರು ಇನ್ನೊಮ್ಮೆ ಅದನ್ನು ಪರಿಶೀಲಿಸಿ ಸರಿ ಎಂದರೆ, ಅಲ್ಲಿಗೆ ಅದಕ್ಕೆ ಅಪ್ರೂವಲ್ ಸಿಕ್ಕಂತೆಯೇ ಸರಿ.

ಬೆಲೆಯನ್ನಾದರೂ ಯಾವ ಆಧಾರದಲ್ಲಿ ನಿಗದಿಪಡಿಸಲಾಗುತ್ತಿತ್ತು ಎಂದರೆ, ಆ ಪುಸ್ತಕ ಖರೀದಿಸಿ ಎಷ್ಟು ವರ್ಷಗಳಾಗಿವೆ ಎಂಬ ಲೆಕ್ಕಾಚಾರದ ಮೇಲೆ. ಖರೀದಿಸಿ ಒಂದೇ ವರ್ಷ ಆಗಿದ್ದರೆ ಪ್ರತಿಶತ 70 ರಂತೆ, ಎರಡು ಮೂರು ವರ್ಷ ಆಗಿದ್ದರೆ 50 ಪ್ರತಿಶತ ಅದಕ್ಕೂ ಮೀರಿದ್ದರೆ ಆಗ 25-30 ಶೇಕಡಾ ಎಂದು ನಿಗದಿಪಡಿಸಲಾಗುತ್ತಿತ್ತು. ಯಾರಾದರೂ ಶ್ರೀಮಂತರು ಕೆಲವೊಮ್ಮೆ ಉಚಿತವಾಗಿಯೇ ತಮ್ಮ ಮಕ್ಕಳ ಪುಸ್ತಕಗಳನ್ನು ಯಾರಿಗಾದರೂ ಕೊಟ್ಟು ಬಿಟ್ಟರಂತೂ ಆ ಸುದ್ದಿ ಊರಲ್ಲೆಲ್ಲಾ ಹಬ್ಬಿ, ಮುಂದಿನ ವರ್ಷಕ್ಕೆ ಆ ಪುಸ್ತಕ ತಮಗೇ ನೀಡಿ ಎಂದು ಅವರಲ್ಲಿ ಅದೆಷ್ಟೋ ಜನರು ದುಂಬಾಲು ಬೀಳುತ್ತಿದ್ದುದೂ ಉಂಟು. ಇದರ ಪ್ರತೀ ಪೈಸೆ ಪೈಸೆಯನ್ನೂ ಹಗಲು ರಾತ್ರಿಯೆನ್ನದೇ ಕನವರಿಸುವ ಮಕ್ಕಳಿಗೆ ಅದೊಂದು ದೊಡ್ಡ ಮೊತ್ತದಂತೆ ಭಾಸವಾಗುತ್ತಿತ್ತು.

ಇಲ್ಲಿ ಅಡ್ವಾನ್ಸ್ ನೀಡುವ ಕ್ರಮವೂ ಇರುತ್ತಿತ್ತು. ಈ ವರ್ಷದ ಪುಸ್ತಕ ತನಗೇ ನೀಡಬೇಕು ಎಂದು ಎರಡೋ, ಐದೋ ರುಪಾಯಿಯನ್ನು ಮುಂಗಡ ನೀಡಿ ಕಾಯ್ದಿರಿಸಲಾಗುತ್ತಿತ್ತು ಎಂದರೆ ಆ ಪುಸ್ತಕಗಳ ಮಾರ್ಕೆಟ್ ಏನು ಎತ್ತ ಎನ್ನುವುದು ತಿಳಿಯುತ್ತದೆ. ಆ ಪುಸ್ತಕಗಳಿಗೆ ಬುಕ್ ಬೈಂಡ್ ಮಾಡಿಸಿದ್ದರೆ ಆಗ ಅದಕ್ಕೆ ತುಸು ಹೆಚ್ಚುವರಿ ದರ. ಅದೇ ರೀತಿ ಪುಸ್ತಕದ ಸ್ಥಿತಿಗತಿ, ಇಟ್ಟುಕೊಂಡಿರುವ ರೀತಿ, ಅದರ ಬಣ್ಣ, ಮೇಲಿನ ಕಲೆ ಇತ್ಯಾದಿಗಳ ಆಧಾರದ ಮೇಲೆಯೂ ಬೆಲೆಯಲ್ಲಿ ವ್ಯತ್ಯಾಸವಾಗುತ್ತಿತ್ತು. ಖರೀದಿಸಿ ಕೊಂಡು ಹೋದ ಮೇಲೆಯೂ, ಆ ಪುಸ್ತಕಗಳಲ್ಲಿ ಏನಾದರೂ ಸಮಸ್ಯೆ ಕಂಡರೆ, ಆಗ ಕೊಟ್ಟಿರುವ ಬೆಲೆಯ ಮೇಲೇ ಚೌಕಾಸಿಗೆ ಇಳಿಯುವುದು, ವಾಪಾಸು ಕೊಡಲು ಕೇಳುವುದು ಮತ್ತು ಅದರಲ್ಲಿ ಮನೆಯ ದೊಡ್ಡವರೂ ಭಾಗಿಯಾಗುವುದೆಲ್ಲವೂ ನಡೆಯುತ್ತಿತ್ತು.

ಈ ಸೌಭಾಗ್ಯ ಕೇವಲ ಪಠ್ಯ ಪುಸ್ತಕಗಳಿಗಷ್ಟೇ ಸೀಮಿತವಾಗಿರಲಿಲ್ಲ, ನೋಟ್ ಪುಸ್ತಕವೂ ಈ ಮರುಬಳಕೆಗೆ ಒಳಗಾಗುತ್ತಿತ್ತು. ಅದರ ಖಾಲಿ ಹಾಳೆಗಳನ್ನೆಲ್ಲಾ ಕಿತ್ತು ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಪುಸ್ತಕದ ರೀತಿ ಬುಕ್ ಬೈಂಡ್ ಮಾಡಿಸಿ ಇರಿಸಿಕೊಳ್ಳಲಾಗುತ್ತಿತ್ತು. ಈ ಪುಸ್ತಕಗಳೂ, ವಿದ್ಯಾರ್ಥಿಗಳ ಜೊತೆ ಜೊತೆಗೇ ಈ ರೂಪದಲ್ಲಾದರೂ ಮುಂದಿನ ತರಗತಿಗಳಿಗೆ ತೇರ್ಗಡೆ ಹೊಂದುತ್ತಿದ್ದವು. ಬರೆಯದೇ ಉಳಿದ ಒಂದೇ ಒಂದು ಹಾಳೆಯೂ ವ್ಯರ್ಥವಾಗುವ ಸಾಧ್ಯತೆಯೇ ಆಗ ಇರುತ್ತಿರಲಿಲ್ಲ, ಅವು ಕ್ಲಾಸ್ ವರ್ಕ್, ರಫ್ ವರ್ಕ್‌ಗಳಾಗಿ ಬಳಸಲ್ಪಡುತ್ತಿದ್ದವು. ಏನೇ ಹೇಳಿ, ಹಳೆಯದೆಂದು ಹೀಗಳೆಯದೇ, ಹರಿದು ಮೂಲೆಗೆಸೆಯದೇ ಮತ್ತೆ ಮತ್ತೆ ಬಳಸಲು ಕಾರಣವಾಗುವ ಆ ಒಟ್ಟಾರೆ ಚಟುವಟಿಕೆ ಒಂದು ಚೆಂದದ ಪ್ರಕ್ರಿಯೆಯಂತೆ ನಡೆಯುತ್ತಿತ್ತು. ಹೀಗಾಗಿಯೇ ಅದು ಹಳೆಯ ಪುಸ್ತಕದ ನೆನಪುಗಳೇ ಆದರೂ ಅದನ್ನು ಅನುಭವಿಸಿದವರಿಗೆ ಇದೆಂದೂ ಹಳತು ಎಂದೆನಿಸುವುದೇ ಇಲ್ಲ, ಅದು ಸದಾ ಹೊಸತು, ತಾಜಾ ಹಾಗೂ ಹಸಿ ಹಸಿರು!

**ಓವರ್‌ಡೋಸ್**: ಆ ಕಾಲದಲ್ಲಿ ಹಳೆಯದನ್ನು ಉಳಿಸಿಕೊಳ್ಳಲು ಕಾರಣ ಹುಡುಕುತ್ತಿದ್ದರು, ಈಗ ಹೊಸತನ್ನು ಕೊಂಡುಕೊಳ್ಳಲು ಕಾರಣ ಹುಡುಕುತ್ತಾರೆ!

# 36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್-15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್‌ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಾಜಾಗಿ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ಪೈಲಟ್ ಹೆಸರನ್ನು ಅಮೆರಿಕ ಬಹಿರಂಗಗೊಳಿಸಿಲ್ಲ. ಇರಾನ್ ಹೊಡೆದುರುಳಿಸಿದ್ದ ಎಫ್-15ಇ ಯುದ್ಧ ವಿಮಾನದ ಪೈಲಟ್ ಅನ್ನು ಅಮೆರಿಕ ಸೇನಾ ಪಡೆ ತಂಡವೊಂದು ಅದೇ ದಿನ ರಕ್ಷಿಸಿತ್ತು. ಆದರೆ, ಎರಡನೇ ಪೈಲಟ್ ಕಾಣೆಯಾಗಿದ್ದರು. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು. ಪೈಲಟ್ ರಕ್ಷಣೆಗಾಗಿ ಅಮೆರಿಕ ವಿಶೇಷ ಕಾರ್ಯಾಚರಣೆ ನಡೆಸಿತು.

**ಪೈಲಟ್ ರಕ್ಷಣೆಗಾಗಿ ವಿಶೇಷ ಕಾರ್ಯಾಚರಣೆ:** ನಾಪತ್ತೆಯಾಗಿದ್ದ ಎಫ್-15 ಪೈಲಟ್ ಪತ್ತೆಯಾಗುವ ಮುನ್ನವೇ, ಅವರನ್ನು ಪತ್ತೆಹಚ್ಚಿ ಭೂಮಾರ್ಗವಾಗಿ ಇರಾನ್‌ನಿಂದ ಹೊರಕ್ಕೆ ಸುರಕ್ಷಿತ ಸ್ಥಳಾಂತರಿಸಿದ್ದೇವೆ ಎಂಬ ಸುಳ್ಳು ಸುದ್ದಿಯನ್ನು ಅಮೆರಿಕ ಹರಡಿತು. ಸುಳ್ಳು ಸುದ್ದಿ ಹಬ್ಬಿದ್ದರಿಂದ ಇರಾನ್ ಸೇನೆ ಮತ್ತು ನಾಯಕತ್ವ ಗೊಂದಲಕ್ಕೀಡಾಗಿದೆ.




ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಸ್ಥಳವನ್ನು ಪತ್ತೆಹಚ್ಚಲು ಸೇನೆಗೆ ನೆರವಾಗಿದೆ. ಇದು ಬೈಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕುವಂತಹ ಪರಿಸ್ಥಿತಿ ಎಂದು ಅಮೆರಿಕದ ಒಬ್ಬ ಅಧಿಕಾರಿ ಹೇಳಿದ್ದಾರೆ. ಸುಲಭದಲ್ಲಿ ಪತ್ತೆಯಾಗದಂತಹ ಪರ್ವತವೊಂದರ ಬಿರುಕುಗಳಲ್ಲಿ ಅಡಗಿದ್ದ ಅಮೆರಿಕದ ವೀರ ಸೇನಾನಿಯನ್ನು ಸಿಐಎ ಗುಪ್ತಚರ ಮಾಹಿತಿ ಆಧಾರದಲ್ಲಿ ಪತ್ತೆಹಚ್ಚಲಾಯಿತು ಎಂದಿದ್ದಾರೆ.

ಸಿಐಎ ಗುಪ್ತಚರ ಕಾರ್ಯಾಚರಣೆ ಜತೆ ರಕ್ಷಣಾ ಕಾರ್ಯಾಚರಣೆಯಲ್ಲಿ ನೂರಾರು ವಿಶೇಷ ಪಡೆಗಳ ಸೈನಿಕರು, ಡಜನ್‌ಗಟ್ಟಲೆ ಅಮೆರಿಕದ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಭಾಗವಹಿಸಿದ್ದವು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಇರಾನ್ ಭೂಭಾಗದಲ್ಲಿ ಎರಡು ದಿನಗಳ ಕಾಲ ಅಮೆರಿಕದ ವಿಶೇಷ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿವೆ. ಅಮೆರಿಕ ಹುಡುಕಾಟ ನಡೆಸುತ್ತಿದ್ದಾಗ, ಇರಾನ್ ಸೇನೆಯೂ ನಾಪತ್ತೆಯಾಗಿದ್ದ ಪೈಲಟ್ ಪತ್ತೆಹಚ್ಚಲು ತಂಡಗಳನ್ನು ಕಳುಹಿಸಿತ್ತು. ಈ ಪ್ರಯತ್ನಗಳನ್ನು ತಡೆಯಲು, ಅಮೆರಿಕದ ವಾಯುಪಡೆ ಜೆಟ್‌ಗಳು ಇರಾನ್ ಪಡೆಗಳ ಮೇಲೆ ದಾಳಿಗಳನ್ನು ನಡೆಸಿ ಅವುಗಳನ್ನು ಆ ಪ್ರದೇಶಕ್ಕೆ ತಲುಪುವುದನ್ನು ತಡೆಯುವ ಕೆಲಸ ಮಾಡಿವೆ ಎಂದು ಮೂಲಗಳು ತಿಳಿಸಿವೆ.



- ಇರಾನ್‌ನೊಳಗೆ ನುಗ್ಗಿ ದುರ್ಗಮ ಪ್ರದೇಶದಲ್ಲಿ ಅಮೆರಿಕ ರಕ್ಷಣಾ ಕಾರ್ಯಾಚರಣೆ
- ಎಫ್-15ಇ ಪೈಲಟ್ ರಕ್ಷಿಸಿದ ಟ್ರಂಪ್ ಪಡೆ

**ಇರಾನ್-ಅಮೆರಿಕ ಗುಂಡಿನ ಚಕಮಕಿ :** ಸೇನಾ ಕಾರ್ಯಾಚರಣೆಯ ಮಾಹಿತಿಯಿದ್ದ ಇಬ್ಬರು ಅಧಿಕಾರಿಗಳು ನ್ಯೂಯಾರ್ಕ್ ಟೈಮ್ಸ್ ಜತೆ ಮಾತನಾಡಿದ್ದು, ಎರಡನೇ ಪೈಲಟ್ ಪತ್ತೆಹಚ್ಚಿ ರಕ್ಷಣೆಗೆ ಮುಂದಾದಾಗ ಅಮೆರಿಕ ಮತ್ತು ಇರಾನ್ ಸೈನಿಕರ ಮಧ್ಯೆ ಗುಂಡಿನ ಚಕಮಕಿ ನಡೆದಿದೆ. ಅಮೆರಿಕದ ವಿಶೇಷ ಕಾರ್ಯಾಚರಣೆಗಳ ಇತಿಹಾಸದಲ್ಲೇ ಇದು ಅತ್ಯಂತ ಸವಾಲಿನ ಮತ್ತು ಬಹಳ ಸಂಕೀರ್ಣ ಕಾರ್ಯಾಚರಣೆಯಾಗಿತ್ತು ಎಂದು ಹೇಳಿದ್ದಾರೆ.

**ಇರಾನ್‌ನೊಳಗೆ ಸಿಲುಕಿದ್ದ ಎರಡು ಎಂಸಿ-130ಜೆ:** ಶತ್ರು ರಾಷ್ಟ್ರದೊಳಗೆ ರಹಸ್ಯ ಕಾರ್ಯಾಚರಣೆ ವೇಳೆ ಸೈನಿಕರನ್ನು ಒಳನುಗ್ಗಿಸುವ ಮತ್ತು ಹೊರಹಾಕುವ ಎರಡು ಎಂಸಿ-130ಜೆ ವಿಮಾನಗಳು ಪೈಲಟ್ ಹುಡುಕಾಟದ ವೇಳೆ ಇರಾನ್‌ನೊಳಗೆ ಸಿಲುಕಿಕೊಂಡಿದ್ದವು.

ತಮ್ಮ ವೀರನಿಗಾಗಿ ಅಮೆರಿಕ ಕಾರ್ಯಾಚರಣೆ ನಡೆಸುವುದಕ್ಕಾಗಿ ತಾತ್ಕಾಲಿಕ ವಾಯುನೆಲೆಯನ್ನು ಸ್ಥಾಪಿಸಿತ್ತು. ಎರಡು ವಿಮಾನಗಳು ಸಂಚರಿಸಲಾಗದ ಕಾರಣ ಇನ್ನೂ ಮೂರು ವಿಮಾನಗಳನ್ನು ಅಮೆರಿಕ ಕಳುಹಿಸಿಕೊಟ್ಟು ಕಾರ್ಯಾಚರಣೆ ಪೂರ್ಣಗೊಳಿಸಿದೆ.

ಇರಾನ್‌ನಿಂದ ತೆರಳುವ ಮೊದಲು ಆ ಎರಡೂ ವಿಮಾನಗಳನ್ನು ಸ್ಫೋಟಿಸಲು ಅಮೆರಿಕ ನಿರ್ಧರಿಸಿತ್ತು. ಅಮೆರಿಕ ಕಾರ್ಯಾಚರಣೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಎರಡು ಎಂಸಿ-130 ವಿಮಾನಗಳ ಅವಶೇಷಗಳನ್ನು ಪತ್ತೆಹಚ್ಚಿದ ಇರಾನ್ ಸೇನೆ ತಮ್ಮ ದಾಳಿಗೆ ಅಮೆರಿಕದ ವಿಮಾನಗಳು ಧ್ವಂಸಗೊಂಡಿವೆ ಎಂದು ತಪ್ಪಾಗಿ ತಿಳಿದುಕೊಂಡಿವೆ ಎನ್ನಲಾಗಿದೆ.

**ಪಾಳುಬಿದ್ದ ನಿಲ್ದಾಣ ಬಳಸಿದ ಅಮೆರಿಕ:** ದಕ್ಷಿಣ ಇಸ್ಫಹಾನ್ ಪ್ರದೇಶದಲ್ಲಿ ಪಾಳುಬಿದ್ದಿರುವ ವಿಮಾನ ನಿಲ್ದಾಣವನ್ನು ಅಮೆರಿಕ ಸೇನೆ ತನ್ನ ಕಾರ್ಯಾಚರಣೆಯಲ್ಲಿ ಬಳಸಿಕೊಂಡಿದೆ. ಪಾಳುಬಿದ್ದ ವಿಮಾನ ನಿಲ್ದಾಣ ಬಳಸಿಕೊಂಡು ಮೋಸದಿಂದ ತಪ್ಪಿಸಿಕೊಂಡಿದೆ. ಆದರೆ ಅಮೆರಿಕದ ಪೈಲಟ್ ರಕ್ಷಣಾ ಕಾರ್ಯಾಚರಣೆ ಸಂಪೂರ್ಣ ವಿಫಲಗೊಂಡಿದೆ ಎಂದು ಇರಾನ್ ಸೇನಾ ವಕ್ತಾರ ಇಬ್ರಾಹಿಂ ಜೊಲ್ಫಾಘಾರಿ ಭಾನುವಾರ ಆರೋಪಿಸಿದ್ದಾರೆ. ಈ ಕಾರ್ಯಾಚರಣೆಯ ವೇಳೆ ಅಮೆರಿಕದ ಎರಡು ಸಿ-130 ಹರ್ಕ್ಯುಲಸ್ ಸಾರಿಗೆ ವಿಮಾನಗಳು ಹಾಗೂ ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನು ನಾಶ ಮಾಡಿದ್ದೇವೆ. ಐವರು ಅಮೆರಿಕ ಸೈನಿಕರನ್ನು ಹೊಡೆದುರುಳಿಸಿದ್ದೇವೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

## ಪೈಲಟ್ ಸಿಕ್ಕಿದ್ದಾರೆ: ಟ್ರಂಪ್

ಎಫ್-15 ಸ್ಟ್ರೈಕ್ ಈಗಲ್ ಯುದ್ಧ ವಿಮಾನದ ಎರಡನೇ ಪೈಲಟ್‌ನ ರಕ್ಷಣಾ ಕಾರ್ಯಾಚರಣೆ ಯಶಸ್ವಿ ಆಗಿರುವುದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಘೋಷಿಸಿದ್ದಾರೆ. ನನ್ನ ಮಾರ್ಗದರ್ಶನದೊಂದಿಗೆ ಅಮೆರಿಕ ಸೇನೆ ಡಜನ್‌ಗಟ್ಟಲೆ ಯುದ್ಧ ವಿಮಾನಗಳನ್ನು, ಅತ್ಯಂತ ವಿಧ್ವಂಸಕ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ. ಪೈಲಟ್‌ಗೆ ಸಣ್ಣಪುಟ್ಟ ಗಾಯಗಳಾಗಿವೆ. ಆದರೆ ಆತ ಬೇಗನೆ ಗುಣಮುಖರಾಗಲಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ನಮ್ಮ ಅತ್ಯಂತ ಅಸಾಮಾನ್ಯ ಪೈಲಟ್‌ಗಳಲ್ಲೊಬ್ಬರಿಗಾಗಿ ನಡೆಸಿದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ. ನಾವು ನಮ್ಮ ಸೇನಾನಿಗಳನ್ನು ಎಂದೂ ಕೈಬಿಡೆವು. ಈಸ್ಟರ್ ಶುಭಾಶಯಗಳು ಎಂದಿದ್ದಾರೆ.

## ಇರಾನ್‌ನಲ್ಲಿ ಸಿಲುಕಿದ್ದ ಭಾರತದ 345 ಮೀನುಗಾರರು ಸ್ವದೇಶಕ್ಕೆ

**ಚೆನ್ನೈ:** ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಗಳ ನಡುವೆ ಇರಾನ್‌ನಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಮೀನುಗಾರರ ರಕ್ಷಣಾ ಕಾರ್ಯ ಯಶಸ್ವಿಯಾಗಿ ನಡೆದಿದೆ. ಸುಮಾರು 345 ಭಾರತೀಯ ಮೀನುಗಾರರನ್ನು ಅರ್ಮೇನಿಯಾ ಮಾರ್ಗವಾಗಿ ಸ್ಥಳಾಂತರಿಸಿ ವಿಶೇಷ ವಿಮಾನದ ಮೂಲಕ ಶನಿವಾರ ಸಂಜೆ ಚೆನ್ನೈಗೆ ಸುರಕ್ಷಿತವಾಗಿ ಕರೆತರಲಾಗಿದೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಮೀನುಗಾರರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಅವರನ್ನು ತಮ್ಮ ತಮ್ಮ ಊರುಗಳಿಗೆ ತೆರಳಲು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಯಿತು. ಸಚಿವರು ಮಾತನಾಡುತ್ತಾ, ಯುದ್ಧಪೀಡಿತ ಪ್ರದೇಶದಲ್ಲಿ ಸಿಲುಕಿದ್ದ ಮೀನುಗಾರರು ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದರೂ, ಸರ್ಕಾರದ ಸಮನ್ವಯಿತ ಪ್ರಯತ್ನಗಳಿಂದ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲಾಗಿದೆ ಎಂದು ತಿಳಿಸಿದರು. ಈ ಕಾರ್ಯಾಚರಣೆ ವಿದೇಶಾಂಗ ಸಚಿವಾಲಯದ ನಿರಂತರ ಪ್ರಯತ್ನಗಳ ಭಾಗವಾಗಿದ್ದು, ಸಂಘರ್ಷದ ಹಿನ್ನೆಲೆ ವಿಮಾನ ಸೇವೆಗಳು ಸ್ಥಗಿತಗೊಂಡಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ವಿಳಂಬ ಉಂಟಾಗಿತ್ತು. ಮೊದಲ ಹಂತದಲ್ಲಿ ಮೀನುಗಾರರನ್ನು ಇರಾನಿನಿಂದ ಅರ್ಮೇನಿಯಾಗೆ ಸ್ಥಳಾಂತರಿಸಿ, ಅಲ್ಲಿಂದ ವಿಶೇಷ ವಿಮಾನದ ಮೂಲಕ ಭಾರತಕ್ಕೆ ಕರೆತರಲಾಯಿತು. ಈ 345 ಮಂದಿಯಲ್ಲಿ ಬಹುತೇಕರು ತಮಿಳುನಾಡಿನವರು(327 ಜನರು) ಆಗಿದ್ದು, ಉಳಿದವರು ಕೇರಳ, ಪುದುಚೇರಿ, ಗುಜರಾತ್ ಮತ್ತು ಒಡಿಶಾ ರಾಜ್ಯಗಳಿಗೆ ಸೇರಿದವರು. ತಮಿಳುನಾಡಿನ ಮೀನುಗಾರರನ್ನು ವಿವಿಧ ಜಿಲ್ಲೆಗಳಾದ ಕನ್ಯಾಕುಮಾರಿ, ತಿರುನಲ್ವೇಲಿ ಸೇರಿದಂತೆ ಹಲವು ಪ್ರದೇಶಗಳಿಗೆ ವಿಶೇಷ ಬಸ್ಸುಗಳಲ್ಲಿ ಕಳುಹಿಸಲಾಯಿತು. ಮೀನುಗಾರರು ತಮ್ಮ ಸಂಕಷ್ಟವನ್ನು ಹಂಚಿಕೊಂಡು, ತಕ್ಷಣ ಕ್ರಮ ಕೈಗೊಂಡ ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಇನ್ನು ಉಳಿದ ಭಾರತೀಯರನ್ನು ಕೂಡ ಶೀಘ್ರದಲ್ಲೇ ಸುರಕ್ಷಿತವಾಗಿ ಮರಳಿ ತರಲು ಸರ್ಕಾರ ಕ್ರಮಗಳನ್ನು ಮುಂದುವರಿಸುತ್ತಿದೆ.



## ಇರಾನ್ ಪ್ರತೀಕಾರದ ದಾಳಿ

ಕಳೆದ ವಾರ ಡೊನಾಲ್ಡ್ ಟ್ರಂಪ್ ಇರಾನ್ ಅನ್ನು ಅಮೆರಿಕ ಸಂಪೂರ್ಣವಾಗಿ ಧ್ವಂಸಗೊಳಿಸಿದೆ ಮತ್ತು ಯುದ್ಧವನ್ನು ತ್ವರಿತವಾಗಿ ಮುಗಿಸುತ್ತೇವೆ ಎಂದು ಹೇಳಿದ ನಂತರ ಇರಾನ್ ತನ್ನ ಪ್ರತೀಕಾರದ ದಾಳಿ ತೀವ್ರಗೊಳಿಸಿದ್ದು, ಅಮೆರಿಕದ ಎರಡು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ. ಇದು ಬಾಂಬ್ ದಾಳಿಗಳ ನಡುವೆಯೂ ದುರ್ಬಲಗೊಂಡಿದ್ದ ಇರಾನ್ ಸೇನೆ ಇನ್ನೂ ಪ್ರತಿದಾಳಿ ಮಾಡಲು ಸಾಧ್ಯವಿದೆ ಎಂಬುದನ್ನು ತೋರಿಸುತ್ತದೆ. ಕುಸಿದ ಮತ್ತೊಂದು ವಿಮಾನವು ಅಮೆರಿಕದ ಎಫ್-10 ದಾಳಿ ವಿಮಾನವಾಗಿತ್ತು. ಅದರ ಸಿಬ್ಬಂದಿಯ ಸ್ಥಿತಿ ಅಥವಾ ಅದು ಎಲ್ಲಿ ಕುಸಿದಿತು ಎಂಬುದು ತಕ್ಷಣ ಸ್ಪಷ್ಟವಾಗಿಲ್ಲ, ಭಾನುವಾರ, ಇರಾನ್ ಸರ್ಕಾರದ ಟಿವಿ ಅಮೆರಿಕದ ವಿಮಾನಗಳ ಅವಶೇಷಗಳು ಎಂದು ಹೇಳಲಾದ ವಿಡಿಯೋವನ್ನು ಪ್ರಸಾರ ಮಾಡಿದೆ. ಜತೆಗೆ ದಟ್ಟವಾದ ಕಪ್ಪು ಹೊಗೆ ಏರುತ್ತಿರುವ ಚಿತ್ರವನ್ನೂ ತೋರಿಸಲಾಯಿತು. ಪ್ರಸಾರ ಸಂಸ್ಥೆಯ ಪ್ರಕಾರ, ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಒಂದು ಅಮೆರಿಕದ ಸಾರಿಗೆ ವಿಮಾನ ಮತ್ತು ಎರಡು ಹೆಲಿಕಾಪ್ಟರ್‌ಗಳನ್ನು ಇರಾನ್ ಹೊಡೆದುರುಳಿಸಿದೆ.

ಆದರೆ, ಮಿಷನ್ ಬಗ್ಗೆ ಮಾಹಿತಿ ಹೊಂದಿದ್ದ ಪ್ರಾದೇಶಿಕ ಗುಪ್ತಚರ ಅಧಿಕಾರಿ ಒಬ್ಬರು, ತಾಂತ್ರಿಕ ದೋಷದಿಂದ ಅಮೆರಿಕ ಸೇನೆ ಸ್ವತಃ ಎರಡು ಸಾರಿಗೆ ವಿಮಾನಗಳನ್ನು ಸ್ಫೋಟಗೊಳಿಸಬೇಕಾಯಿತು ಎಂದು ಹೇಳಿದ್ದಾರೆ. ಇದರಿಂದ ರಕ್ಷಣಾ ಕಾರ್ಯವನ್ನು ಪೂರ್ಣಗೊಳಿಸಲು ಹೆಚ್ಚುವರಿ ವಿಮಾನಗಳನ್ನು ಬಳಸಬೇಕಾಯಿತು. ಇರಾನ್ ಜಂಟಿ ಸೇನಾ ಕಮಾಂಡ್ ಭಾನುವಾರ ನಾಲ್ಕು ಅಮೆರಿಕದ ವಿಮಾನಗಳು ನಾಶವಾಗಿವೆ ಎಂದು ಹೇಳಿ, ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ನಾಗರಿಕ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ, ತಾವು ಹೆಚ್ಚಿನ ತೀವ್ರ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಸಿದೆ.





## ಮೂರು ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

ಕುವೈತ್‌ನಲ್ಲಿ ಇರಾನ್ ಡ್ರೋನ್ ದಾಳಿಯಿಂದ ವಿದ್ಯುತ್ ಘಟಕಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳಿಗೆ ಭಾರೀ ಹಾನಿಯಾಗಿದೆ. ಜತೆಗೆ ನೀರಿನ ಉಪ್ಪು ತೆಗೆಯುವ ಘಟಕವೂ ಕಾರ್ಯನಿರ್ವಹಣೆಯಿಂದ ಸ್ಥಗಿತಗೊಳಿಸಿದೆ. ಬಹ್ರೇನ್‌ನಲ್ಲಿ ಡ್ರೋನ್ ದಾಳಿಯಿಂದ ರಾಷ್ಟ್ರೀಯ ತೈಲ ಕಂಪನಿಯ ಸಂಗ್ರಹ ಕೇಂದ್ರ ಮತ್ತು ಸರ್ಕಾರಿ ಪೆಟ್ರೋಕೆಮಿಕಲ್ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ, ರುವೈಸ್‌ನ ಪೆಟ್ರೋಕೆಮಿಕಲ್ ಘಟಕದಲ್ಲಿ ತಡೆಗಟ್ಟಲಾದ ಡ್ರೋನ್ ಅವಶೇಷಗಳಿಂದ ಬೆಂಕಿ ಕಾಣಿಸಿಕೊಂಡು ಕಾರ್ಯಾಚರಣೆ ಸ್ಥಗಿತಗೊಂಡಿತು. ಈ ದಾಳಿಗಳು ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ನಡೆಸಿದ ದಾಳಿಯ ನಂತರ ನಡೆದಿವೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಆ ಘಟಕವು ಯುದ್ಧಕ್ಕೆ ಹಣ ಒದಗಿಸುತ್ತಿದೆ ಎಂದು ಹೇಳಿದ್ದಾರೆ. ಪೆಟ್ರೋಕೆಮಿಕಲ್ ಉದ್ಯಮವು ಗಲ್ಫ್ ರಾಷ್ಟ್ರಗಳ ಪ್ರಮುಖ ಆರ್ಥಿಕ ಕ್ಷೇತ್ರವಾಗಿದೆ. ಇವು ಪ್ಲಾಸ್ಟಿಕ್, ಪಾಲಿಮರ್, ರಸಗೊಬ್ಬರ ಉತ್ಪಾದನೆಗೆ ಬಳಸಲಾಗುತ್ತವೆ ಮತ್ತು ಬಿಲಿಯನ್ ಡಾಲರ್‌ಗಳಷ್ಟು ಆದಾಯ ತರುತ್ತವೆ.

### ಮುಂದುವರಿದ ಸಂಧಾನ ಯತ್ನ

ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ವಕ್ತಾರ ತಾಹಿರ್ ಅಂದ್ರಾಬಿ, ಯುದ್ಧ ವಿರಾಮದ ಮಾತುಕತೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ಹೇಳಿದ್ದಾರೆ. ಪಾಕಿಸ್ತಾನ, ಟರ್ಕಿ ಮತ್ತು ಈಜಿಪ್ಟ್ ದೇಶಗಳು ಮಧ್ಯಸ್ಥಿಕೆ ನಡೆಸಿ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಸಲು ಪ್ರಯತ್ನಿಸುತ್ತಿವೆ.ಈ ಪ್ರಸ್ತಾಪದಲ್ಲಿ ಯುದ್ಧ ವಿರಾಮದ ಮೂಲಕ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವುದು ಉದ್ದೇಶವಾಗಿದೆ.

### ಸಾವು-ನೋವು ಹೆಚ್ಚಳ

ಯುದ್ಧ ಪ್ರಾರಂಭವಾದ ನಂತರ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ಪಶ್ಚಿಮ ತೀರ ಪ್ರದೇಶದಲ್ಲಿ ಎರಡು ಡಜನ್ ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಜನರು ಮತ್ತು 13 ಅಮೆರಿಕ ಸೈನಿಕರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಅಲ್ಲದೆ 10 ಇಸ್ರೇಲ್ ಸೈನಿಕರೂ ಮೃತರಾಗಿದ್ದಾರೆ.

## ಕಿರುಸುದ್ದಿ

### ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ನಾಮ ನಿರ್ದೇಶನ ಸಲ್ಲಿಕೆಯ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾದ ನಾಲ್ವರು ಕೋಲ್ಕತ್ತಾ ಪೊಲೀಸ್ ಸಿಬ್ಬಂದಿಯನ್ನು ಚುನಾವಣಾ ಆಯೋಗ ಅಮಾನತುಗೊಳಿಸಿದೆ. ಏ.2ರಂದು ಸುವೇಂದು ಅಧಿಕಾರಿಯವರ ನಾಮ ನಿರ್ದೇಶನ ಸಂದರ್ಭ ಬಿಜೆಪಿ ಆಯೋಜಿಸಿದ್ದ ಬೃಹತ್ ರೋಡ್‌ಶೋ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಿವಾಸದ ಸಮೀಪ ಕಾಳಿಘಾಟ್ ತಲುಪಿದ್ದಾಗ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಧ್ವಜವನ್ನು ತೋರಿಸಿ ಜಯ್ ಬಾಂಗ್ಲಾ ಮತ್ತು ಮಮತಾ ಬ್ಯಾನರ್ಜಿ ಜಿಂದಾಬಾದ್ ಎಂಬ ಘೋಷಣೆಗಳನ್ನು ಕೂಗುತ್ತಾ ಸುವೇಂದು ರೋಡ್‌ಶೋ ತಡೆದಿದ್ದರು. ಈ ವೇಳೆ ಎರಡೂ ಬಣಗಳು ಎದುರೆದುರು ನಿಂತು ಘೋಷಣೆಗಳನ್ನು ಕೂಗುತ್ತಾ ನಿಂತಿದ್ದವು. ಇದಾದ ಬಳಿಕ ಪೊಲೀಸ್ ಗುಂಪುಗಳು ಹೊಡೆದಾಡುವುದನ್ನು ತಡೆದಿದ್ದಾರೆ.

**ತರೂರ್ ಮೇಲೆ ದಾಳಿ ಯತ್ನ:** ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ತೆರಳಿದ್ದ ಕಾಂಗ್ರೆಸ್ ಸಂಸದ ಶಶಿ ತರೂರ್ ಮೇಲೆ ದಾಳಿ ಯತ್ನ ನಡೆದಿದ್ದು, ತರೂರ್ ಭದ್ರತಾ ಸಿಬ್ಬಂದಿ ಮತ್ತು ಅವರ ಕಾರು ಚಾಲಕನ ಮೇಲೆ ಐವರ ಗುಂಪೊಂದು ಹಲ್ಲೆ ನಡೆಸಿತ್ತು. ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

## ಐಸಿಸ್ ಉಗ್ರರ ಸಂಚು ಭೇದಿಸಿದ ಪೊಲೀಸರು

**ಅಮರಾವತಿ:** ಆಂಧ್ರ ಪ್ರದೇಶದಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಬಂಧಿತ ಉಗ್ರ ಸಂಚೊಂದನ್ನು ಪೊಲೀಸರು ಭೇದಿಸಿದ್ದಾರೆಂದು ಗುಪ್ತಚರ ಇಲಾಖೆಯ ಮೂಲಗಳು ಭಾನುವಾರ ತಿಳಿಸಿವೆ. ಪ್ರಕರಣದಲ್ಲಿ ವಿದೇಶಿ ಹ್ಯಾಂಡ್ಲರ್‌ಗಳು, ಇಸ್ಲಾಮಿಕ್ ಸ್ಟೇಟ್ (ಐಸಿಸ್) ಸೇರಿದಂತೆ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳು ಒಳಗೊಂಡಿದ್ದು, ದಕ್ಷಿಣ ಭಾರತದಲ್ಲಿ ಮುಸ್ಲಿಂ ಯುವಕರಲ್ಲಿ ಇಸ್ಲಾಮಿಕ್ ಉಗ್ರವಾದ ಪ್ರಚರಿಸಲು ಸಂಚು ರೂಪಿಸಿದ್ದರೆಂದು ಮೂಲಗಳು ತಿಳಿಸಿವೆ. ಈ ಹಿಂದೆಯೇ ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಕ್ಕೆ ಆಂಧ್ರಪ್ರದೇಶ ಪೊಲೀಸ್ ವಿವಿಧ ತಂಡಗಳನ್ನು ಕಳುಹಿಸಿತ್ತು. ಆಂಧ್ರಪ್ರದೇಶದಲ್ಲಿ ಮೂವರು ಮತ್ತು ಇತರ ರಾಜ್ಯಗಳಿಂದ ಅಂದಾಜು 12 ಶಂಕಿತರನ್ನು ಪೊಲೀಸರು ಬಂಧಿಸಿದ್ದಾರೆ. ರಹಮತ್ತುಲ್ಲಾ ಶರೀಫ್ ಮುಖ್ಯ ಆರೋಪಿ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ. ಜಿಹಾದಿ ಮುಸ್ಲಿಂ ಮಹಿಳೆಯರಿಗಾಗಿ ಖವಾತೀನ್ ಎಂಬ ಪ್ರತ್ಯೇಕ ಮಹಿಳಾ ಘಟಕ ನಿರ್ಮಾಣ ಮಾಡಲಾಗಿತ್ತು. ಜಿಹಾದಿ ಸಂಚಿನ ಹಿಂದೆ ವಿದೇಶಿ ಹ್ಯಾಂಡ್ಲರ್‌ಗಳು, ಇರಾಕ್ ಮತ್ತು ಸಿರಿಯಾದಲ್ಲಿನ ಐಸಿಸ್, ಭಾರತೀಯ ಉಪಖಂಡದ ಅಲ್-ಖೈದಾ ಉಗ್ರ ಸಂಘಟನೆಗಳು ಒಳಗೊಂಡಿವೆ. ಕುಖ್ಯಾತ ಉಗ್ರರ ವಿಡಿಯೋ ಬಳಕೆ: ಒಸಾಮಾ ಬಿನ್ ಲಾಡೆನ್, ಇಸ್ರಾರ್ ಅಹ್ಮದ್ ಶೇಖ್, ಝಾಕಿರ್ ನಾಯ್ಕ್ ಮತ್ತು ಅನ್ವರ್ ಅಲ್-ಅವ್ಲಾಕಿ ಮೊದಲಾದ ಕುಖ್ಯಾತ ಉಗ್ರರ ವಿಡಿಯೋ ತೋರಿಸಿ ಭಾರತೀ ಮುಸ್ಲಿಂ ಯುವಕರನ್ನು ಭಯೋತ್ಪಾದನೆಯತ್ತ ಸೆಳೆಯುತ್ತಿದ್ದರೆಂದು ತಿಳಿದುಬಂದಿದೆ.

## ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ

**ಹೊಸದಿಲ್ಲಿ:** ಸಣ್ಣ 5 ಕೆ.ಜಿ. ಎಲ್‌ಪಿಜಿ ಸಿಲಿಂಡರ್‌ಗಳು ದೇಶದೆಲ್ಲೆಡೆ ಎಲ್‌ಪಿಜಿ ಪೂರೈಕೆದಾರರ ಬಳಿ ಮಾರಾಟಕ್ಕೆ ಲಭ್ಯವಿದೆ. ಶನಿವಾರ ಒಟ್ಟು 90,000 ಇಂಥಾ ಸಿಲಿಂಡರ್‌ಗಳ ಮಾರಾಟವಾಗಿವೆ. ಮಾ.23ರಿಂದ ಇಲ್ಲಿಯವರೆಗೆ ಒಟ್ಟು 6.6 ಲಕ್ಷ ಸಣ್ಣ ಅಡುಗೆ ಅನಿಲ ಸಿಲಿಂಡರ್‌ಗಳ ಮಾರಾಟವಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಭಾನುವಾರ ಹೇಳಿಕೆ ನೀಡಿದೆ. ಮಾ.23ರಿಂದ ಎಲ್‌ಪಿಜಿ ಪೂರೈಕೆದಾರರು ಅಥವಾ ಡೀಲರ್‌ಗಳ ಬಳಿ ಮಾನ್ಯ ಗುರುತಿನ ಚೀಟಿಗಳನ್ನು ತೋರಿಸಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸಬ್ಸಿಡಿ ಇರುವ ಗೃಹಬಳಕೆಯ 14.2 ಕೆ.ಜಿ ಸಿಲಿಂಡರ್‌ಗಳನ್ನು ಹೊರತುಪಡಿಸಿ, 5 ಕೆ.ಜಿ ಸಿಲಿಂಡರ್‌ಗಳು (ಎಫ್‌ಟಿಎಲ್) ಮಾರುಕಟ್ಟೆ ಬೆಲೆಗೆ ಲಭ್ಯವಿರಲಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ದಿನವೊಂದರಲ್ಲಿ 51 ಲಕ್ಷ ಗೃಹಬಳಕೆಯ ಸಿಲಿಂಡರ್‌ಗಳ ಮಾರಾಟವಾಗುತ್ತವೆ. ಒಟ್ಟು ಬೇಡಿಕೆಯ ಶೇ.95 ಬುಕ್ಕಿಂಗ್ ಆನ್‌ಲೈನ್ ಮುಖೇನ ನಡೆಯುತ್ತವೆ. ಬ್ಲ್ಯಾಕ್ ಮಾರ್ಕೆಟ್ ಮೂಲಕ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ಮಾರಾಟದ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮ ತೆಗೆದುಕೊಳ್ಳಲು ಸಚಿವಾಲಯ ಸೂಚನೆ ನೀಡಿದೆ. ಮಾರ್ಚ್‌ನಿಂದ ಇಲ್ಲಿಯವರೆಗೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಅಕ್ರಮ ಮಾರಾಟವಾಗುತ್ತಿದ್ದ 50,000 ಸಿಲಿಂಡರ್‌ಗಳನ್ನು ವಶಪಡಿಸಿದ್ದು, ಸುಮಾರು 1,400 ಎಲ್‌ಪಿಜಿ ಪೂರೈಕೆದಾರರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಇಲ್ಲಿಯವರೆಗೆ 36 ಪೂರೈಕೆದಾರರ ಡೀಲರ್‌ಶಿಪ್ (ಪೂರೈಕೆ ಪರವಾನಗಿ) ಅಮಾನತುಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

## 650 ಕೋಟಿ ರೂ. ಅಕ್ರಮ ನಗದು, ಮಾದಕವಸ್ತು ವಶ

**ಹೊಸದಿಲ್ಲಿ :** ಚುನಾವಣೆ ಎದುರಿಸಲಿರುವ ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಮತದಾರರನ್ನು ಓಲೈಸಲು ಬಳಕೆಯಾಗಲಿದ್ದ ಸುಮಾರು 650 ಕೋಟಿ ರೂ.ಅಕ್ರಮ ನಗದು, ಮಾದಕವಸ್ತುಗಳು ಮತ್ತು ಮದ್ಯವನ್ನು ಅನುಷ್ಠಾನ ನಿರ್ದೇಶನಾಲಯ ಅಧಿಕಾರಿಗಳು ಮುಟ್ಟುಗೋಲು ಹಾಕಿದ್ದಾರೆಂದು ಚುನಾವಣಾ ಆಯೋಗ ಭಾನುವಾರ ಮಾಹಿತಿ ನೀಡಿದೆ. ರೂ.319 ಕೋಟಿ ಅಕ್ರಮ ನಗದು, ಮಾದಕ ವಸ್ತುಗಳು, ಅಕ್ರಮ ಮದ್ಯ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಪ.ಬಂಗಾಳದಲ್ಲಿ ಮುಟ್ಟುಗೋಲು ಹಾಕಿದ್ದು, 170ಕೋಟಿ ರೂ.ಮೊತ್ತದ ವಸ್ತುಗಳನ್ನು ತಮಿಳ್ನಾಡಿನಿಂದ ವಶಪಡಿಸಲಾಗಿದೆ ಎಂದು ಆಯೋಗ ವಿವರಿಸಿದೆ.

ಜನರಿಂದ ಬರುವ ದೂರುಗಳನ್ನು 100 ನಿಮಿಷಗಳೊಳಗೆ ಇತ್ಯರ್ಥಪಡಿಸಲು 5,173 ಫ್ಲೈಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿದೆ. ವಿವಿಧ ಕೇಂದ್ರಗಳಲ್ಲಿ ದಿಢೀರ್ ನಾಕಾಬಂಧಿ ರಚಿಸಲು 5,200 ಸ್ಟಾಟಿಕ್ ಸರ್ವೆಲೆನ್ಸ್ ಟೀಮ್(ಎಸ್‌ಎಸ್‌ಟಿ)ಗಳನ್ನು ನಿಯೋಜಿಸಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ. ಕೇರಳ , ಅಸ್ಸಾಂ ಮತ್ತು ಪುದುಚೇರಿಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಪ.ಬಂಗಾಳದಲ್ಲಿ ಎರಡು ಹಂತಗಳಲ್ಲಾಗಿ ಏ.23, 29ರಂದು ಚುನಾವಣೆಯಿದೆ. ತಮಿಳ್ನಾಡಲ್ಲಿ ಒಂದೇ ಹಂತದಲ್ಲಿ ಏ. 23ರಂದು ಮತದಾನ ನಡೆಯಲಿದೆ. ಆರು ರಾಜ್ಯಗಳಲ್ಲಿ ಎಂಟು ಸೀಟುಗಳಿಗೆ ಏ.9, 23ರಂದು ವಿಧಾನಸಭಾ ಉಪ ಚುನಾವಣೆ ನಡೆಯಲಿದೆ. ಇಲೆಕ್ಟ್ರಾನಿಕ್ ಸೀಝುರ್ ಮೆನೇಜ್‌ಮೆಂಟ್ ಸಿಸ್ಟಮ್ ನಿಂದ(ಇಎಸ್‌ಎಂಎಸ್) ಡೇಟಾ ಸಂಗ್ರಹಿಸಲಾಗಿದೆ ಎಂದು ಆಯೋಗ ತಿಳಿಸಿದೆ. ವಿಧಾನಸಭಾ ಚುನಾವಣೆ ಮತ್ತು ಉಪ ಚುನಾವಣೆಗಳನ್ನು ಮಾರ್ಚ್ 15ರಂದು ಘೋಷಿಸಲಾಗಿತ್ತು.

## ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ

**ಚಂಡೀಗಢ:** ಇಲ್ಲಿನ ಬಿಜೆಪಿ ಮುಖ್ಯ ಕಚೇರಿಯ ಹೊರಗೆ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಇಬ್ಬರು ಪ್ರಮುಖ ಆರೋಪಿಗಳನ್ನು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 7ಕ್ಕೇರಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಭಾನುವಾರ ತಿಳಿಸಿದ್ದಾರೆ. ಆರೋಪಿಗಳು ಪಾಕಿಸ್ತಾನದ ಇಂಟರ್-ಸರ್ವಿಸಸ್ ಇಂಟೆಲಿಜೆನ್ಸ್(ಐಎಸ್‌ಐ) ಬೆಂಬಲಿತ ಜಾಲದ ಭಾಗವಾಗಿದ್ದು, ಜರ್ಮನಿ ಮತ್ತು ಪೋರ್ಚುಗಲ್‌ನಲ್ಲಿರುವ ತಮ್ಮ ಹ್ಯಾಂಡ್ಲರ್‌ಗಳಿಂದ ಸೂಚನೆಗಳನ್ನು ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಹರ್ಯಾಣದ ರೇವಾರಿ ಪಟ್ಟಣದಲ್ಲಿ ಶನಿವಾರ ರಾತ್ರಿ ಹರಿಯಾಣ ಪೊಲೀಸ್ ವಿಶೇಷ ಕಾರ್ಯಪಡೆ(ಎಸ್‌ಟಿಎಫ್) ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಈ ಬಂಧನಗಳು ನಡೆದಿವೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ. ಬಂಧಿತ ಇಬ್ಬರನ್ನು ಗುರುತೇಜ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಎಂದು ಗುರುತಿಸಲಾಗಿದ್ದು, ಇವರು ಪಂಜಾಬ್‌ನ ರೂಪನಗರ ಜಿಲ್ಲೆಯ ರತನ್‌ಗಢ ನಿವಾಸಿಗಳು. ಇವರು ರೈಡ್-ಹೈಲಿಂಗ್ ಸೇವೆ ರಾಪಿಡೊಗಾಗಿ ಬೈಕ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಐಎಸ್‌ಐ ಹ್ಯಾಂಡ್ಲರ್‌ಗಳು ಆರೋಪಿಗಳಿಗೆ 2 ಲಕ್ಷ ಹಣದ ಆಮಿಷವೊಡ್ಡಿದ್ದರು ಎಂದು ಡಿಜಿಪಿ ತಿಳಿಸಿದ್ದಾರೆ.

### ಒಳನುಸುಳುಕೋರರನ್ನು ವಿರೋಧಿಸುತ್ತೇವೆ ವಿನಾ ಮುಸ್ಲಿಮರನ್ನಲ್ಲ

# ಸಮಸ್ತರ ಕಲ್ಯಾಣ ಬಿಜೆಪಿ ನೀತಿ: ಗಡ್ಕರಿ

**ಹೊಸದಿಲ್ಲಿ:** ಯಾವುದೇ ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಜತೆಯಾಗಿ ಮುಂದಕ್ಕೊಯ್ಯೋದು, ಎಲ್ಲರ ಒಳಗೊಳ್ಳುವಿಕೆಗೆ ಅವಕಾಶ ನೀಡುವ ಅಭಿವೃದ್ಧಿ ಯೋಜನೆಗಳ ಸಾಕಾರ, ಸಮಸ್ತರ ಕಲ್ಯಾಣ ಬಿಜೆಪಿ ನೀತಿ. ನಾವು ಅಕ್ರಮ ನುಸುಳುಕೋರರನ್ನು ವಿರೋಧಿಸುತ್ತೇವೆ ವಿನಾ ಮುಸಲ್ಮಾನರನ್ನಲ್ಲ ಎಂದು ಬಿಜೆಪಿ ಹಿರಿಯ ನಾಯಕ, ಕೇಂದ್ರ ಸಚಿವ ನಿತಿನ್ ಗಡ್ಕರಿ ನುಡಿದರು.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನಾವು ಖಂಡಿತ ಜಯಿಸುತ್ತೇವೆಂಬ ನಂಬಿಕೆ ತನ್ನದು ಎಂದವರು ಪಿಟಿಐಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಮೂಲಸೌಕರ್ಯ ರಂಗಗಳಿಗೆ ಬೃಹತ್ ಪ್ರಮಾಣದಲ್ಲಿ ಹೂಡಿಕೆಗಳು ಮತ್ತು ಆಡಳಿತ ಕೇಂದ್ರಿತ ಪ್ರಯತ್ನಗಳು ಬಿಜೆಪಿಯ ಪ್ರಚಾರ ಕಾರ್ಯತಂತ್ರದ ಪ್ರಧಾನ ಸ್ತಂಭಗಳಾಗಿವೆ ಎಂದು ಪಕ್ಷದ ಅಭಿವೃದ್ಧಿ ಸಾಧನೆಗಳತ್ತ ಗಮನ ಸೆಳೆದರು.

ಅಸ್ಸಾಂ ಸಹಿತ ಈಶಾನ್ಯ ವಲಯದಲ್ಲಿ 5 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನುಷ್ಠಾನಿಸಲಾಗುತ್ತಿದೆ. 1.5 ಲಕ್ಷ ಕೋಟಿ ರೂ. ಮೊತ್ತದ ಮೂಲಸೌಕರ್ಯ ಯೋಜನೆಗಳು ಈಗಾಗಲೆ ಪೂರ್ತಿಯಾಗಿವೆ, 1.5 ಲಕ್ಷ ಕೋಟಿಗಳಿಂದ 2 ಲಕ್ಷ ಕೋಟಿ ರೂ. ಮೊತ್ತದ



ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. 2 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳು ಸಿದ್ಧತಾ ಹಂತದಲ್ಲಿವೆ. ಸಂಪರ್ಕ ವ್ಯವಸ್ಥೆಯಲ್ಲಿ ಪರಿವರ್ತನೆ, ವ್ಯಾಪಾರ ವ್ಯವಹಾರಗಳಿಗೆ ಉತ್ತೇಜನ, ಆರ್ಥಿಕ ಬೆಳವಣಿಗೆಯನ್ನು ವಿಸ್ತೃತಗೊಳಿಸುವುದು ರಸ್ತೆ ಸಾರಿಗೆ, ಹೆದ್ದಾರಿಗಳು ಹಾಗೂ ಲಾಜಿಸ್ಟಿಕ್ ರಂಗಗಳಲ್ಲಿನ ಪ್ರಸ್ತುತ ಉಪಕ್ರಮಗಳ ಹಿಂದಿನ ಮೂಲೋದ್ದೇಶವಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಈ ರೀತಿಯ ನಿರಂತರ ಉತ್ತೇಜನಗಳು, ಇತಿಹಾಸ ಕಾಲದಿಂದಲೇ ಸಂಪರ್ಕ ವ್ಯವಸ್ಥೆಯ ಸವಾಲುಗಳಿಂದ ತತ್ತರಿಸಿರುವ ಅಸ್ಸಾಂ ಮತ್ತು ಈಶಾನ್ಯ ವಲಯದಲ್ಲಿ ಮೂಲಸೌಕರ್ಯಗಳ ಸ್ವರೂಪವನ್ನೇ ಬದಲಿಸಿಬಿಡಲಿವೆ ಎಂದು ಗಡ್ಕರಿ ಹೇಳಿದ್ದಾರೆ. ಹಿಮಂತ್ ಬಿಸ್ವಾ ಶರ್ಮಾ ನೇತೃತ್ವದ ಸರಕಾರ ತನ್ನ ಅಭಿವೃದ್ಧಿ ದಾಖಲೆ, ಕಲ್ಯಾಣ ಉಪಕ್ರಮಗಳ ಬಲದಿಂದ ಈ ಬಾರಿಯೂ ಅಧಿಕಾರದಲ್ಲಿ ಮುಂದುವರೆಯುವ ಖಾತರಿ ಹಿನ್ನೆಲೆಯಲ್ಲಿ, ಗಡ್ಕರಿ ಅವರ ಪ್ರಸ್ತುತ ಹೇಳಿಕೆಗಳು ಮಹತ್ತ್ವಪೂರ್ಣವೆನಿಸಿವೆ.


**ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವ:** ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವವಾಗಿದೆ. ಬಿಜೆಪಿ ಯಾವುದೇ ಜಾತಿ ,ಧರ್ಮ ಅಥವಾ ಭಾಷಾ ವಿರೋಧಿಯಲ್ಲ, ಸಂವಿಧಾನಕ್ಕನುಸಾರ ಸಮಸ್ತರಿಗೂ ಹಕ್ಕುಗಳ ಕೊಡಮಾಡುವುದನ್ನು ಬಿಜೆಪಿ ಬೆಂಬಲಿಸುತ್ತದೆ. ಕಿರುಕುಳಕ್ಕೀಡಾದ ಅಲ್ಪಸಂಖ್ಯಾತರಿಗೆ ಪೌರತ್ವ(ತಿದ್ದುಪಡಿ ) ಕಾಯ್ದೆಯಲ್ಲಿ ಪೌರತ್ವ ನೀಡಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿ ಸಚಿವರು ಪ್ರಸ್ತುತ ಹೇಳಿಕೆ ನೀಡಿದರು. ಪ.ಬಂಗಾಳದಲ್ಲಿ ರಾಜಕೀಯ ಬದಲಾವಣೆಯಾಗಬೇಕೆಂದು ಮತದಾರರು ಆಗ್ರಹಪಟ್ಟಿದ್ದಾರೆ. ಅಲ್ಲಿನ ಜನರು ಬದಲಾವಣೆ ಬಯಸಿದ್ದಾರೆ. ಈ ನಿಟ್ಟಿನಲ್ಲಿ ಪ.ಬಂಗಾಳದಲ್ಲೂ ಬಿಜೆಪಿಗೆ ಜಯ ನಿಶ್ಚಯವೆಂದು ವಿಶ್ವಾಸ ವ್ಯಕ್ತಪಡಿಸಿದರು. ಅನಗತ್ಯ ರಾಜಕೀಯ ಸಂಘರ್ಷ ಬದಲು ದಕ್ಷ ಆಡಳಿತ ಮತ್ತು ಅಭಿವೃದ್ಧಿಗೆ ಪಕ್ಷವು ಆದ್ಯತೆ ನೀಡಲಿದೆ ಎಂದು ಹೇಳಿದರು.

### ಈಸ್ಟರ್ ಹಬ್ಬದ ಶುಭಹಾರೈಸಿ ಕೇಂದ್ರ ಸಚಿವ ಅಮಿತ್ ಶಾ ಮನವಿ

# ಕೇರಳದಲ್ಲಿ ಎನ್‌ಡಿಎಗೆ ಅವಕಾಶ ಕೊಡಿ

**ಕೊಚ್ಚಿ /ತಿರುವನಂತಪುರಂ:** ಸಂಪನ್ನ ಕೇರಳದ ಸಾಕಾರಕ್ಕಾಗಿ ಕೇರಳದಲ್ಲಿ ಸರಕಾರ ರಚಿಸಲು ಎನ್‌ಡಿಎಗೆ ಅವಕಾಶ ಕೊಡಿ, ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಬೆಂಬಲಿಸಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ರೈಸ್ತ ಬಾಂಧವರಿಗೆ ಈಸ್ಟರ್ ಹಬ್ಬದ ಶುಭಹಾರೈಸಿ ವಿನಂತಿಸಿದ್ದಾರೆ. ಕೇರಳದಲ್ಲಿ ಎನ್‌ಡಿಎ ಸರಕಾರ ರಚಿಸಿದಲ್ಲಿ, ಬರೇ ಎರಡು ತಿಂಗಳೊಳಗೆ ಶಬರಿಮಲೆ ಸನ್ನಿಧಾನದ ಬಂಗಾರ ದುರ್ಬಳಕೆ ಆರೋಪಿಗಳನ್ನು ಜೈಲಿಗೆ ಕಳುಹಿಸಲಿದೆ ಎಂದು ಸಚಿವರು ಭರವಸೆ ನೀಡಿದರು. ಎರ್ನಾಕುಳಂನ ಕುನ್ನತುನಾಡು ಕ್ಷೇತ್ರದಲ್ಲಿ ಸಚಿವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಈ ರೀತಿ ಆಶ್ವಾಸನೆಯಿತ್ತರು. ಕೇರಳಕ್ಕೆ ಪ್ರಪ್ರಥಮ ಏಐಐಎಂಎಸ್ ಆಸ್ಪತ್ರೆ ಮಂಜೂರು ಮಾಡಲಾಗುವುದು. ಎನ್‌ಡಿಎ ಸರಕಾರ ಅಧಿಕಾರ ಸೂತ್ರ ಹಿಡಿದ ನಂತರ ಎರಡು ವರ್ಷಗಳೊಳಗೆ ಆಸ್ಪತ್ರೆ ಕಾರ್ಯಾರಂಭಿಸಲಿದೆ ಎಂದು ಹೇಳಿದರು.

**ಸುಳ್ಳುಗಾರ ರಾಹುಲ್:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಓರ್ವ ಸುಳ್ಳುಗಾರ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇಮ್ ಚೇಂಜ್ ಸ್ಟಾರ್ಟ್‌ಅಪ್ ಶುರು ಮಾಡಿದ್ದಾರೆ. ಇದರಡಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಹೆಸರು ಬದಲಿಸಿ ದುರ್ಲಾಭವೆತ್ತುವುದು ಸಿಎಂ ಪಿಣರಾಯಿ ತಂತ್ರವಾಗಿದೆ ಎಂದು ಟೀಕಿಸಿದರು. ಸಂಜೆ ತಿರುವನಂತಪುರ ಜಿಲ್ಲೆಯ ಕಟ್ಟಕಡದಲ್ಲಿನ ಸಾರ್ವಜನಿಕ ಸಭೆಯಲ್ಲೂ ಸಚಿವ ಶಾ ಇದೇ ಆರೋಪಗಳ ಜನರ ಮುಂದಿಟ್ಟರು.



**ಎಲ್ಲರಿಗೂ ಸಮಾನ ನ್ಯಾಯ:** ಎಲ್ಲರಿಗೂ ಸಮಾನ ನ್ಯಾಯ ಮತ್ತು ಯಾರ ತುಷ್ಟೀಕರಣ ಇಲ್ಲ ಎಂಬುದು ಎನ್‌ಡಿಎ ಧೋರಣೆ. ಇದು ದೇಶಾದ್ಯಂತ ಎನ್‌ಡಿಎಯ ಕಾರ್ಯವೈಖರಿಯಿಂದಲೇ ವೇದ್ಯವಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಭಾರತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾಗ, ಬರೇ ಒಂದು ದಿನದಲ್ಲಿ ಅದರ ನಾಯಕರು, ಸದಸ್ಯರೆಲ್ಲರನ್ನು ಸೆರೆಹಿಡಿದು ಜೈಲಿಗೆ ಹಾಕಿದ್ದೆವು . ಪಿಎಫ್‌ಐ ನಿಷೇಧವನ್ನು ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಬಲವಾಗಿ ವಿರೋಧಿಸಿದ್ದವು. ಯಾಕೆಂದರೆ ಈ ಪೈಕಿ ಒಂದು ರಂಗ ಪಿಎಫ್‌ಐನ ರಾಜಕೀಯ ಘಟಕ ಎಸ್‌ಡಿಪಿಐ ಜತೆ ಕೈಜೋಡಿಸಿದ್ದರೆ, ಇನ್ನೊಂದು ಫ್ರಂಟ್ ಜಮಾತ್ -ಇ-ಇಸ್ಲಾಮಿ ಶಕ್ತಿಗಳ ಜತೆ ಕೈಜೋಡಿಸಿದೆಯೆಂದು ಆರೋಪಿಸಿದ ಶಾ, ಇವೆರಡೂ ರಂಗಗಳ ಆಡಳಿತದಲ್ಲಿ ಕೇರಳ ಸುರಕ್ಷಿತವಾಗಿಲ್ಲ ಎಂದು ಆರೋಪಿಸಿದರು.

ವಕ್ಫ್ ಮಂಡಳಿ ಎರ್ನಾಕುಳಂ ಜಿಲ್ಲೆಯಲ್ಲಿ 600 ಮುನಂಬಮ್ ನಿವಾಸಿಗಳ ಜಾಗದ ಮೇಲೆ ಹಿಡಿತ ಸಾಧಿಸಲು ಮುಂದಾಗಿದ್ದಾಗ ಎರಡೂ ರಂಗಗಳು ಬಹಳ ಮೌನ ಕಾಯ್ದಿದ್ದವು. ಆ ಸಂದರ್ಭ ಎನ್‌ಡಿಎ ಸರಕಾರ ವಕ್ಫ್ ಕಾಯಿದೆಗೆ ತಿದ್ದುಪಡಿ ಮಾಡಿ ಸಂತ್ರಸ್ತರ ಸೊತ್ತನ್ನು ರಕ್ಷಿಸಿತ್ತು. ಎಲ್‌ಡಿಎಫ್ ,ಯುಡಿಎಫ್ ದ್ವಿಮುಖದ ರಂಗಗಳು , ಕೇರಳದಲ್ಲಿ ಪರಸ್ಪರ ವಿರೋಧಿಗಳಾಗಿರುವ ಈ ರಂಗಗಳು ರಾಜ್ಯದ ಹೊರಗಡೆ ಜತೆಯಾಗಿ ಚುನಾವಣೆ ಎದುರಿಸುವುದು ತೀರಾ ನಾಚಿಕೆಗೇಡು ಎಂದು ಸಚಿವ ಶಾ ಟೀಕಿಸಿದರು.

## ಕಿರುಸುದ್ದಿ

### ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ: ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

**ಚಿತ್ರದುರ್ಗ:** ಚಳ್ಳಕೆರೆ ಹಾಗೂ ಹೊಳಲ್ಕೆರೆ ಶಿಶು ಅಭಿವೃದ್ಧಿ ಯೋಜನೆಯಡಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗಳ ಭರ್ತಿ ಮಾಡಲು 05-08-2025ರಂದು ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಸದರಿ ಹುದ್ದೆಗಳ ನೇಮಕಾತಿಗಾಗಿ ಮಾ.12ರಂದು ನಡೆದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸೂಚನಾ ಫಲಕ, ಅಂಗನವಾಡಿ ಕೇಂದ್ರ, ಗ್ರಾಮ ಪಂಚಾಯಿತಿ, ಶಾಲೆ, ಸಮುದಾಯ ಭವನ ಹಾಗೂ ಗ್ರಂಥಾಲಯಗಳಲ್ಲಿ ಪ್ರಕಟಿಸಲಾಗಿದೆ.

ಸದರಿ ಆಯ್ಕೆ ಪಟ್ಟಿಗಳಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಚಳ್ಳಕೆರೆಗೆ ಸಂಬಂಧಿಸಿದಂತೆ ಚಳ್ಳಕೆರೆಯ ಚಿತ್ರದುರ್ಗ ರಸ್ತೆಯ ತ್ಯಾಗರಾಜ ನಗರದ, ಎಸ್.ಬಿ.ಐ. ಬ್ಯಾಂಕ್ ಪಕ್ಕದಲ್ಲಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಹಾಗೂ ಹೊಳಲ್ಕೆರೆಗೆ ಸಂಬಂಧಿಸಿದಂತೆ ಹೊಳಲ್ಕೆರೆ ಪಟ್ಟಣದ ಎನ್.ಹೆಚ್.13 ರಸ್ತೆಯಲ್ಲಿನ ಹಳ್ಳಕ್ಕ ಬಿಲ್ಡಿಂಗ್ ನಲ್ಲಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗೆ ಸೂಕ್ತ ದಾಖಲೆಗಳೊಂದಿಗೆ ದಿನಾಂಕ 10-04-2026 ರ ಸಂಜೆ 5:30ರ ಒಳಗಾಗಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

### ಪ್ರವೇಶ ಪರೀಕ್ಷೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಚಿತ್ರದುರ್ಗ:** ಡೆಹರಾಡೂನ್, ರಾಷ್ಟ್ರೀಯ ಮಿಲಿಟರಿ ಕಾಲೇಜಿನಲ್ಲಿ ಜನವರಿ 2027ನೇ ಅಧಿವೇಶನಕ್ಕಾಗಿ 8ನೇ ತರಗತಿಗೆ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಕೆ ಅವಧಿಯನ್ನು ಏ.5 ರಿಂದ ಏ.15ರವರೆಗೆ ವಿಸ್ತರಣೆ ಮಾಡಲಾಗಿದೆ.

11 ವರ್ಷ 6 ತಿಂಗಳು ತುಂಬಿರುವ ಹಾಗೂ 13 ವರ್ಷದೊಳಗಿನ ದಿನಾಂಕ 02-01-2014 ರಿಂದ 01-07-2015 ರೊಳಗೆ ಜನಿಸಿರುವ ಬಾಲಕ ಮತ್ತು ಬಾಲಕಿಯರು ಅರ್ಜಿ ಸಲ್ಲಿಸಬಹುದು. ಅರ್ಹತಾ ಪ್ರವೇಶ ಪರೀಕ್ಷೆಯು ಜೂ.7ರಂದು ಬೆಂಗಳೂರು ಕೇಂದ್ರದಲ್ಲಿ ನಡೆಯಲಿದೆ. ಪ್ರವೇಶ ಬಯಸುವವರು ಭರ್ತಿ ಮಾಡಿದ ಅರ್ಜಿಯನ್ನು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಬೆಂಗಳೂರು-560025 ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ನಿರ್ದೇಶನಾಲಯದ ದೂರವಾಣಿ ಸಂಖ್ಯೆ 080-25589459 ಹಾಗೂ ಜಾಲತಾಣವನ್ನು ಸಂಪರ್ಕಿಸಬಹುದು.

### ಬೋಧಕ, ಬೋಧಕೇತರ ಹುದ್ದೆಗೆ ನೇರ ಸಂದರ್ಶನ

**ಚಿತ್ರದುರ್ಗ:** ಚಿತ್ರದುರ್ಗದ ಕೇಂದ್ರಿಯ ವಿದ್ಯಾಲಯದಲ್ಲಿ 2026-27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಿವಿಧ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಏಪ್ರಿಲ್ 13 ರಂದು ನೇರ ಸಂದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ವಿವಿಧ ವಿಷಯಗಳವಾರು ಪ್ರಾಥಮಿಕ ಶಾಲಾ ಶಿಕ್ಷಕರು, ಕಂಪ್ಯೂಟರ್, ಯೋಗ ಹಾಗೂ ಕ್ರೀಡಾ ತರಬೇತುದಾರರು, ಸಂಗೀತ ಶಿಕ್ಷಕರು, ನರ್ಸ್, ವಿಶೇಷ ಶಿಕ್ಷಕರು ಮತ್ತು ಕನ್ನಡ ಭಾಷಾ ಶಿಕ್ಷಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವುದು. ಸಂದರ್ಶನವು ಇದೇ ಏಪ್ರಿಲ್ 13ರಂದು ನಗರದ ಸರ್ಕಾರಿ ವಿಜ್ಞಾನ ಕಾಲೇಜು ಆವರಣದಲ್ಲಿರುವ ಪಿಎಂಶ್ರೀ ಕೇಂದ್ರಿಯ ವಿದ್ಯಾಲಯದಲ್ಲಿ ಬೆಳಗ್ಗೆ 11:30ರಿಂದ ಆರಂಭವಾಗುವುದು. ಅಭ್ಯರ್ಥಿಗಳು ಬೆಳಗ್ಗೆ 9 ಗಂಟೆಯಿಂದ 11 ಗಂಟೆಯ ಒಳಗಾಗಿ ವರದಿ ಮಾಡಿಕೊಳ್ಳಬೇಕು. ಸಂದರ್ಶನಕ್ಕೆ ಹಾಜರಾಗುವ ಮುನ್ನ ಅಭ್ಯರ್ಥಿಗಳು ಕಡ್ಡಾಯವಾಗಿ ಅಧಿಕೃತ ಪೋರ್ಟಲ್ https://samvida-sathi.kvs.gov.in/ ನಲ್ಲಿ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ವಿದ್ಯಾಲಯದ ನೋಟಿಸ್ ಬೋರ್ಡ್ ಅಥವಾ ಅಧಿಕೃತ ವೆಬ್‌ಸೈಟ್ ಸಂಪರ್ಕಿಸಬಹುದು.

### 2025ನೇ ವರ್ಷದ ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

**ಚಿತ್ರದುರ್ಗ:** ಕರ್ನಾಟಕ ಸಾಹಿತ್ಯ ಅಕಾಡೆಮಿ 2025ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ. ಆಸಕ್ತ ಲೇಖಕರು, ಪ್ರಕಾಶಕರು, ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ 2ನೇ ಮಹಡಿ, ಜೆ.ಸಿ ರಸ್ತೆ, ಬೆಂಗಳೂರು-560002 ಈ ವಿಳಾಸಕ್ಕೆ ರಿಜಿಸ್ಟರ್ಡ್ ಕೊರಿಯರ್ ಮೂಲಕ ಜೂನ್ 30 ರೊಳಗೆ ಕಳುಹಿಸಿಕೊಡಬೇಕು. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ www.sahithyaacademy.karnataka.gov.in ಅನ್ನು ಸಂಪರ್ಕಿಸುವಂತೆ ರಿಜಿಸ್ಟ್ರಾರ್ ಎನ್.ಕರಿಯಪ್ಪ ತಿಳಿಸಿದ್ದಾರೆ.

## ಚಳ್ಳಕೆರೆ: ಬಾಬು ಜಗಜೀವನ್ ರಾಮ್ ಜಯಂತಿ ಆಚರಣೆ

**ಚಳ್ಳಕೆರೆ:** ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮದಿನಾಚರಣೆ ಅಂಗವಾಗಿ ಡಾ. ಬಾಬು ಜಗಜೀವನ್ ರಾಮ್ ಅವರ ಪುತ್ಥಳಿಗೆ ಶಾಸಕ ಟಿ. ರಘುಮೂರ್ತಿ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ರೇಹಾನ್ ಪಾಷಾ, ಪೌರಾಯುಕ್ತೆ ನಾಗವೇಣಿ, ತಾಪಂ ಇಒ ಶಶಿಧರ, ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ದೇವ್ಲಾನಾಯ್ಕ್, ಗ್ಯಾರಂಟಿ ಸಮಿತಿಯ ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ, ಜಿಪಂ ಕೆಡಿಪಿ ನಾಮ ನಿರ್ದೇಶನ ಸದಸ್ಯ ರಂಗಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರಭದ್ರಯ್ಯ, ಶಶಿಧರ, ಮುಖಂಡರಾದ ಜಯಕುಮಾರ್, ಮಾರಣ್ಣ, ಗಿರಿಯಪ್ಪ, ಕೃಷ್ಣಮೂರ್ತಿ, ಶಿವಮೂರ್ತಿ, ಬೋರಣ್ಣ, ಮುಜೀಬ್ ಉಪಸ್ಥಿತರಿದ್ದರು.



## ಜಗಜೀವನರಾಮ್ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ

**ಹೊಳಲ್ಕೆರೆ:** ಪಟ್ಟಣದ ಪತ್ರಿಕಾ ಭವನದಲ್ಲಿ ಭಾನುವಾರ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಭಾರತದ ಮಾಜಿ ಉಪಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನಾಚರಣೆಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.



ಹಿರಿಯ ಪತ್ರಕರ್ತ ಬಸವರಾಜಯ್ಯ ಮಾತನಾಡಿ, ಬಾಬು ಜಗಜೀವನ್ ರಾಮ್ ಅವರು ದೇಶದ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಕಡುಬಡತನ ಮತ್ತು ಸಾಮಾಜಿಕ ಶೋಷಣೆಯ ನಡುವೆ ಯೂ ತಮ್ಮ ಸಂಘಟನಾ ಚಾತುರ್ಯ ಹಾಗೂ ಬದ್ಧತೆಯಿಂದ ದೇಶದ ಉನ್ನತ ಹುದ್ದೆಗೇರಿದ ಅವರ ಜೀವನ ನಮಗೆ ಸ್ಫೂರ್ತಿ. ಇಂದಿನ ರಾಜಕಾರಣಿಗಳು ಮತ್ತು ಯುವ ಪೀಳಿಗೆ ಜಗಜೀವನ್ ರಾಮ್ ಅವರ ತತ್ವ ಸಿದ್ಧಾಂತಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಕೀಲ ಎಸ್. ವೇದಮೂರ್ತಿ, ಪತ್ರಿಕಾ ಸಂಘದ ಗೌರವಾಧ್ಯಕ್ಷ ಎ. ಚಿತ್ತಪ್ಪ, ದಲಿತ ಸಂಘರ್ಷ ಸಮಿತಿಯ ಮುಖಂಡ ನಾಗರಾಜ, ನಿವೃತ್ತ ಪ್ರಾಚಾರ್ಯ ಬಸವರಾಜು, ದಲಿತ ಸಮುದಾಯದ ಮುಖಂಡ ಚಿಕ್ಕಜಾಜೂರು ಶಿವಣ್ಣ ಪಾಲ್ಗೊಂಡಿದ್ದರು.

## ಡಾ. ಬಾಬು ಜಗಜೀವನ್ ರಾಮ್ ಜನ್ಮ ದಿನಾಚರಣೆಯಲ್ಲಿ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಪ್ರತಿಪಾದನೆ

# ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿ ಅಡಗಿದೆ

**ಚಿತ್ರದುರ್ಗ:** ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ, ದೇಶದ ಉದ್ಧಾರದಲ್ಲೇ ನಮ್ಮ ಉದ್ಧಾರವಿದೆ ಎಂಬ ಬಾಬೂಜಿಯವರ ಮಾತು ಸಾರ್ವಕಾಲಿಕ ಸತ್ಯ ಎಂದು ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ತಿಳಿಸಿದರು.

ನಗರದ ಲಿಡ್ಕರ್ ಭವನದಲ್ಲಿ ಭಾನುವಾರ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ಪ್ರಗತಿಯ ಬಗ್ಗೆ ಯೋಚಿಸುವ ಮೊದಲು ಪ್ರತಿಯೊಬ್ಬರೂ ದೇಶಭಕ್ತಿಯನ್ನು ಬೆಳೆಸಿಕೊಳ್ಳಬೇಕು. ನಾಡಗೀತೆ ಮತ್ತು ರಾಷ್ಟ್ರಗೀತೆಯನ್ನು ಹಾಡುವುದರಿಂದಲೇ ದೇಶಭಕ್ತಿ ಆರಂಭವಾಗುತ್ತದೆ ಎಂದು ಕಿವಿಮಾತು ಹೇಳಿದರು.

1971ರ ಯುದ್ಧದ ಸಮಯದಲ್ಲಿ ಬಾಬೂಜಿ ಯವರ ಸಮರ್ಥ ನಾಯಕತ್ವದಿಂದಾಗಿ ಕೇವಲ 13 ದಿನಗಳಲ್ಲಿ ಬಾಂಗ್ಲಾದೇಶ ಎಂಬ ಹೊಸ ರಾಷ್ಟ್ರ ಉದಯವಾಯಿತು. ಅವರು ತಮ್ಮ ಇಡೀ ಜೀವನವನ್ನು ದೇಶದ ಹಿತಕ್ಕಾಗಿ ಮುಡಿ ಪಾಗಿಟ್ಟಿದ್ದರು ಎಂದು ಗುಣಗಾನ ಮಾಡಿದರು.

ಇದೇ ವೇಳೆ ಬಾಬು ಜಗಜೀವನ್ ರಾಂ ಭವನದ ಬಾಕಿ ಉಳಿದಿರುವ ಕಾಮಗಾರಿ ಬಗ್ಗೆ ಪ್ರಸ್ತಾಪಿಸಿದ ಶಾಸಕರು, ಭವನದ ಪೂರ್ಣಗೊಳಿಸುವಿಕೆಗೆ ಸುಮಾರು ರೂ. 3 ಕೋಟಿ ಅನುದಾನದ ಅಗತ್ಯವಿದೆ. ಮುಂಬರುವ ದಿನಗಳಲ್ಲಿ ಅನುದಾನ ಒದಗಿಸಿ ಭವನ ಲೋಕಾರ್ಪಣೆಗೊಳಿಸುವುದಾಗಿ ಭರವಸೆ ನೀಡಿದರು. ಅಲ್ಲದೆ ಸರ್ಕಾರದಿಂದ ನಿಗಮಗಳ ಮೂಲಕ ಸಿಗುವ ನೇರ ಸಾಲ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.



ಶಿವಶರಣ ಹರಳಯ್ಯ ಸ್ವಾಮೀಜಿ ಮಾತನಾಡಿ, ಮಾತು ಮತ್ತು ನಡವಳಿಕೆ ಒಂದೇ ಆಗಿರಬೇಕು. ಬಾಬು ಜಗಜೀವನ್ ರಾಂ ಅವರು ಕೇವಲ ಮಾತಿನ ವ್ಯಕ್ತಿಯಾಗಿರದೆ, ತಾವು ನಂಬಿದ ಸಿದ್ಧಾಂತಗಳನ್ನು ಬದುಕಿನಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದರು. 1935ರಲ್ಲಿಯೇ ರಾಂಚಿಯಲ್ಲಿ ನಡೆದ ಅಮೆಂಡ್ ಕಮಿಷನ್ ಮುಂದೆ ಶೋಷಿತ ವರ್ಗಗಳ ಮತದಾನದ ಹಕ್ಕಿಗಾಗಿ ಬಾಬೂಜಿ ಅವರು ಹೋರಾಟ ಮಾಡಿದ್ದರು. ಅಂದು ಕೇವಲ ರಾಜ-ಮಹಾರಾಜರಿಗೆ ಮತ್ತು ಶ್ರೀಮಂತರಿಗೆ ಮಾತ್ರ ಇದ್ದ ಮತದಾನದ ಹಕ್ಕನ್ನು ಸಾಮಾನ್ಯರಿಗೂ ದೊರಕಿಸಿಕೊಡುವಲ್ಲಿ ಅವರ ಪಾತ್ರ ದೊಡ್ಡದಿದೆ. ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದ ಕಾಲದಲ್ಲಿ ದೇಶವು ಆಹಾರದ ಕೊರತೆಯನ್ನು ಎದುರಿಸುತ್ತಿದ್ದಾಗ, ಹಸಿರು ಕ್ರಾಂತಿಯ ಮೂಲಕ ದೇಶಕ್ಕೆ ಅನ್ನ ನೀಡಿದ ಕೀರ್ತಿ ಬಾಬೂಜಿಯವರಿಗೆ ಸಲ್ಲುತ್ತದೆ ಎಂದರು.

ರಕ್ಷಣಾ ಸಚಿವರಾಗಿದ್ದ ಬಾಬೂಜಿಯವರು ಕೇವಲ 13 ದಿನಗಳಲ್ಲಿ ಪಾಕಿಸ್ತಾನವನ್ನು ಯುದ್ಧದಲ್ಲಿ ಸೋಲಿಸುವ ಮೂಲಕ ಪಾಠ ಕಲಿಸಿದರು. ಸಮಾಜದಲ್ಲಿರುವ ಭೂ ಹಂಚಿಕೆಯ ಅಸಮಾನತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಶ್ರೀಗಳು, ಶ್ರೀಮಂತರ ಬಳಿ ನೂರಾರು ಎಕರೆ ಭೂಮಿ ಇದೆ. ಆದರೆ ಕಷ್ಟಪಡುವ ಬಡವರ ಬಳಿ ಅಲ್ಪ ಭೂಮಿಯೂ ಇಲ್ಲ, ಈ ದುಸ್ಥಿತಿಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವ ಕನಸನ್ನು ಬಾಬೂಜಿ ಅವರು ಕಂಡಿದ್ದರು ಎಂದು ಹೇಳಿದರು.

ಜಯಂತಿ ಕಾರ್ಯಕ್ರಮದಲ್ಲಿ ಕಂಠೀರವ ಸ್ಟೂಡಿಯೋ ಅಧ್ಯಕ್ಷ ಮೆಹಬೂಬ್ ಪಾಷಾ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಂ.ಕೆ. ತಾಜ್‌ಪೀರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ, ಪೌರಾಯುಕ್ತೆ ಲಕ್ಷ್ಮಿ, ದಲಿತ ಮುಖಂಡರಾದ ಅವಿನಾಶ್, ಜೆ.ಜೆ. ಹಟ್ಟಿ ರಾಜಣ್ಣ, ಪ್ರಶಾಂತ್, ತಿಪ್ಪೇಸ್ವಾಮಿ, ನೇಹಾ, ಹುಲ್ಲೂರು ಕುಮಾರಸ್ವಾಮಿ, ಪ್ರಕಾಶ್, ಕಾವ್ಯ, ರವಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಮುಖಂಡರು ಗಣ್ಯರು ಉಪಸ್ಥಿತರಿದ್ದರು.

> **ದೇಶದಲ್ಲಿ ಆರ್ಥಿಕ ಸಮಾನತೆ ಬರುವವರೆಗೂ ಸಾಮಾಜಿಕ ಸಮಾನತೆ ಸಾಧ್ಯವಿಲ್ಲ ಎಂಬುದನ್ನು ಬಾಬು ಜಗಜೀವನ್ ರಾಂ ಅವರು ಅಂದೇ ಮನಗಂಡಿದ್ದರು. ದೇಶದ ಬಡತನ ಮತ್ತು ಆಹಾರದ ಕೊರತೆಯನ್ನು ನೀಗಿಸಿದರೆ ಮಾತ್ರ ಸುಭೀಕ್ಷೆ ಸಾಧ್ಯ ಎಂದು ನಂಬಿದ್ದ ಬಾಬೂಜೀ, ರೈಲ್ವೆ ಮತ್ತು ಕೃಷಿ ಇಲಾಖೆಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಮೂಲಕ ಕಾರ್ಮಿಕರ ಹಿತ ಕಾಯುವ ಕೆಲಸ ಮಾಡಿದರು.**
> ■ ಶಿವಶರಣ ಹರಳಯ್ಯ ಸ್ವಾಮೀಜಿ



## ಸಿಎಂ ಸಿದ್ದರಾಮಯ್ಯರಿಂದ ಎಸ್‌ಸಿ, ಎಸ್‌ಟಿಗೆ ಅನ್ಯಾಯ: ಜಿ.ಹೆಚ್. ಮೋಹನ್ ಕುಮಾರ್

**ಚಿತ್ರದುರ್ಗ:** ಒಳ ಮೀಸಲಾತಿ ಜಾರಿಗೊಳಿಸುವಲ್ಲಿ ರಾಜಕಾರಣ ಮಾಡುತ್ತಿರುವ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅನ್ಯಾಯ ವೆಸಗುತ್ತಿದ್ದಾರೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಹೆಚ್. ಮೋಹನ್‌ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಭಾನುವಾರ ಡಾ.ಬಾಬು ಜಗಜೀವನರಾಂರವರ 119 ನೇ ಜಯಂತಿಯಲ್ಲಿ ಮಾತನಾಡಿದರು.

ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಡಾ.ಬಾಬು ಜಗಜೀವನರಾಂ ಅವರನ್ನು ಅಗೌರವದಿಂದ ನಡೆಸಿಕೊಂಡ ಕಾಂಗ್ರೆಸ್‌ಗೆ ಜಯಂತಿಯನ್ನು ಆಚರಿಸುವ ನೈತಿಕತೆಯಿಲ್ಲ, ಕಾಂಗ್ರೆಸ್ ನಾಯಕರುಗಳ ವರ್ತನೆಯಿಂದ ಬೇಸತ್ತು 1977 ಫೆ.2 ರಂದು ಪಕ್ಷದಿಂದ ಹೊರ ಬಂದ ಡಾ. ಬಾಬುಜಗಜೀವನರಾಂ ಅವರು ಬಾಲ್ಯದಲ್ಲಿಯೇ ಶೋಷಣೆ, ಅಸ್ಪೃಶ್ಯತೆಯ ನೋವುಂಡವರು. ರೈತರ ಕಷ್ಟಗಳನ್ನು ಕಣ್ಣಾರೆ ಕಂಡು ಕೃಷಿಗೆ ಹೆಚ್ಚಿನ ಒತ್ತು ಕೊಟ್ಟಿದ್ದರಿಂದ ಹಸಿರು ಕ್ರಾಂತಿಯ ಹರಿಕಾರ ಎಂಬ ಬಿರುದು ಪಡೆದರೆಂದು ಅವರ ಸಾಧನೆಗಳನ್ನು ಸ್ಮರಿಸಿದರು.

ಬಿಹಾರದಲ್ಲಿ ಕಾರ್ಮಿಕ ಸಂಘಟನೆಯನ್ನು ಕಟ್ಟಿದ ಡಾ.ಬಾಬು ಜಗಜೀವನರಾಂರವರು 32 ನೇ ವಯಸ್ಸಿಗೆ ದೊಡ್ಡ ನಾಯಕನಾಗಿ ಬೆಳೆದರು. 1936ರಲ್ಲಿ ರಾಜಕೀಯ ಪ್ರವೇಶಿಸಿದ ಅವರು 1971ರಲ್ಲಿ ಪಾಕಿಸ್ತಾನ ಭಾರತದ ಮೇಲೆ ಯುದ್ಧಕ್ಕೆ ಬಂದಾಗ ಸಮರ್ಥವಾಗಿ ನಿಭಾಯಿಸಿ ದೇಶಕ್ಕೆ ಜಯ ತಂದು ಕೊಟ್ಟ ಕೀರ್ತಿ ಅವರಿಗೆ ಸಲ್ಲಬೇಕು. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷ ನಾಟಕೀಯವಾಗಿ ಜಯಂತಿಯನ್ನು ಆಚರಿಸುತ್ತಿರುವುದು ಯಾವ ಪುರುಷಾರ್ಥಕ್ಕೆ? ಮೊದಲು ಒಳ ಮೀಸಲಾತಿಯಲ್ಲಿನ ಗೊಂದಲಗಳನ್ನು ಸರಿಪಡಿಸಿ ಎಂದು ಒತ್ತಾಯಿಸಿದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪರಶುರಾಂ, ಪ್ರಭಾರಿ ಎ.ಮುರಳಿ, ಮಾಧುರಿ ಗಿರೀಶ್, ಎಸ್ಸಿ ಮೋರ್ಚಾ ನಿಕಟಪೂರ್ವ ಅಧ್ಯಕ್ಷ ತಿಪ್ಪೇಸ್ವಾಮಿ, ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಧನಂಜಯ, ಸುರೇಶ್, ನಾಗರಾಜ್, ನವೀನ್, ಪ್ರದೀಪ್, ಕಲ್ಲೇಶ್, ಬಸಣ್ಣ, ಹನುಮಂತ, ಪ್ರಸನ್ನ, ವಿರುಪಾಕ್ಷ, ಕೆಂಚಪ್ಪ, ದುರುಗೇಶ್, ಕೆ.ಶಿವಣ್ಣಾಚಾರ್, ರಾಜಣ್ಣ, ಆರ್.ಶೋಭರಾಜ್ ಪಾಲ್ಗೊಂಡಿದ್ದರು.

## ಡಾ. ಬಾಬು ಜಗಜೀವನ್‌ರಾಮ್ ಜಯಂತಿ ಅಂಗವಾಗಿ ಭಾವಚಿತ್ರ ಅದ್ಧೂರಿ ಮೆರವಣಿಗೆ

**ಚಿತ್ರದುರ್ಗ:** ಡಾ. ಬಾಬು ಜಗಜೀವನ್‌ರಾಮ್‌ರವರ 119ನೇ ಜನ್ಮ ದಿನಾಚರಣೆ ಅಂಗವಾಗಿ ಭಾನುವಾರ ನಗರದಲ್ಲಿ ಡಾ. ಬಾಬು ಜಗಜೀವನ್‌ರಾಮ್ ಅವರ ಭಾವಚಿತ್ರದ ಅದ್ಧೂರಿ ಮೆರವಣಿಗೆ ನಡೆಸಲಾಯಿತು.

ನಗರದ ಹೊಳಲ್ಕೆರೆ ರಸ್ತೆಯ ಸಂಪಿಗೆ ಸಿದ್ದೇಶ್ವರ ಶಾಲೆಯ ಮುಂಭಾಗದಲ್ಲಿ, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಮಹಾತ್ಮ ಗಾಂಧಿ ಸರ್ಕಲ್, ಮಾರ್ಗವಾಗಿ ಪ್ರವಾಸಿಮಂದಿರದಿಂದ ಲಿಡ್ಕರ್ ಭವನದವರೆಗೆ ನಡೆಯಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ವಿವಿಧ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



## ಸಂಯುಕ್ತ ರಸಗೊಬ್ಬರ ಬಳಸಿ: ಮಂಜುನಾಥ್ ಸಲಹೆ

**ಚಿತ್ರದುರ್ಗ:** ಕೇವಲ ಡಿ.ಎ.ಪಿ. ರಸಗೊಬ್ಬರಕ್ಕೆ ಅಂಟಿಕೊಳ್ಳದೆ, ಮಣ್ಣಿನ ಫಲವತ್ತತೆ ಹಾಗೂ ಉತ್ತಮ ಇಳುವರಿಗಾಗಿ ರೈತರು ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರಗಳನ್ನು ಬಳಸುವಂತೆ ಚಿತ್ರದುರ್ಗ ಜಂಟಿ ಕೃಷಿ ನಿರ್ದೇಶಕ ಬಿ. ಮಂಜುನಾಥ್ ಸಲಹೆ ನೀಡಿದ್ದಾರೆ.

ಸಸ್ಯಗಳ ಬೆಳವಣಿಗೆಗೆ ಅಗತ್ಯವಿರುವ 17 ಪೋಷಕಾಂಶಗಳಲ್ಲಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪ್ರಮುಖವಾಗಿವೆ. ಪ್ರಸ್ತುತ ರೈತರು ಡಿ.ಎ.ಪಿ ಮತ್ತು ಯೂರಿಯಾವನ್ನು ಅತಿಯಾಗಿ ಬಳಸುತ್ತಿದ್ದು, ಇದರಿಂದ ಪೊಟ್ಯಾಷ್ ಕೊರತೆಯುಂಟಾಗಿ ಬೆಳೆಗಳ ರೋಗನಿರೋಧಕ ಶಕ್ತಿ ಕುಂದುತ್ತಿದೆ. ಶಿಫಾರಸ್ಸಿನಂತೆ ಪೋಷಕಾಂಶಗಳ ಅನುಪಾತವು 4:2:1 ಇರಬೇಕು, ಆದರೆ ಪ್ರಸ್ತುತ ಬಳಕೆಯು 6.0:3.9:1.0 ರಷ್ಟಿದ್ದು ಸಮತೋಲನ ತಪ್ಪುತ್ತಿದೆ. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕದ ಅಂಶವಿರುವ 20:20:0:13, 16:20:0:13, 15:15:15, 10:26:26, 12:32:16, 17:17:17, 19:19:19 ಸೇರಿದಂತೆ ವಿವಿಧ ಗ್ರೇಡ್‌ಗಳ ಸಂಯುಕ್ತ ಗೊಬ್ಬರಗಳನ್ನು ಬಳಸಬಹುದು. ರಂಜಕ ಪೋಷಕಾಂಶ ನೀಡುವ ಪ್ರಾಂ (PROM), ಸಿಂಗಲ್ ಸೂಪರ್ ಫಾಸ್ಫೇಟ್ (SSP), ಟ್ರಿಪಲ್ ಸೂಪರ್ ಫಾಸ್ಫೇಟ್ (TSP) ಹಾಗೂ ನ್ಯಾನೋ ಡಿ.ಎ.ಪಿ ಬಳಸಲು ಅವಕಾಶವಿದೆ.



ಪ್ರಸ್ತುತ ಮಾರುಕಟ್ಟೆಯಲ್ಲಿ ಕಪ್ಪು ಮತ್ತು ಬಿಳಿ ಬಣ್ಣದ ಅರಳು ರೂಪದ ಡಿ.ಎ.ಪಿ ಲಭ್ಯವಿದ್ದು, ಬಣ್ಣ ಬೇರೆಯಾಗಿದ್ದರೂ ಇವುಗಳ ಗುಣಮಟ್ಟ ಹಾಗೂ ಪೋಷಕಾಂಶಗಳಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ, ಆದ್ದರಿಂದ ರೈತರು ಯಾವುದೇ ಗೊಂದಲವಿಲ್ಲದೆ ಲಭ್ಯವಿರುವ ಗೊಬ್ಬರವನ್ನು ಬಳಸಬಹುದು . ರೈತರು ಮಣ್ಣಿನ ಆರೋಗ್ಯ ಕಾಪಾಡಲು ಸಮತೋಲಿತ ರಸಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕೆಂದು ಜಂಟಿ ಕೃಷಿ ನಿರ್ದೇಶಕ ಬಿ. ಮಂಜುನಾಥ್ ಹೇಳಿದ್ದಾರೆ.

## ಬಾಬು ಜಗಜೀವನ್ ರಾಮ್ ಜಯಂತಿಯಲ್ಲಿ ಎಡಿಸಿ ಬಿ.ಟಿ.ಕುಮಾರಸ್ವಾಮಿ

# ಮೊಬೈಲ್ ಬಿಟ್ಟು ಪುಸ್ತಕಗಳನ್ನು ಓದಿ

**ಚಿತ್ರದುರ್ಗ:** ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಬಿದ್ದು ಜ್ಞಾಪಕ ಶಕ್ತಿ ಹಾಗೂ ಸೃಜನಶೀಲತೆ ಕಳೆದುಕೊಳ್ಳುವ ಬದಲು, ಗ್ರಂಥಾಲಯಗಳಲ್ಲಿ ಲಭ್ಯವಿರುವ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ವಿದ್ಯಾರ್ಥಿ ಗಳಿಗೆ ಕಿವಿಮಾತು ಹೇಳಿದರು.



ಜಿಲ್ಲಾಡಳಿತದ ವತಿಯಿಂದ ನಗರದ ಲಿಡ್ಕರ್ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಮೀಸಲಾತಿಯನ್ನು ನಂಬಿ ಕೂರಬಾರದು. ಸಾವಿರಾರು ಹುದ್ದೆಗಳಿಗೆ ಲಕ್ಷಾಂತರ ಮಂದಿ ಅರ್ಜಿ ಸಲ್ಲಿಸುವ ಈ ಕಾಲದಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಅಧ್ಯಯನಶೀಲತೆ ಬಹಳ ಮುಖ್ಯ ಎಂದರು.

ಭಾರತ ದೇಶದ ಅಭಿವೃದ್ಧಿ ಮತ್ತು ಸಮಾನತೆಯ ಹಾದಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನ್ ರಾಂ ಅವರು ದೇಶದ ಎರಡು ಕಣ್ಣುಗಳಿದ್ದಂತೆ. ಬಾಬೂಜೀಯವರು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ದೇಶದ ಉಪಪ್ರಧಾನಿ ಹುದ್ದೆಯವರೆಗೂ ಏರಲು ಪಟ್ಟ ಕಷ್ಟ ಮತ್ತು ಅವರು ನೀಡಿದ ಕೊಡುಗೆ ನಮಗೆಲ್ಲರಿಗೂ ಆದರ್ಶವಾಗಬೇಕು ಎಂದರು.

ಹಸಿರು ಕ್ರಾಂತಿಯ ಹರಿಕಾರ ಬಾಬೂಜೀಯವರ ಆಶಯದಂತೆ ಇಂದು ಸರ್ಕಾರವು ಅನ್ನಭಾಗ್ಯದಂತಹ ಯೋಜನೆಗಳ ಮೂಲಕ ಹಸಿವು ಮುಕ್ತ ಸಮಾಜಕ್ಕೆ ಒತ್ತು ನೀಡಿದೆ. ಹಾಸ್ಟೆಲ್ ವ್ಯವಸ್ಥೆಗಳನ್ನು ಉತ್ತಮಪಡಿಸಿ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ದುರುಪಯೋಗಪಡಿಸಿಕೊಳ್ಳದೆ, ಶ್ರಮವಹಿಸಿ ಓದಿ ತಮ್ಮ ಕುಟುಂಬ ಮತ್ತು ಸಮಾಜದ ಗೌರವವನ್ನು ಎತ್ತಿ ಹಿಡಿಯಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕ ಡಿ.ಹೆಚ್. ನಟರಾಜ್, ಡಾ. ಬಾಬು ಜಗಜೀವನ್ ರಾಮ್ ಅವರ ಕುರಿತು ಸುದೀರ್ಘ ಉಪನ್ಯಾಸ ನೀಡಿದರು. ಇದೇ ವೇಳೆ ನಾಲ್ಕು ಮಂದಿ ಪೌರ ಕಾರ್ಮಿಕರಿಗೆ ಸನ್ಮಾನಿಸಲಾಯಿತು. ಸಂವಿಧಾನ ಪೀಠಿಕೆ ವಾಚಿಸಲಾಯಿತು. ಜಯಂತಿ ಅಂಗವಾಗಿ ನಗರದ ವಿವಿಧ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಜರುಗಿದ ಕ್ರೀಡಾಕೂಟದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

## ಸಚ್ಚಿದಾನಂದ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ್

# ಮಾಲತಿ ಹೊಳ್ಳ ವಿಕಲಚೇತನರಿಗೆ ಮಾದರಿ

**ಹೊಸದುರ್ಗ:** ಅಂಗವೈಫಲ್ಯದಿಂದ ಬಳಲುತ್ತಿರುವ ಎಲ್ಲರಿಗೂ ಮಾಲತಿ ಹೊಳ್ಳ ಅವರು ಮಾದರಿ. ಅಂಗವಿಕಲರಿಗೆ ಉಚಿತವಾಗಿ ಎಲ್ಲಾ ರೀತಿಯ ಸೇವೆ ಮಾಡುತ್ತಿದ್ದಾರೆ. ಕನ್ನಡ ನಾಡಿನಲ್ಲಿ ಜಗನ್ಮಾತೆಯಾಗಿ ಮಾಲತಿ ಹೊಳ್ಳ ಅವರು ಹೊರಹೊಮ್ಮಿದ್ದಾರೆ ಎಂದು ಸಚ್ಚಿದಾನಂದ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ್ ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಮಹಿಳಾ ಘಟಕ ಸಚ್ಚಿದಾನಂದ ಸೇವಾ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳೆ ಸಮಾಜದಲ್ಲಿ ಅತ್ಯಂತ ಶ್ರೇಷ್ಠ ಹಾಗೂ ಮೇರು ವ್ಯಕ್ತಿತ್ವದಲ್ಲಿ ನಿಲ್ಲುತ್ತಾರೆ ಎಂದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಮಾಲತಿ ಕೃಷ್ಣಮೂರ್ತಿ ಹೊಳ್ಳ ಮಾತನಾಡಿ, ಪ್ರತಿ ವರ್ಷ ಹೊಸದುರ್ಗದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಣೆ ಮಾಡಲಾಗುತ್ತಿದೆ. ಸಮಾಜದ ಕನ್ನಡಿ ಹಾಗೂ ಮುನ್ನುಡಿಯಾಗಿ ಈ ವೇದಿಕೆ ಸಾಕ್ಷಿಯಾಗಿದೆ ಎಂದರು.

ಪ್ರಪಂಚದಾದ್ಯಂತ ಸ್ತ್ರೀ ಶಕ್ತಿ ಬೃಹತ್ ಆಗಿದೆ. ಒಬ್ಬ ಹೆಣ್ಣಾಗಿ ನಮಗೆ ಯಾರಿಗೂ ಸಿಗದ ಸೌಲಭ್ಯಗಳು ಸಿಗುತ್ತವೆ. ಭಗವಂತನ ಪ್ರತಿರೂಪವಾಗಿ ಈ ಭೂಮಿಗೆ ಒಂದು ಹೆಣ್ಣು ಮಗುವಾಗಿ ಎಲ್ಲರಿಗೂ ಹೆಣ್ಣು ನೆರಳಾಗಿದ್ದಾಳೆ. ಒಂದು ಮಗುವನ್ನು ಹೊತ್ತು ಹೆತ್ತು ಈ ಜಗತ್ತಿಗೆ ಕಳುಹಿಸಿದಾಗ ಅವಳ ಸಂತೋಷಕ್ಕೆ ಪಾರವೇ ಇರುವುದಿಲ್ಲ, ಇಂತಹ ಸ್ತ್ರೀಯರನ್ನು ಗೌರವಿಸುವ ನಮ್ಮ ದೇಶದಲ್ಲಿ, ಹೆಣ್ಣಿಗೆ ಪೂಜನೀಯ ಸ್ಥಾನವಿದೆ ಎಂದರು.



ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಘಟಕ ತಾಲೂಕು ಅಧ್ಯಕ್ಷೆ ಸಿಂಧು ಅಶೋಕ್, ಚಿತ್ರನಟಿ ಅನು ಪ್ರಭಾಕರ್, ಬಿಗ್ ಬಾಸ್ ಸ್ಪರ್ಧಿ ಹಾಗೂ ಕಿರುತೆರೆ ನಟಿ ಭವ್ಯ ಗೌಡ ಮಾತನಾಡಿದರು. ವೀರಶೈವ ಮಹಾಸಭಾ ಹೊಸದುರ್ಗ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ್ ನಿಕಟಪೂರ್ವ ಅಧ್ಯಕ್ಷ ಓಂಕಾರಪ್ಪ, ಸುತ್ತೂರು ಮಾಲಿನಿ, ಪುಷ್ಪಲತಾ ಕುಮಾರ್, ಸೌಮ್ಯ ಶಿವರಾಜ್, ಐಶ್ವರ್ಯ ಶಿವರಾಜ್, ದೀಪ ಪ್ರಸನ್ನಕುಮಾರ್, ಡಾ. ಅಮ್ಮ ರಾಮಚಂದ್ರ, ಸುಮಂಗಲಿ ಬಿ, ಪವಿತ್ರಕ್ಕ ಬ್ರಹ್ಮಕುಮಾರಿ, ಆರತಿ, ಪರಮ್ಮ, ಸವಿತಾ, ಆನಂದ್ ರಾವ್, ಮಲ್ಲಿಕಾರ್ಜುನ ಮಂಜುನಾಥ್, ಡಾ.ಮಮತಾ, ಪೂಜಾ, ಶಿಪ್ರಮ್ಮ ಇದ್ದರು.

## ಕಿರುಸುದ್ದಿ

### ಎರಡೂ ಕಡೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಜಯ ಖಚಿತ

• **ದಾವಣಗೆರೆ:** ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಎರಡೂ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವು ಇಡೀ ಆಡಳಿತ ವ್ಯವಸ್ಥೆಯನ್ನೇ ಚುನಾವಣೆಗಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಕಾಂಗ್ರೆಸ್ಸಿನವರು ಪ್ರತಿ ಓಟಿಗೆ 5 ಸಾವಿರ ರೂ. ನೀಡಬೇಕೆಂದು ಮಾತನಾಡಿಕೊಳ್ಳುತ್ತಿದ್ದಾರಂತೆ. ಆದರೆ ಕಾಂಗ್ರೆಸ್ ನೋಟು, ಬಿಜೆಪಿಗೆ ಓಟು ಎಂಬುದಾಗಿ ಕ್ಷೇತ್ರದ ಮತದಾರರು ತೀರ್ಮಾನಿಸಿದ್ದಾರೆ ಎಂದರು. ಬಿಜೆಪಿಯನ್ನು ಜಾತಿ ಪಕ್ಷವೆಂಬುದಾಗಿ ಸಿಎಂ ಸಿದ್ದರಾಮಯ್ಯ ಟೀಕಿಸಿದ್ದು, ಇಂತಹ ದುರಂಹಕಾರದ ಮಾತುಗಳೇ ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯಗೆ ತಕ್ಕ ಪಾಠ ಕಲಿಸಲಿವೆ. ವೀರಶೈವ ಲಿಂಗಾಯತ ಒಂದೇ ಎನ್ನುವ ಸಚಿವ ಈಶ್ವರ ಖಂಡ್ರೆ, ಈ ಹಿಂದೆ ತಮ್ಮದೇ ಸರ್ಕಾರ ಪ್ರತ್ಯೇಕ ಧರ್ಮವೆಂದು ಒಡೆಯಲು ಹೊರಟಾಗ ಎಲ್ಲಿ ಹೋಗಿದ್ದರು? ಎಂದು ಅವರು ಪ್ರಶ್ನಿಸಿದರು.

### ಕಾಂಗ್ರೆಸ್‌ಗೆ ಬುದ್ಧಿ ಕಲಿಸುತ್ತಾರೆ ಮತದಾರರು

• **ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಒಂದೇ ಕುಟುಂಬದ ರಾಜಕಾರಣದಿಂದ ಬೇಸತ್ತ ಮತದಾರರು ಈ ಬಾರಿ ಕಾಂಗ್ರೆಸ್ಸಿಗೆ ಬುದ್ಧಿ ಕಲಿಸಲು ಸಿದ್ಧರಾಗಿದ್ದಾರೆ ಎಂದು ಮಾಜಿ ಸಚಿವ ಮುರುಗೇಶ್ ನಿರಾಣಿ ಹೇಳಿದರು. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕ್ಷೇತ್ರದಲ್ಲಿ ಅತಿ ಹೆಚ್ಚು ಮುಸ್ಲಿಮರ ಮತಗಳಿದ್ದರೂ, ಕಾಂಗ್ರೆಸ್ ಅವರಿಗೆ ಟಿಕೆಟ್ ನೀಡಲಿಲ್ಲ, ಈಗ ಅದೇ ಸ್ವಾಭಿಮಾನಿ ಮುಸ್ಲಿಮರು ಕಾಂಗ್ರೆಸ್ಸಿಗೆ ಪಾಠ ಕಲಿಸಲಿದ್ದಾರೆ. ಕಳೆದ ಬಾರಿಯ ಚುನಾವಣೆಗೆ ಹೋಲಿಸಿದರೆ ಪರಿಸ್ಥಿತಿ ಬದಲಾಗಿದೆ. ದಾವಣಗೆರೆ ಮತ್ತು ಬಾಗಲಕೋಟದಲ್ಲಿ ಬಿಜೆಪಿ ಗೆಲ್ಲಲಿದೆ. ಎರಡೂ ಕಡೆ ನಮ್ಮ ಅಭ್ಯರ್ಥಿಗಳೇ ಹೆಚ್ಚಿನ ಮತಗಳ ಅಂತರದಲ್ಲಿ ಜಯಭೇರಿ ಬಾರಿಸಲಿದ್ದಾರೆ. ನಮ್ಮ ಪಕ್ಷದ ಮುಖಂಡರು ಒಂದಾಗಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಕೆಲಸ ಮಾಡುತ್ತಿದ್ದಾರೆ ಎಂದರು. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದಲೂ ಮುಖ್ಯಮಂತ್ರಿ ಸ್ಥಾನಕ್ಕಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಗದ್ದಲ ನಡೆಯುತ್ತಿದೆ. ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ, ಗ್ಯಾರಂಟಿ ಕೊಡುವ ಜೊತೆಗೆ ನಾಲ್ಕೈದು ಪಟ್ಟು ತೆರಿಗೆ ಹೆಚ್ಚಳ ಮಾಡಿದ್ದಾರೆ. ಐದೂವರೆ ಲಕ್ಷ ಕೋಟಿ ರೂ. ಸಾಲ ಮಾಡಿರುವುದೇ ಸಿದ್ದರಾಮಯ್ಯನವರ ಸಾಧನೆ. ಇದೊಂದು ಅಭಿವೃದ್ಧಿ ಶೂನ್ಯ ಸರ್ಕಾರ ಎಂದು ಅವರು ಟೀಕಿಸಿದರು. ಕಾಂಗ್ರೆಸ್ಸಿಗೆ ಎರಡು ಸ್ಥಾನ ಕಡಿಮೆಯಾದರೂ ಸರ್ಕಾರಕ್ಕೆ ಏನೂ ಆಗಲ್ಲ, ಆದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ಸಿನವರ ಕಿವಿ ಹಿಂಡುವ ಕೆಲಸವನ್ನು ಮತದಾರ ಈ ಮೂಲಕ ಮಾಡಿದಂತಾಗಲಿದೆ. ಕ್ಷೇತ್ರದಲ್ಲಿ ಅಭಿವೃದ್ಧಿಯಾಗಲಿ ಎಂಬುದಾಗಿ ಇಲ್ಲಿನ ಜನರು ನಿರೀಕ್ಷಿಸಿದ್ದಾರೆ. ಹೀಗಾಗಿ ಈ ಬಾರಿ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಗೆಲುವು ಸಾಧಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

### ಇಂದಿನಿಂದ 12ರವರೆಗೆ ಓಶೋ ಧ್ಯಾನ ಶಿಬಿರ

• **ದಾವಣಗೆರೆ:** ಓಶೋ ಧ್ಯಾನ ಶಿಬಿರವನ್ನು ಏ.6ರಿಂದ 12ರವರೆಗೆ ಬೆಳಗ್ಗೆ 6 ಗಂಟೆಯಿಂದ 7.30ರವರೆಗೆ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಆಲೂರು ಕನ್ವೆನ್ಷನ್ ಹಾಲ್ ನಲ್ಲಿ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಓಶೋರವರು ನಿರೂಪಿಸಿರುವ ಸಂಗೀತಮಯ ಸರ್ವಸಾರ ಧ್ಯಾನ, ಕುಂಡಲಿನಿ ಧ್ಯಾನ, ನಾದಬ್ರಹ್ಮ ಧ್ಯಾನ, ಉಸಿರಾಟದ ಮೂಲಕ ಚಕ್ರ ಧ್ಯಾನ ಇನ್ನು ಮುಂತಾದ ಧ್ಯಾನ ಕ್ರಿಯೆಗಳನ್ನು ಪರಿಚಯಿಸಲಾಗುವುದು. ದಾವಣಗೆರೆಯ ಧ್ಯಾನಾಸಕ್ತರು ಹಾಗು ನಾಗರೀಕರೆಲ್ಲರು ಭಾಗವಹಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿ ಮತ್ತು ನೋಂದಣಿಗಾಗಿ ಮೊ:97385 72318, 90367 19573 ಸಂಪರ್ಕಿಸಿರಿ.

### ಕಾಂಗ್ರೆಸ್ ವಿರುದ್ಧ ಮತ ಚಲಾಯಿಸಲು ನಿರ್ಧಾರ

• **ದಾವಣಗೆರೆ:** ಒಳಮೀಸಲಾತಿ ಜಾರಿಯಲ್ಲಿ ಮೀನಾಮೇಷ ಎಣಿಸುತ್ತಿರುವ ಕಾಂಗ್ರೆಸ್ ವಿರುದ್ಧ ಎರಡೂ ಉಪ ಚುನಾವಣೆಯಲ್ಲಿ ಮತ ಚಲಾಯಿಸಲು ಮಾದಿಗ ಮೀಸಲಾತಿ ಹೋರಾಟ ಸಮಿತಿ ನಿರ್ಧರಿಸಿದೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಎ.ಭಾನುಪ್ರಸಾದ್ ಮಾತನಾಡಿ, ಜನಸಂಖ್ಯೆ ಆಧಾರದಲ್ಲಿ ಒಳ ಮೀಸಲಾತಿ ನೀಡುವಂತೆ ಒತ್ತಾಯಿಸಿ ಕಳೆದ 35 ವರ್ಷಗಳಿಂದ ನಿರಂತರವಾಗಿ ಹೋರಾಟ ನಡೆಸಿಕೊಂಡು ಬರುತ್ತಿದ್ದರೂ, ಈವರೆಗೆ ಜಾರಿಗೊಂಡಿಲ್ಲ, ಚಿತ್ರದುರ್ಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲಿ ಒಳಮೀಸಲಾತಿ ಜಾರಿಗೆ ತರವುದಾಗಿ ಭರವಸೆ ನೀಡಿದ್ದರು. ಮೂರು ವರ್ಷವಾಗುತ್ತಿದ್ದರೂ ಸಮಾಜಕ್ಕೆ ನ್ಯಾಯ ಸಿಕ್ಕಿಲ್ಲ ಎಂದರು. ಸಮಿತಿ ಜಿಲ್ಲಾಧ್ಯಕ್ಷ ಪರಶುರಾಮ್ ಮೆಳ್ಳೆಕಟ್ಟೆ, ದೊಡ್ಡಪ್ಪ ಆವರಗೊಳ್ಳ, ಸಂತೋಷ್ ರಾಜ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.



ದಾವಣಗೆರೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಭಾನುವಾರ ಡಾ.ಬಾಬು ಜಗಜೀವನ್ ರಾಂ ರವರ 119ನೇ ಜನ್ಮದಿನವನ್ನು ಆಚರಿಸಲಾಯಿತು. ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಹೆಚ್.ಟಿ.ಶೇಖರ್, ಜಿಲ್ಲಾ ಪಂಚಾಯತ್ ಸಿಇಒ ಗಿತ್ತೆ ಮಾಧವ ವಿಠ್ಠಲರಾವ್ ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಸಿದ್ದಲಿಂಗೇಶ್ ಇದ್ದರು.

# ಬಡ ಜನರ ಕೈ ಹಿಡಿದ ಗ್ಯಾರಂಟಿ ಯೋಜನೆಗಳು

• **ದಾವಣಗೆರೆ:** ಪಂಚ ಗ್ಯಾರಂಟಿ ಯೋಜನೆಗಳನ್ನು ಟೀಕಿಸಿ, ಅಪಪ್ರಚಾರ ಮಾಡುತ್ತಿರುವ ಬಿಜೆಪಿಗೆ ಮತ ನೀಡಬಾರದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಮನವಿ ಮಾಡಿದರು.

ನಗರದ ಎಪಿಎಂಸಿ ಮಾರುಕಟ್ಟೆ ಬಳಿ ಗ್ಯಾರಂಟಿ ಫಲಾನುಭವಿಗಳ ಜೊತೆ ಸಂವಾದ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಮಾಡೆಲ್, ಇನ್ನೊಂದು ಕಡೆ ಮೋದಿ ಸರ್ಕಾರದಿಂದ ರಾಜ್ಯದ ಜನತೆಯ ಜೇಬು ಕತ್ತರಿಸುವ ಮಾಡೆಲ್ ಇದೆ. ಜನರ ಜೇಬಿಗೆ ಹಾಕುತ್ತಿರುವ ಕತ್ತರಿಯಿಂದ ಬಚಾವ್ ಆಗಲು ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ. ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿವೆ. ಬೆಲೆ ಏರಿಕೆಯಿಂದ ಬಸವಳಿಯುತ್ತಿರುವ ಜನತೆಗೆ ಗ್ಯಾರಂಟಿ ಯೋಜನೆಗಳು ನೆರವಾಗಿವೆ ಎಂದರು.

ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಕಾಂಗ್ರೆಸ್ ಸರ್ಕಾರ ಪ್ರತಿ ವರ್ಷ 50 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದೆ. ಇದನ್ನು ಬಂದ್ ಮಾಡಲು ಬಿಜೆಪಿ ಶತಪ್ರಯತ್ನ ನಡೆಸುತ್ತಿದೆ. ಕಾಂಗ್ರೆಸ್ ಗೆ ಶಕ್ತಿ ತುಂಬುವ ಕೆಲಸ ಮತದಾರರ ಮೇಲಿದೆ. ಸಮರ್ಥ್ ಒಬ್ಬ ಸಮರ್ಥ ಅಭ್ಯರ್ಥಿ. ಯುವಕರಿಗೆ ಸ್ಫೂರ್ತಿದಾಯಕ. ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ ಕಾಂಗ್ರೆಸ್ ಬಲ ಹೆಚ್ಚಿಸಿ ಎಂದು ಅವರು ಕರೆ ನೀಡಿದರು.

ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಪಂಚ ಗ್ಯಾರಂಟಿ ಯೋಜನೆಗಳಿಗಾಗಿ ಕಾಂಗ್ರೆಸ್ ಸರ್ಕಾರ 538.81 ಕೋಟಿ ರೂ. ಖರ್ಚು ಮಾಡಿದೆ. ಗ್ಯಾರಂಟಿ ಯೋಜನೆಗಳು ಮಹಿಳೆಯರ ಸಬಲೀಕರಣಕ್ಕೆ ನೆರವಾಗಿವೆ. ಆರ್ಥಿಕ, ಸಾಮಾಜಿಕವಾಗಿ ಶಕ್ತಿ ವೃದ್ಧಿಸಿವೆ. ಗೃಹಲಕ್ಷ್ಮೀ ಯೋಜನೆಯು ಮಹಿಳೆಯರನ್ನು ಆರ್ಥಿಕವಾಗಿ ಶಕ್ತಿವಂತರನ್ನಾಗಿ ಮಾಡಿದೆ. ಒಂದಲ್ಲ ಒಂದು ರೀತಿಯಲ್ಲಿ ಗ್ಯಾರಂಟಿ ಯೋಜನೆಗಳು ಜನರಿಗೆ, ಸಮಾಜಕ್ಕೆ ನೆರವಾಗುತ್ತಿವೆ ಎಂದು ಅವರು ಹೇಳಿದರು.

ಆರು ಬಾರಿ ಅಪ್ಪಾಜಿ ಶಾಮನೂರು ಶಿವಶಂಕರಪ್ಪನವರನ್ನು ಗೆಲ್ಲಿಸಿದಂತೆ ಸಮರ್ಥ್ ರನ್ನು ಗೆಲ್ಲಿಸಬೇಕು. ಈ ಮೂಲಕ ಗ್ಯಾರಂಟಿ ಯೋಜನೆಗಳಿಗೆ, ಕಾಂಗ್ರೆಸ್ ಸರ್ಕಾರಕ್ಕೆ ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು.

ಸಂವಾದ ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಉಪಾಧ್ಯಕ್ಷರಾದ ದಿನೇಶ್ ಗೂಳಿಗೌಡ, ಮೆಹರೋಜ್ ಖಾನ್, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್, ಗ್ಯಾರಂಟಿ ಸಮಿತಿಯ ಜಿಲ್ಲಾ, ತಾಲೂಕು ಅಧ್ಯಕ್ಷರು ಮತ್ತು ಸದಸ್ಯರು ಉಪಸ್ಥಿತರಿದ್ದರು.

ಶಿವಸಿರಿ ಪುಸ್ತಕವನ್ನು ಎಲ್ಲೆಡೆ ತಲುಪಿಸಿ | ಶಾಸಕ ಡಿ.ಜಿ.ಶಾಂತನಗೌಡ ಹೇಳಿಕೆ

# ಒಂದು ಲಕ್ಷ ರೂ. ದೇಣಿಗೆ

• **ನ್ಯಾಮತಿ:** ರಾಜ್ಯದಲ್ಲಿರುವ ಸಿರಿಗೆರೆ ಬೃಹನ್ಮಠದ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಶಿವಸಿರಿ ಸಂಗ್ರಹ ಕೃತಿಯ ಪುಸ್ತಕವನ್ನು ಮುಟ್ಟಿಸಬೇಕು. ನಾನು 1 ಲಕ್ಷ ರೂ. ದೇಣಿಗೆಯಾಗಿ ಕೊಡುತ್ತೇನೆಂದು ಹೊನ್ನಾಳಿ, ನ್ಯಾಮತಿ ಕ್ಷೇತ್ರದ ಶಾಸಕ ಡಿ.ಜಿ.ಶಾಂತನಗೌಡ ತಿಳಿಸಿದರು.

ನ್ಯಾಮತಿ ತಾಲೂಕು ದಾನಿಹಳ್ಳಿಯಲ್ಲಿ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯಲ್ಲಿ ಭಾನುವಾರ ಹರಿಹರ, ಕಂಕನಹಳ್ಳಿ ವೀರಭದ್ರೇಶ್ವರ ಇಂಡಸ್ಟ್ರೀಟ್, ದಾನಿಹಳ್ಳಿ ತರಳಬಾಳು ವಿದ್ಯಾಸಂಸ್ಥೆ ಮತ್ತು ಶಿಕಾರಿಪುರ ಸುಷ್ಮಿ ಪ್ರಕಾಶನ, ಇವರ ಸಂಯುಕ್ತಾಶ್ರಯದಲ್ಲಿ ನಡೆದ ಗಂಜೀನಹಳ್ಳಿ ಎಸ್.ಆರ್.ಬಸವರಾಜಪ್ಪ ನಿವೃತ್ತ ಉಪನ್ಯಾಸಕ ಇವರು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿಯವರ ಕುರಿತು ಬರೆದಿರುವ ಶಿವ ಸಿರಿ ಸಂಗ್ರಹ ಕೃತಿ ಲೋಕಾರ್ಪಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಿವಸಿರಿ ಸಂಗ್ರಹ ಕೃತಿ ಪುಸ್ತಕ ಚಿಕ್ಕದಾದರೂ ತಿಳಿದುಕೊಳ್ಳುವ ದೊಡ್ಡ ಜ್ಞಾನ ಭಂಡಾರವೇ ಇದೆ. ಈ ಭಾಗದ ರೈತರು ಸುಮಾರು 18 ಎಕರೆ ಭೂಮಿಯನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಶಾಲೆಗೆ ನೀಡಿದ್ದಾರೆ ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸಿದರು. ಈ ಜಾಗದಲ್ಲಿ ಬೃಹತ್ ಸುಸಜ್ಜಿತವಾಗಿ ಶಾಲೆಯ ಕಟ್ಟಡ ನಿರ್ಮಾಣವಾಗಿದೆ 1ರಿಂದ 10ನೇ ತರಗತಿಯವರೆಗೆ ಶಾಲೆ ಮತ್ತು ಪ್ರೌಢಶಾಲೆ ನಡೆಯುತ್ತಿದೆ, ಉತ್ತಮ ಶಿಕ್ಷಕರ ಬೋಧನೆಯಿಂದ ಉತ್ತಮವಾಗಿ ಫಲಿತಾಂಶ ಬರುತ್ತಿದೆ ಎಂದರು.

ಶ್ರೀಗಳು ಶ್ರೀ ಮಠವನ್ನು ದಿಟ್ಟ, ನೇರಕ್ಕೆ ಮೀರಿ ಅಭಿವೃದ್ಧಿ ಮಾಡಿ ನಮ್ಮ ಸಮಾಜವನ್ನು ತಿದ್ದಿ ತಿದ್ದಿ, ಬೈಯ್ದು ಉದ್ಧಾರ ಮಾಡಿದ್ದಾರೆ. ಸ್ವತಂತ್ರ ಬರುವ ಮೊದಲೇ ಜಾತಿ, ಮತ, ಧರ್ಮ ಎನ್ನದೆ ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಟ್ಟವರು, ಇಡೀ ರಾಜ್ಯದಲ್ಲಿರುವ ಮಠ ಮಂದಿರ ಗುರುಗಳ ಸಂಪರ್ಕ ಹೊಂದಿದ್ದರು. ತರಳಬಾಳು ಹುಣ್ಣಿಮೆಯಲ್ಲಿ ಎಲ್ಲಾ ಕೋಮಿನ ಜನರು ಬರುತ್ತಾರೆ ಮಠದಿಂದ ನೀರು ಅನ್ನ ಕೊಡುವುದಿಲ್ಲ ಆದರೆ ನಿಮ್ಮಗಳ ನೆತ್ತಿಗೆ ಜ್ಞಾನದ ಬುತ್ತಿ ತುಂಬುತ್ತಾರೆ ಎಂದು ಹೇಳಿದರು.

ನ್ಯಾಮತಿ ತಾಲೂಕು ಸಾಧು ವೀರಶೈವ ಸಂಘದ ಅಧ್ಯಕ್ಷ ಜಿ.ಶಿವಪ್ಪ ಅಧ್ಯಕ್ಷತೆ ವಹಿಸಿದ್ದರು. ಹೊನ್ನಾಳಿ ತಾಲೂಕು ಸಾ.ವೀ.ಸ.ಅಧ್ಯಕ್ಷ ಗದ್ದಿಗೇಶ್, ಹೊನ್ನಾಳಿ ಅನಿಮಿಷ ಪ್ರಕಾಶನ ಸಂಚಾಲಕ ಸುರಹೊನ್ನೆ ಅರವಿಂದ, ದಾನಿಹಳ್ಳಿ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಅಧ್ಯಕ್ಷ ಡಿ.ತೀರ್ಥಲಿಂಗಪ್ಪ, ಜಿಲ್ಲಾ ಡಿಸಿಸಿ ಬ್ಯಾಂಕ್ ನಿರ್ದೇಶಕ ಡಿ.ಜಿ.ವಿಶ್ವನಾಥ, ಉಪನ್ಯಾಸಕ ಗೊಲ್ಲರಹಳ್ಳಿ ಮಂಜುನಾಥ, ಹೊನ್ನಾಳಿ ತಾಲೂಕು ಕ.ಸಾ.ಪ.ಮಾಜಿ ಅಧ್ಯಕ್ಷ ಕೆಂಚಿಕೊಪ್ಪ ಗಡೇಕಟ್ಟೆ ಧನಂಜಯಪ್ಪ, ಶಿಕಾರಿಪುರ ಸುಷ್ಮಿ ಪ್ರಕಾಶನ ಬಿ.ಎನ್.ಸುನೀಲ್‌ಕುಮಾರ್, ನಿವೃತ್ತ ಉಪನ್ಯಾಸಕ ಲೇಖಕ ಎಸ್.ಆರ್.ಬಸವರಾಜಪ್ಪ, ಸಿವಿಲ್ ಇಂಜಿನಿಯರ್ ಎ.ಜಿ.ಪಂಚಪ್ಪ, ಜಿ.ಆರ್. ಪರಮೇಶ್ವರಪ್ಪ ಇದ್ದರು.




» ಶಿವಸಿರಿ ಸಂಗ್ರಹ ಕೃತಿ ಪುಸ್ತಕ ಚಿಕ್ಕದಾದರೂ ತಿಳಿದುಕೊಳ್ಳುವ ದೊಡ್ಡ ಜ್ಞಾನ ಭಂಡಾರವೇ ಇದೆ

» ಈ ಭಾಗದ ರೈತರು ಸುಮಾರು 18 ಎಕರೆ ಭೂಮಿಯನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಶಾಲೆಗೆ ನೀಡಿದ್ದಾರೆ ಅವರೆಲ್ಲರಿಗೂ ಕೃತಜ್ಞತೆ

» ಶಿವಕುಮಾರ ಶ್ರೀಗಳು ಶ್ರೀ ಮಠದ ಜೊತೆ ನಮ್ಮ ಸಮಾಜವನ್ನು ತಿದ್ದಿ ಉದ್ಧಾರ ಮಾಡಿದ್ದಾರೆ

ಬಾಬು ಜಗಜೀವನ್‌ರಾಮ್ ಜಯಂತಿ

# ದೂರ ದೃಷ್ಟಿಯ ನಾಯಕ



• **ಹೊನ್ನಾಳಿ:** ಮಾಜಿ ಉಪಪ್ರಧಾನಿ ಬಾಬು ಜಗಜೀವನ್‌ರಾಮ್ ಅವರ ದೂರ ದೃಷ್ಟಿಯಿಂದ ಹಸಿರು ಕ್ರಾಂತಿ ಮಾಡಿದ್ದರಿಂದ ದೇಶದಲ್ಲಿ ಆಹಾರದ ಅಹಾಕಾರ ಹಾಗೂ ಆಹಾರದ ಕೊರತೆ ನೀಗಿತು ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಭಾನುವಾರ ಮಾಜಿ ಉಪಪ್ರಧಾನಿ ಬಾಬು ಜಗಜೀವನರಾಂ ಅವರ 119 ನೇ ಹುಟ್ಟು ಹಬ್ಬದ ಅಂಗವಾಗಿ ತಾಲೂಕು ಕಚೇರಿಯಲ್ಲಿ ಹಮ್ಮಿಕೊಂಡಿದ ಜನ್ಮಜಯಂತಿ ಕಾರ್ಯಕ್ರಮದಲ್ಲಿ ಬಾಬು ಜಗಜೀವನರಾಂ ಅವರ ಬಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನಂತರ ಅವರು ಮಾತನಾಡಿದರು.

1971ರ ಯುದ್ಧದ ಸಮಯದಲ್ಲಿ ಆಹಾರದ ಕೊರತೆ ನೀಗಿಸಲು ಹಸಿರು ಕ್ರಾಂತಿಯ ಯಶಸ್ಸಿಗೆ ಕಾರಣರಾದರು, ಶೋಷಿತರ ಧ್ವನಿಯಾಗಿಯೂ ಹೋರಾಟ ಮಾಡಿ ದಲಿತರ ಸಮಾನತೆಗೋಸ್ಕರ ತಮ್ಮ ಜೀವಿತಾವಧಿಯ ಕೊನೆವರೆವಿಗೂ ಹೋರಾಟ ಮಾಡಿದ ಧೀಮಂತ ನಾಯಕ ಹಾಗೂ 1971 ರಲ್ಲಿ ಭಾರತ ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಭಾರತವನ್ನು ಮುನ್ನಡೆಸಿದ ಕೀರ್ತಿ ಬಾಬು ಜಗಜೀವನರಾಂ. ಇಂತಹ ಧೀಮಂತ ನಾಯಕರನ್ನು ನಾವು ಪ್ರೇರಣೆಯಾಗಿಸಿಕೊಂಡು ನಾವು ಮುನ್ನಡೆಯಬೇಕು ಎಂದರು.

ಸಮಾಜದ ಕಟ್ಟಕಡೆಯ ವ್ಯಕ್ತಿಯ ಜೀವನಕ್ಕೂ ಆದ್ಯತೆ ಕೊಟ್ಟಿದ್ದರಿಂದ ಇಂದು ಸಮಾಜದಲ್ಲಿ ಆಹಾರ ಕೊರತೆ ದೂರವಾಗಿದೆ. ಇದಕ್ಕೆ ಬಾಬು ಜಗಜೀವನರಾಮ್ ಎಂದು ಅವರು ಸ್ಮರಿಸಿದ ಅವರು, ಅಧಿಕಾರ ಮತ್ತು ಆಸ್ತಿಯಿಂದ ಗಳಿಸಲಾಗದ ಕೀರ್ತಿಯನ್ನು ಸೇವೆ ಮತ್ತು ತ್ಯಾಗದಿಂದ ಗಳಿಸಬಹುದು ಎಂದು ಶ್ರೀಯುತರ ಬದುಕು ತಿಳಿಸಿಕೊಡುತ್ತದೆ ಎಂದರು.

ಬಾಬೂಜಿ ಎಂದೇ ಹೆಸರಾಗಿದ್ದ ಬಾಬೂಜಿ ಅವರು ನಿಸ್ವಾರ್ಥ ಸೇವೆ, ಸ್ವಾತಂತ್ರ್ಯ ಚಳುವಳಿ ಮತ್ತು ಸಮರ್ಪಣಾ ಮನೋಭಾವ ಹೋರಾಟದಿಂದ ಅವರು ಸಮಾಜಕ್ಕೆ ಆದರ್ಶಪ್ರಾಯರಾಗಿದ್ದಾರೆ, ಆದ್ದರಿಂದ ಅವರ ಆದರ್ಶಗಳನ್ನು ಎಲ್ಲರು ಅಳವಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಉಮಾ, ಗ್ರೇಡ್ 2 ತಹಸೀಲ್ದಾರ್ ಸುರೇಶ್, ದಲಿತ ಮುಖಂಡರಾದ ಆರ್.ನಾಗಪ್ಪ, ತಮ್ಮಣ್ಣ, ಹಾಲೇಶ್, ಜಯಶೀಲಾ ನೇಕಾರ, ರಾಧ, ಸತೀಶ್, ಸುರೇಶ್, ಮಂಜುಳಾ ಹಾಗೂ ಇತರರು ಇದ್ದರು.

# ಕುಂದೂರು ಚಾನಲ್‌ನಲ್ಲಿ ವಿದ್ಯಾರ್ಥಿ ಸಾವು

• **ಹೊನ್ನಾಳಿ:** ಬೆಂಗಳೂರಿನ ಇಂಜಿನಿಯರಿಂಗ್ ವಿದ್ಯಾರ್ಥಿ ಅರ್ಪಣ(19) ಹೊನ್ನಾಳಿ ತಾಲೂಕಿನ ಕುಂದೂರಿನ ಭದ್ರಾ ಚಾನಲ್‌ನಲ್ಲಿ ಈಜಾಡಲು ಹೋಗಿ ಪ್ರಾಣ ಕಳೆದುಕೊಂಡ ಘಟನೆ ಶನಿವಾರ ಸಂಜೆ ನಡೆದಿದೆ.

ಬೆಂಗಳೂರಿನ ಎಂವಿಜೆ ಕಾಲೇಜಿನಲ್ಲಿ 2ನೇ ವರ್ಷದ ಇಂಜಿನಿಯರ್ ವಿದ್ಯಾಭ್ಯಾಸ ಮಾಡುತ್ತಿದ್ದ ಅರ್ಪಣ ಹರಪನಹಳ್ಳಿ ತಾಲೂಕಿನ ಗುಂಡಗತ್ತಿ ಗ್ರಾಮಕ್ಕೆ ಬಂದು ಜಾತ್ರೆ ಮುಗಿಸಿಕೊಂಡು ಚನ್ನಗಿರಿ ತಾಲೂಕಿನ ಕಾರಿಗನೂರು ಗ್ರಾಮದಲ್ಲಿ ನಡೆಯುವ ಜಾತ್ರೆ ಆಗಮಿಸಿದ್ದ.

ಈ ವೇಳೆ ಸ್ನೇಹಿತರ ಜೊತೆ ಹೊನ್ನಾಳಿ ತಾಲೂಕಿನ ಕುಂದೂರು ಗ್ರಾಮದ ಭದ್ರಾ ಚಾನಲ್‌ನಲ್ಲಿ ಸ್ನಾನ ಮಾಡಲು ಹೋದಾಗ ನೀರಿನಲ್ಲಿ ಮುಳುಗಿ ಅಸ್ವಸ್ಥಗೊಂಡಿದ್ದಾನೆ. ಆ ಸಮಯದಲ್ಲಿ ಸ್ನೇಹಿತರು ಆತನನ್ನು ತಾಲೂಕಿನ ಕೂಲಂಬಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ದಾವಣಗೆರೆ ಖಾಸಗಿ ಆಸ್ಪತ್ರೆಗೆ ದಾಖಲಿಸಿದಾಗ ವೈದ್ಯರು ಪರೀಕ್ಷಿಸಿ ಮೃತಪಟ್ಟಿದ್ದಾರೆ ಎಂದು ದೃಢೀಕರಿಸಿದ್ದಾರೆ ಎಂದು ಮೃತ ಯುವಕನ ದೊಡ್ಡಪ್ಪ ಬಸವರಾಜಪ್ಪ ದೂರಿನಲ್ಲಿ ತಿಳಿಸಿದ್ದಾರೆ. ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



# ಕರೂರು, ಅಶೋಕನಗರದಲ್ಲಿ ಕಾಂಗ್ರೆಸ್ ಪ್ರಚಾರ

• **ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯರಗುಂಟೆ, ಕರೂರು ಗ್ರಾಮಗಳು ಮತ್ತು ಅಶೋಕ್ ನಗರದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಚಾರ ಕೈಗೊಂಡರು.

ಸಮರ್ಥ್ ಗೆ ಜನರ ನಿರೀಕ್ಷೆಗಳು, ಅಭಿವೃದ್ಧಿಯ ಅಗತ್ಯಗಳು, ವಿಶೇಷವಾಗಿ ಶಿಕ್ಷಣ, ಆರೋಗ್ಯ ಮತ್ತು ಕೃಷಿ ಕ್ಷೇತ್ರಗಳ ಬೇಡಿಕೆಗಳ ಬಗ್ಗೆ ಅರಿವಿದೆ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸ್ಪಷ್ಟ ಜ್ಞಾನವಿದೆ. ಕ್ಷೇತ್ರದ ಅಭಿವೃದ್ಧಿಗಾಗಿ ಕಾಂಗ್ರೆಸ್ ಸರ್ಕಾರ ಈಗಾಗಲೇ 100 ಕೋಟಿ ರೂ. ಅನುದಾನ ನೀಡಿದ್ದು, ಜನರ ಸಮಗ್ರ ಅಭಿವೃದ್ಧಿ ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಸಾಧ್ಯ. ಸಮರ್ಥ್ ಶಾಮನೂರು ಇನ್ನಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್ ಗುರುತಿಗೆ ಮತ ನೀಡುವ ಮೂಲಕ ಬೆಂಬಲಿಸಬೇಕೆಂದು ಅವರು ಮತದಾರರಿಗೆ ಮನವಿ ಮಾಡಿದರು.



ಪ್ರಚಾರ ಕಾರ್ಯದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಮಹಿಳೆಯರು ಉಪಸ್ಥಿತರಿದ್ದರು.

# ಜಿಎಂಯು ಐಡಲ್ ಕಾರ್ಯಕ್ರಮ



• **ದಾವಣಗೆರೆ:** ನಗರದ ಜಿ.ಎಂ ವಿಶ್ವವಿದ್ಯಾಲಯದಲ್ಲಿ, ಸಂಗೀತ, ನೃತ್ಯ ಸೇರಿದಂತೆ ಪಠ್ಯೇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಜಿಎಂಯು ಐಡಲ್ ಕಾರ್ಯಕ್ರಮ ನಡೆಯಿತು. ಸ್ಪರ್ಧೆಯಲ್ಲಿ ಎಐಎಂಎಲ್ ವಿಭಾಗದ 4ನೇ ಸೆಮಿಸ್ಟರ್ ವಿದ್ಯಾರ್ಥಿ ಸಾತ್ವಿಕ್ ಆನಂದ್ ಪ್ರಥಮ ಸ್ಥಾನ ಗಳಿಸಿದರು. ಅದೇ ವಿಭಾಗದ 4ನೇ ಸೆಮಿಸ್ಟರ್ ನ ಪ್ರೇರಣಾ ಕೊಡಗು ದ್ವಿತೀಯ ಸ್ಥಾನ ಪಡೆದುಕೊಂಡರು. ಪ್ರಭಾರಿ ಪ್ರಾಂಶುಪಾಲ ಡಾ.ಕೆ.ಎಸ್. ಓಂಕಾರಪ್ಪ, ಇಸಿಇ ವಿಭಾಗದ ಮುಖ್ಯಸ್ಥ ಡಾ.ಜೆ.ಪ್ರವೀಣ್ ಬಹುಮಾನ ವಿತರಿಸಿದರು. ಡಾ.ಕಿರಣಕುಮಾರ, ಡಾ. ಸಂತೋಷಕುಮಾರ, ಸಂಯೋಜಕರಾದ ವೈ.ಎಂ.ರಾಜೇಶ್ವರಿ, ವಿ.ಬಿ.ದೀಪಿಕಾ, ತೀರ್ಪುಗಾರರಾದ ಮಾನಸ, ನಾಗರಾಜ್ ನಾಯ್ಕ, ಕೆ.ಸಿ.ಸವಿತಾ ಹಾಜರಿದ್ದರು.

# ಗಮನ ಸೆಳೆದ ವಿದ್ಯಾರ್ಥಿಗಳು ತಯಾರಿಸಿದ ಮಾದರಿಗಳು

• **ದಾವಣಗೆರೆ:** ನಗರದ ಜಿ.ಎಂ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ಡಿಪ್ಲೊಮಾ ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ಆಯೋಜಿಸಿದ್ದ ಟೆಕ್ನೋವೇಶನ್-2026 ಮೆಗಾ ತಾಂತ್ರಿಕ ಉತ್ಸವದಲ್ಲಿ ವಿದ್ಯಾರ್ಥಿಗಳು ತಮ್ಮ ವಿನೂತನ ಮಾದರಿಗಳ ಮೂಲಕ ಭವಿಷ್ಯದ ತಂತ್ರಜ್ಞಾನ ಅನಾವರಣಗೊಳಿಸಿದರು.

ತ್ಯಾಜ್ಯ ಪ್ಲಾಸ್ಟಿಕ್ ನಿಂದ ರಸ್ತೆ ಪೇವರ್ಸ್, ಸ್ಮಾರ್ಟ್ ಟ್ರಾಫಿಕ್ ಕಂಟ್ರೋಲ್, ಸೌರಶಕ್ತಿ ಚಾಲಿತ ಬೀದಿ ದೀಪಗಳು, ಆಟೋಮೇಟೆಡ್ ಸೋಲಾರ್ ಟ್ರ್ಯಾಕಿಂಗ್, ನೆಲ ಸ್ವಚ್ಛಗೊಳಿಸುವ ರೋಬೋಟ್, 3ಡಿ ಪ್ರಿಂಟೆಡ್ ಹ್ಯಾಂಡ್ ನಟ್, ಸ್ಮಾರ್ಟ್ ಕವಚ, ಡಿಜಿಟಲ್ ಭದ್ರತಾ ಪೆಟ್ಟಿಗೆ, ಆಟೋಮ್ಯಾಟಿಕ್ ಲಾಕ್, ಸ್ಮಾರ್ಟ್ ಡಾಕ್ಟರ್ ಅಪಾಯಿಂಟ್ಮೆಂಟ್, ಸ್ವಯಂಚಾಲಿತ ಚೆಕ್-ಇನ್ ಹೀಗೆ ಅನೇಕ ಮಾದರಿಗಳು ಕಾರ್ಯಕ್ರಮದಲ್ಲಿ ಪ್ರದರ್ಶನಗೊಂಡವು. ಕಂಪ್ಯೂಟಿಂಗ್ ಮತ್ತು ಕೃತಕ ಬುದ್ಧಿಮತ್ತೆ, ಮೆಕ್ಯಾನಿಕಲ್, ರೋಬೋಟಿಕ್ಸ್ ಮತ್ತು ಆಟೋಮೇಷನ್, ಸಿವಿಲ್ ಮತ್ತು ಬಯೋಟೆಕ್ನಾಲಜಿ, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ವಿಭಾಗಗಳಲ್ಲಿ ನಡೆದ ತಾಂತ್ರಿಕ ಸ್ಪರ್ಧೆಗಳಲ್ಲಿ ದಾವಣಗೆರೆ, ಉತ್ತರ ಕನ್ನಡ, ರಾಮನಗರ, ಬಾಗಲಕೋಟೆ, ಬೆಂಗಳೂರು, ಹಾವೇರಿ, ಧಾರವಾಡ, ಗದಗ, ತುಮಕೂರು, ವಿಜಯನಗರ, ಬಳ್ಳಾರಿ, ಶಿವಮೊಗ್ಗ, ಮೈಸೂರು, ಚಿಕ್ಕಮಗಳೂರು, ಉಡುಪಿ, ಚಿತ್ರದುರ್ಗ, ಅಥಣಿ, ಕೊಪ್ಪಳ, ರಾಯಚೂರು, ಬೆಳಗಾವಿ ಸೇರಿದಂತೆ ರಾಜ್ಯದ 23 ಜಿಲ್ಲೆಗಳಿಂದ ಒಟ್ಟು 188 ತಂಡಗಳು ಭಾಗವಹಿಸಿದ್ದವು. ವಿಶ್ವವಿದ್ಯಾಲಯದ ಕುಲಸಚಿವ ಡಾ.ಬಿ.ಎಸ್.ಸುನೀಲ್‌ಕುಮಾರ್, ಡಾ.ಜಿ.ಎಂ.ಶಿವನಗೌಡ, ಪ್ರೊ. ಆರ್.ರವಿನಂದನ್ ಇದ್ದರು.



ಕಾಂಗ್ರೆಸ್ ಅಭ್ಯರ್ಥಿಗೆ ಜಯ | ಕೃಷಿ ಸಚಿವ ಚಲುವರಾಯಸ್ವಾಮಿ ವಿಶ್ವಾಸ

# ಎಸ್‌ಎಸ್ ಅಭಿವೃದ್ಧಿಗೆ ಸಿಗಲಿದೆ ಜನಮನ್ನಣೆ

• **ದಾವಣಗೆರೆ:** ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಹಾಗೂ ಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪನವರ ಅಭಿವೃದ್ಧಿಗೆ ಜನಮನ್ನಣೆ ಸಿಗಲಿದ್ದು, ದಾವಣಗೆರೆ ದಕ್ಷಿಣದಲ್ಲಿ ನಮ್ಮ ಅಭ್ಯರ್ಥಿ ಗೆಲ್ಲಲಿದ್ದಾರೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದ ಜನತೆ ಶಾಮನೂರು ಶಿವಶಂಕರಪ್ಪನವರ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಎಲ್ಲಾ ಸಮುದಾಯದವರಿಗೂ ಸೌಲಭ್ಯ ಕಲ್ಪಿಸಿರುವ ಶಿವಶಂಕರಪ್ಪನವರ ಅಭಿವೃದ್ಧಿ ಕಾರ್ಯಗಳು ಸಮರ್ಥ್ ಕೈ ಹಿಡಿಯಲಿವೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವುದು ನಿಶ್ಚಿತವಾಗಿದ್ದು, ವಿಧಾನಸಭೆಯಲ್ಲಿ ನಮ್ಮ ಶಾಸಕರ ಸಂಖ್ಯೆ 138ರಿಂದ 140ಕ್ಕೆ ಏರಿಕೆಯಾಗಲಿದೆ ಎಂದರು.

ಗ್ಯಾರಂಟಿ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ನುಡಿದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಅಭಿವೃದ್ಧಿ ಕಾರ್ಯಗಳಿಗೂ ಹಣ ನೀಡುತ್ತಿದೆ. ಹಿಂದೆಂದೂ ಕಾಣದ ರೀತಿಯಲ್ಲಿ ಪ್ರತಿ ಕ್ಷೇತ್ರದ ಅಭಿವೃದ್ಧಿಗೆ ಶಾಸಕರ ವಿವೇಚನೆಯಡಿ 80 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ವಿಪಕ್ಷ, ಆಡಳಿತದ ಶಾಸಕರಿಗೂ ಅನುದಾನ ಹಂಚಿಕೆ ಮಾಡಲಾಗಿದೆ. ಈ ವರ್ಷ ಪ್ರತಿ ಶಾಸಕರಿಗೂ 25 ಕೋಟಿ ರೂ. ಅನುದಾನ ಮೀಸಲಿಡಲಾಗಿದೆ ಎಂದು ಅವರು ಸಮರ್ಥಿಸಿಕೊಂಡರು.

ರಾಜ್ಯದಿಂದ 4.50 ಲಕ್ಷ ಕೋಟಿ ರೂ. ತೆರಿಗೆ ಹಣ ಪಡೆಯುತ್ತಿರುವ ಕೇಂದ್ರ ಸರ್ಕಾರ ರಾಜ್ಯಕ್ಕೆ ಹಂಚಿಕೆ ಮಾಡುತ್ತಿರುವುದು ಕೇವಲ 50 ಸಾವಿರ ಕೋಟಿ. ರಾಜ್ಯದಿಂದ ಐವರು ಕೇಂದ್ರ ಸಚಿವರಿದ್ದರೂ ಕರ್ನಾಟಕದ ಹಿತಾಸಕ್ತಿ ಬಗ್ಗೆ ಬಾಯಿಬಿಡುತ್ತಿಲ್ಲ, ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಅನುಮತಿ ನೀಡಿದ್ದರೂ, ಕೇಂದ್ರ ಸರ್ಕಾರ ಒಪ್ಪಿಗೆ ಕೊಡುತ್ತಿಲ್ಲ ಎಂದು ಅವರು ಆರೋಪಿಸಿದರು.



ಪ್ರಸಕ್ತ ಉಪಚುನಾವಣೆ ಫಲಿತಾಂಶ ಆಡಳಿತದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಉಪಚುನಾವಣೆ ಗೆಲುವು ಮುಂದಿನ ಸಾರ್ವತ್ರಿಕ ಚುನಾವಣೆಯ ದಿಕ್ಸೂಚಿ ಎಂಬುದು ಅವರವರ ವೈಯಕ್ತಿಕ ಅಭಿಪ್ರಾಯ, ರಾಜಕೀಯ ವಿಶ್ಲೇಷಣೆ. ಈ ಹಿಂದೆ ನಡೆದ ಬಳ್ಳಾರಿ, ಚನ್ನಪಟ್ಟಣ, ಹಾವೇರಿ ಮೂರೂ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು. ಚನ್ನಪಟ್ಟಣ, ಹಾವೇರಿ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಬಸವರಾಜ್ ಬೊಮ್ಮಾಯಿಯವರ ಪುತ್ರರೇ ಸೋತರು. ಕಾಂಗ್ರೆಸ್ಸನ್ನು ಕಿತ್ತೊಗೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದರು. ಶಾಸಕರಾದ ರವಿಕುಮಾರ್ ಗಣಿಗ, ಬಸವರಾಜ್ ಶಿವಗಂಗಾ, ಹರೀಶ್ ಗೌಡ, ಎ.ಸಿ.ಶ್ರೀನಿವಾಸ್, ದಿನೇಶ್ ಗೂಳಿಗೌಡ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಸಿದ್ದರಾಮಯ್ಯರನ್ನು ಟೀಕಿಸುವ ಮುನ್ನ ಯೋಚಿಸಲಿ ಎಂದ ಸಚಿವ ಲಾಡ್


# ಬಿಜೆಪಿಗೆ ಮಾತಾಡಲು ಗಂಭೀರ ವಿಷಯಗಳಿಲ್ಲ

• **ದಾವಣಗೆರೆ:** ಸಿಎಂ ಸಿದ್ದರಾಮಯ್ಯನವರನ್ನು ವೈಯಕ್ತಿಕವಾಗಿ ಟಾರ್ಗೆಟ್ ಮಾಡಿ ಮಾತನಾಡುವುದನ್ನು ಬಿಟ್ಟರೆ ಬಿಜೆಪಿಯವರಿಗೆ ಯಾವುದೇ ಗಂಭೀರವಾದ ವಿಷಯಗಳಿಲ್ಲ ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು.

ನಗರದಲ್ಲಿ ಶನಿವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟೀಕಿಸುವ ಬಿಜೆಪಿಯವರು ಸ್ವಲ್ಪ ಯೋಚನೆ ಮಾಡಬೇಕು. 17 ಬಾರಿ ಬಜೆಟ್ ಮಂಡಿಸಿರುವ ಇಂತಹ ಅನುಭವವಿರುವ ನಾಯಕರು ದೇಶದಲ್ಲೇ ಬೇರೆ ಯಾರೂ ಇಲ್ಲ, ನಾವು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಂದೂ ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ, ಅಂಕಿ-ಅಂಶಗಳನ್ನು ಇಟ್ಟುಕೊಂಡು ಮೋದಿಯವರ ಸಾಧನೆ, ಕಾರ್ಯಕ್ಷಮತೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಬಿಜೆಪಿಯವರು ಕೇವಲ ಪ್ರಚಾರಕ್ಕಾಗಿ ಸಿದ್ದರಾಮಯ್ಯ ವಿರುದ್ಧ ಮಾತನಾಡುತ್ತಿದ್ದಾರೆ ಎಂದರು.

ದಿನಬೆಳಗಾದರೆ ಮುಸ್ಲಿಮರ ವಿರುದ್ಧ ಮಾತನಾಡುವ ಬಿಜೆಪಿಗರಿಗೆ ಈಗ ದಿಢೀರನೆ ಅಲ್ಪಸಂಖ್ಯಾತರ ಮೇಲೆ ಪ್ರೀತಿ ಹುಟ್ಟಿಕೊಂಡಿದೆ. ಬಿಜೆಪಿಯ ಸಂಸದರಲ್ಲಿ ಎಷ್ಟು ಜನ ಅಲ್ಪಸಂಖ್ಯಾತರಿದ್ದಾರೆ? ಬಾಗಲಕೋಟೆ ಸೇರಿದಂತೆ ರಾಜ್ಯದೆಲ್ಲೆಡೆ ವಾತಾವರಣ ಕಾಂಗ್ರೆಸ್ ಪರವಾಗಿದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳು ಪಕ್ಷಕ್ಕೆ ಗೆಲುವು ತಂದುಕೊಡಲಿವೆ. ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಖಚಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳೆಯರು ಮತ್ತು ಯುವಕರು ಸ್ವಯಂಪ್ರೇರಣೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸುತ್ತಿದ್ದಾರೆ. ಗೃಹಲಕ್ಷ್ಮೀ, ಉಚಿತ ವಿದ್ಯುತ್ ಮತ್ತು ಅನ್ನಭಾಗ್ಯ ಯೋಜನೆಗಳ ಪರಿಣಾಮವಾಗಿ ಜನರಲ್ಲಿ ಕಾಂಗ್ರೆಸ್ ಬಗ್ಗೆ ಹೆಚ್ಚಿನ ಒಲವು ಮೂಡಿದೆ. ಕ್ಷೇತ್ರದಲ್ಲಿ ಸಾವಿರಾರು ಮಹಿಳೆಯರು ಹಾಗೂ ಕುಟುಂಬಗಳು ಈ ಯೋಜನೆಗಳ ಸೌಲಭ್ಯ ಪಡೆಯುತ್ತಿದ್ದಾರೆ. ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪರ ಅಲೆ ಕಂಡುಬರುತ್ತಿದೆ ಎಂದು ಅವರು ತಿಳಿಸಿದರು.



ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯಕ್ಕೆ ಸಲ್ಲಬೇಕಾದ ಅನುದಾನವನ್ನು ಸರಿಯಾಗಿ ನೀಡದೆ ಅನ್ಯಾಯ ಮಾಡುತ್ತಿದೆ. 15ನೇ ಹಣಕಾಸು ಆಯೋಗದಡಿ ರಾಜ್ಯಕ್ಕೆ ಬರಬೇಕಿದ್ದ ಸಾವಿರಾರು ಕೋಟಿ ರೂ.ಗಳನ್ನು ಕಡಿತಗೊಳಿಸಲಾಗಿದೆ. ಜಲಜೀವನ್ ಮಿಷನ್ ಮತ್ತು ಉದ್ಯೋಗ ಖಾತ್ರಿ ಯೋಜನೆಗಳಲ್ಲೂ ರಾಜ್ಯಕ್ಕೆ ಅನ್ಯಾಯವಾಗಿದೆ. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದರು.

ಸಮರ್ಥ್ ಮಲ್ಲಿಕಾರ್ಜುನ್ ಕನಿಷ್ಠ 50 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಅವರು ನುಡಿದರು.

# ಕಾಂಗ್ರೆಸ್ ಸೋಲು ನಿಶ್ಚಿತ: ಬಿಎಸ್‌ವೈ

• **ಬಾಗಲಕೋಟೆ:** ಈ ಬಾರಿಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು ನಿಶ್ಚಿತ ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ತಾಂಡಾಗಳ ಮುಖಂಡರೊಂದಿಗೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಸಭೆ ನಡೆಸಿದ ಮತಯಾಚಿಸಿ ಅವರು ಮಾತನಾಡಿದರು. ಸಿದ್ದರಾಮಯ್ಯ ಅವರು ಇಲ್ಲಿಗೆ ಬಂದು ವಾರಗಟ್ಟಲೆ ಉಳಿದು ಪ್ರಚಾರ ಮಾಡುತ್ತಿದ್ದಾರೆ. ಇಲ್ಲೇ ಕ್ಯಾಂಪ್ ಹೂಡಿದ್ದಾರೆ. ಅವರ ಪಕ್ಷದ ಅಭ್ಯರ್ಥಿ ಅವರದೇ ಸಮುದಾಯದವರು. ಅವರನ್ನು ಗೆಲ್ಲಿಸಲೇ ಬೇಕು ಎಂಬ ಒಂದೇ ಕಾರಣದಿಂದ ಇಲ್ಲೇ ಠಿಕಾಣಿ ಹೂಡಿದ್ದಾರೆ ಎಂದರು.

ಕಾಂಗ್ರೆಸ್‌ಗೆ ಸೋಲು ಖಂಡಿತ ಎಂಬುದು ಎಲ್ಲರಿಗೂ ತಿಳಿದಿದೆ. ಬಾಗಲಕೋಟೆಯಲ್ಲಿ ಬಿಜೆಪಿಯ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರೇ ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ನುಡಿದರು. ಸಿದ್ದರಾಮಯ್ಯ ಅವರೇ ಜಾತಿ ವಿಷಬೀಜ ಬಿತ್ತಿ ರಾಜಕಾರಣ ಮಾಡುವು ದನ್ನು ಈಗಲಾದರೂ ಬಿಡಿ. ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ ಸದಾ ಒಂದಿಲ್ಲೊಂದು ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರ ಇನ್ನಾದರೂ ಪ್ರಾಮಾಣಿಕವಾಗಿ ಜನರ ಒಳಿತಿಗಾಗಿ ಕೆಲಸ ಮಾಡಲಿ ಎಂದು ಆಗ್ರಹಿಸಿದರು.



### ನಿರೀಕ್ಷೆಗೂ ಮೀರಿ ಜನಬೆಂಬಲ

ನಮ್ಮೆಲ್ಲ ಕಾರ್ಯಕರ್ತರು ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರದಲ್ಲಿ ತೊಡಗಿದ್ದಾರೆ. ಜನ ಬೆಂಬಲ ನಿರೀಕ್ಷೆಗೂ ಮೀರಿ ಚೆನ್ನಾಗಿದೆ. ನಮ್ಮೊಂದಿಗೆ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ ಅವರು ಜೊತೆ ಪ್ರಚಾರಕ್ಕೆ ಬಂದಿರುವುದು ಹೆಮ್ಮೆಯ ಸಂಗತಿ. ಅವರ ಶಕ್ತಿಯೂ ನಮ್ಮ ಜೊತೆ ಸೇರಿದೆ. ಕಾಂಗ್ರೆಸ್‌ನವರು ಸೂಟ್ ಕೇಸ್‌ನಲ್ಲಿ ಹಣ ತಂದು ಇಲ್ಲಿ ಹಂಚಿ ಹಣದ ಬಲದಲ್ಲಿ, ಹೆಂಡದ ಬಲದಲ್ಲಿ ಮತ್ತು ತೋಳ್ಬಲದಲ್ಲಿ ಗೆಲ್ಲುತ್ತೇವೆ ಅಂದುಕೊಂಡಿದ್ದಾರೆ. ಆದರೆ ಹಾಗೆ ಆಗದು. ನಮ್ಮ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಂತಹ ಪ್ರಾಮಾಣಿಕರೇ ಇಲ್ಲಿ ಗೆಲ್ಲುವುದು ಎಂದರು.

ಕಲಾ ತಂಡಗಳ ಮೆರವಣಿಗೆ



ಬೆಳಗಾವಿಯಲ್ಲಿ ಭಾನುವಾರ ನಡೆದ ಬಾಬು ಜಗಜೀವನ್‌ರಾಂ ಅವರ ಜನ್ಮದಿನಾಚರಣೆ ಪ್ರಯುಕ್ತ ವಿವಿಧ ನೃತ್ಯ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು.

# ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ವ್ಯವಸ್ಥಿತ ಪಿತೂರಿ: ಸುರ್ಜೇವಾಲ

• **ಬೆಂಗಳೂರು:** ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳನ್ನು ತಡೆಯುವ ಮೂಲಕ ಕರ್ನಾಟಕದ ವಿರುದ್ಧ ಕೇಂದ್ರ ಸರ್ಕಾರವು ವ್ಯವಸ್ಥಿತ ಪಿತೂರಿ ನಡೆಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಿಸಿದರು.



ಭಾನುವಾರ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಬಿಜೆಪಿಯ ಷಡ್ಯಂತ್ರ ಮತ್ತು ಕನ್ನಡಿಗ ವಿರೋಧಿ ಧೋರಣೆ ಈಗ ಸಂಪೂರ್ಣವಾಗಿ ಬಯಲಾಗಿದೆ. ಮೋದಿ ಸರ್ಕಾರ ಮತ್ತು ಬಿಜೆಪಿ ಯೋಜಿತವಾಗಿ 6.5 ಕೋಟಿ ಕನ್ನಡಿಗರನ್ನು ಶಿಕ್ಷಿಸುತ್ತಿದೆ ಎಂದು ಕಿಡಿಕಾರಿದರು.

ತೆರಿಗೆ ಮತ್ತು ಅನುದಾನದಲ್ಲಿ ಕರ್ನಾಟಕದ ನ್ಯಾಯಸಮ್ಮತ ಪಾಲನ್ನು ನಿರಾಕರಿಸುವುದು ಮತ್ತು ಕನ್ನಡಿಗರ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಅಡ್ಡಿಪಡಿಸುವ ಮೂಲಕ ಬಿಜೆಪಿ ತನ್ನ ವಿರೋಧಿ ನೀತಿಯನ್ನು ಪ್ರದರ್ಶಿಸುತ್ತಿದೆ ಎಂದರು. 14ನೇ ಮತ್ತು 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಬರಬೇಕಿದ್ದ ಪಾಲು 79,770 ಕೋಟಿ ರೂ.ಗಳ ನಿರಾಕರಣೆ, ಅವೈಜ್ಞಾನಿಕ ಜಿಎಸ್‌ಟಿ ಜಾರಿಯಿಂದ ರಾಜ್ಯಕ್ಕೆ 59,274 ಕೋಟಿ ರೂ. ಮತ್ತು ಹೊಸ ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯಕ್ಕೆ 9 ಸಾವಿರ ಕೋಟಿ ರೂ. ನೇರ ನಷ್ಟವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ 5,300 ಕೋಟಿ ರೂ. ಘೋಷಿಸಿ ಬಿಡುಗಡೆ ಮಾಡಲಿಲ್ಲ ಎಂದು ಕಿಡಿಕಾರಿದರು.

## ಕಿರುಸುದ್ದಿ

### ಗೌರವ ಡಾಕ್ಟರೇಟ್ ನಿರಾಕರಿಸಿದ ಬೊಮ್ಮಾಯಿ

• **ಬೆಂಗಳೂರು:** ಹಾವೇರಿ ವಿಶ್ವವಿದ್ಯಾಲಯವು ಘೋಷಿಸಿರುವ ಗೌರವ ಡಾಕ್ಟರೇಟ್ ಅನ್ನು ಸಂಸದ ಬಸವರಾಜ ಬೊಮ್ಮಾಯಿ ನಿರಾಕರಿಸಿದ್ದು, ಸಾರ್ವಜನಿಕ ಸೇವೆಗೆ ಜನರ ಪ್ರೀತಿ ಮತ್ತು ವಿಶ್ವಾಸವೇ ನನಗೆ ಅತ್ಯಂತ ದೊಡ್ಡ ಗೌರವವೆಂದು ಭಾವಿಸುತ್ತೇನೆ. ಆದ್ದರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ವಿನಮ್ರವಾಗಿ ಪುನರುಚ್ಚರಿಸುತ್ತೇನೆ ಎಂದು ತಿಳಿಸಿದ್ದಾರೆ. ಡಾಕ್ಟರೇಟ್ ನಿರಾಕರಿಸಿರುವ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ನನಗೆ ಗೌರವ ಡಾಕ್ಟರೇಟ್ ನೀಡಲು ತೀರ್ಮಾನಿಸಿರುವುದಕ್ಕೆ ವಿಶ್ವವಿದ್ಯಾಲಯದ ಕುಲಪತಿಗಳು, ಉಪಕುಲಪತಿಗಳು, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳು. ನಾನು ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ಈಗಾಗಲೇ ಕುಲಪತಿಗಳಿಗೆ ತಿಳಿಸಿದ್ದೇನೆ ಎಂದಿದ್ದಾರೆ. ಗೌರವ ಡಾಕ್ಟರೇಟ್ ಎಂಬುದು ದೀರ್ಘಕಾಲದಿಂದ ಯಾವುದಾದರೂ ಕ್ಷೇತ್ರದಲ್ಲಿ ವಿಶಿಷ್ಟ ಮತ್ತು ಮಹತ್ತರ ಸೇವೆ ಸಲ್ಲಿಸಿದವರಿಗೆ ನೀಡಬೇಕಾದ ಗೌರವವೆಂಬುದು ನನ್ನ ಅಭಿಪ್ರಾಯ. ಹೀಗಾಗಿ ಇದನ್ನು ಅಂಥ ಸಾಧಕರಿಗೆ ನೀಡಬೇಕು. ರಾಜಕಾರಣಿಗಳಿಗೆ ಅಥವಾ ಸ್ವಯಂ ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಗೌರವ ಡಾಕ್ಟರೇಟ್ ನೀಡುವುದು ಸಮಂಜಸವಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ವಿಷಯದಲ್ಲಿ ಪುನರ್ ವಿಚಾರ ಮಾಡಬೇಕೆಂದು ವಿನಂತಿಸುತ್ತೇನೆ ಎಂದು ತಿಳಿಸಿದ್ದಾರೆ.



### ಎರಡು ಪ್ರತ್ಯೇಕ ಅಪಘಾತ: ನಾಲ್ವರ ಸಾವು

• **ತುಮಕೂರು/ ಚಿತ್ರದುರ್ಗ:** ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣದಲ್ಲಿ ನಾಲ್ವರು ಮೃತಪಟ್ಟಿದ್ದು, ಹಲವರಿಗೆ ಗಾಯಗೊಂಡಿರುವ ಘಟನೆ ತುಮಕೂರು ಮತ್ತು ಚಿತ್ರದುರ್ಗದಲ್ಲಿ ನಡೆದಿದೆ. ತುಮಕೂರು ಜಿಲ್ಲೆಯ ಶಿರಾ ಹೊರವಲಯದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸಂಭವಿಸಿದೆ. ನಿಂತಿದ್ದ ಖಾಸಗಿ ಬಸ್‌ಗೆ ಹಿಂದಿನಿಂದ ಬಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಭೀಕರವಾಗಿ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಹಿಂದಿನಿಂದ ಬಂದು ಖಾಸಗಿ ಬಸ್‌ಗೆ ಡಿಕ್ಕಿ ರಭಸಕ್ಕೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣ ಶಿರಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

**ಲಾರಿ-ಕಾರು ಮುಖಾಮುಖಿ:** ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ರಾಜಾಪುರ ಬಳಿ ಲಾರಿ ಮತ್ತು ಕಾರು ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಇಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಚಿಕ್ಕನಹಳ್ಳಿ ಗ್ರಾಮದ ಕಾರಿನ ಚಾಲಕ ಕಿರಣ್ ಗೌಡ (24) ಹಾಗೂ ಬೆಂಗಳೂರಿನ ಲಗ್ಗೆರೆಯ ಮುನೇಶ್ವರ ಲೇಔಟ್ ಸಿಟೀ ಗಾರ್ಡನ್ ನಿವಾಸಿ ಜೇಮ್ಸ್ ರವಿಚಂದ್ರ (42) ಎಂದು ಗುರುತಿಸಲಾಗಿದೆ. ಈ ಕುರಿತು ರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಾಗಲಕೋಟೆಯಲ್ಲಿ ಕರಪತ್ರ ಹಂಚಿದ್ದವರ ವಿರುದ್ಧ ಕ್ರಮಕ್ಕೆ ಆಗ್ರಹ

# ಗೂಂಡಾ ಸರ್ಕಾರ: ಅಶೋಕ

• **ಬಾಗಲಕೋಟೆ:** ಕಾಂಗ್ರೆಸ್ ಕಾರ್ಯಕರ್ತರು ಕರಪತ್ರವನ್ನು ಹಂಚುವ ಮೂಲಕ ಬಿಜೆಪಿಗೆ ಮತ ಹಾಕಿದರೆ ಜೈಲಿಗೆ ಕಳುಹಿಸಲಾಗುವುದು ಎಂದು ಕರಪತ್ರ ಹಂಚಿಕೆ ಬೆದರಿಕೆ ಹಾಕುತ್ತಿರುವುದನ್ನು ನೋಡಿದರೆ ರಾಜ್ಯದಲ್ಲಿ ಗೂಂಡಾ ಸರ್ಕಾರವಿದೆಯಾ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ವಿರುದ್ಧ ಕರಪತ್ರ ಹಂಚಿದ್ದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ಚುನಾವಣೆ ನಡೆಯುತ್ತಿದ್ದರೂ ಇಲ್ಲಿಯ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿಗೆ ಬಾಗಲಕೋಟೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭೇಟಿ ನೀಡಿದ ಸಂದರ್ಭದಲ್ಲಿ ಅಕ್ರಮ ಮತದಾನ ಮಾಡುವವರು ಹಾಗೂ ಬೇರೆ ರಾಜ್ಯದವರು ಇಲ್ಲಿ ಮತದಾನ ಮಾಡಿದರೆ ಜೈಲಿಗೆ ಕಳಿಸಲಾಗುವುದು ಇಲ್ಲಿ ಅದನ್ನು ನೋಡಿಕೊಳ್ಳಲು ನಮ್ಮ ತಂಡವಿದೆ ಎಂದು ಭಯ ಹುಟ್ಟಿಸಿ ಹೋಗಿದ್ದು, ಈಗ ಕರಪತ್ರ ಹಂಚಲು ಅವರ ಪ್ರಚೋದನೆಯೇ ಕಾರಣವಾಗಿದೆ ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿ ವಿರುದ್ಧ ಕರಪತ್ರ ಹಂಚಿಕೆ ಮಾಡಿದ ಎನ್‌ಎಸ್‌ಯು ಕಾರ್ಯಕರ್ತರನ್ನು ಪೊಲೀಸ್ ಠಾಣೆಗೆ ಕರೆತಂದು ಅವರಿಗೆ ರಾಜಮರ್ಯಾದೆಯನ್ನು ನೀಡಲಾಗಿದೆ. ಪೊಲೀಸ್ ಠಾಣೆಯಲ್ಲಿಯೇ ನಿಂತು ಕರ ಪತ್ರ ಹಂಚಿದವರು ಲೈವ್ ವಿಡಿಯೋ ಮಾಡು ತ್ತಾರೆಂದರೆ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿದ್ದಾರೆಂದು ಸಾಬೀತಾಗಿದೆ. ಮುಖ್ಯಮಂತ್ರಿ, ಡಿಸಿಎಂ ಗೂಂಡಾಗಿರಿ ನೇತೃತ್ವ ವಹಿಸಿದ್ದಾರೆ. ವಿದ್ಯಾರ್ಥಿಗಳು ಧೈರ್ಯವಾಗಿ ಮತದಾನ ಮಾಡಬೇಕು. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರಲಿದೆ ಎಂದರು. ನೂರಾರು ಕೋಟಿ ರೂ.ಗಳನ್ನು ಚುನಾವಣೆಗೆ ಹಂಚಲು ಸರ್ಕಾರದವರು ತಂದಿದ್ದಾರೆ. ಬಾಗಲಕೋಟೆಯಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ. ಶಾಂತಿಯುತ ಚುನಾವಣೆಗೆ ಜಿಲ್ಲಾಡಳಿತ ಮುಂದಾಗಬೇಕು ಎಂದರು.

ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷಕ್ಕೆ ಮರಳಿ ಸೇರ್ಪಡೆ ಮಾಡಿಕೊಳ್ಳುವ ಕುರಿತು ಪಕ್ಷದ ಹೈಕಮಾಂಡ್ ನಿರ್ಣಯ ಕೈಗೊಳ್ಳಲಿದೆ. ಯತ್ನಾಳ ಅವರು ಹಿಂದೂತ್ವದ ಬ್ರ್ಯಾಂಡ್ ಆಗಿದ್ದಾರೆ. ಯತ್ನಾಳ, ಕಾರಜೋಳ, ಬೊಮ್ಮಾಯಿ, ಹೀಗೆ ಬಿಜೆಪಿ ನಾಯಕರು ಚುನಾವಣೆ ಪ್ರಚಾರಕ್ಕೆ ಬಂದಿದ್ದರಿಂದ ಸರ್ಕಾರಕ್ಕೆ ಸೋಲಿನ ಭಯ ಹುಟ್ಟಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲ್ಲಲಿದ್ದಾರೆ ಎಂದರು.

ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಕೆಲವು ಕಾಂಗ್ರೆಸ್ ನಾಯಕರು ಬೆಂಬಲ ಕೊಡುತ್ತಿದ್ದಾರೆ ಇವರಲ್ಲಿ ಡಿ.ಕೆ.ಶಿವಕುಮಾರ ಕೂಡ ಇದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಿಎಂ ಹುದ್ದೆಯಿಂದ ಮನೆಗೆ ಕಳುಹಿಸಲು ಬಿಜೆಪಿ ಅಭ್ಯರ್ಥಿ ಗೆಲ್ಲಬೇಕು ಎಂದು ಡಿ.ಕೆ.ಶಿವಕುಮಾರ ಅವರ ಆಶಯವಾಗಿದೆ ಎಂದರು.



### ವಿದ್ಯಾರ್ಥಿಗಳಿಗೆ ಬೆದರಿಕೆ

ಕಾಂಗ್ರೆಸ್ ಪಕ್ಷದ ಸರ್ಕಾರದಿಂದ ಪ್ರಜಾಪ್ರಭುತ್ವ ಕಗ್ಗೊಲೆಯಾಗಿದೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬಳಿ ಹೋಗಿ ಕರಪತ್ರ ಹಂಚಿಕೆ ಮಾಡಿ ವಿದ್ಯಾರ್ಥಿಗಳಿಗೆ ಬೆದರಿಕೆ ಹಾಕುವ ಕೆಲಸ ಮಾಡಲಾಗಿದೆ. ಇನ್ನೂ ಈ ಪ್ರಕರಣದ ಕುರಿತು ಚುನಾವಣಾ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ನ್ಯಾಯಸಮ್ಮತ ತನಿಖೆಯನ್ನು ನಡೆಸಲು ಹೊರಗಿನ ಅಧಿಕಾರಿಗಳನ್ನು ಇಲ್ಲಿಗೆ ನೇಮಕ ಮಾಡಬೇಕು ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

# ಕೇರಳ ಟೆಕ್ಕಿ ಜಿಎಸ್ ಶರಣ್ಯ ಪತ್ತೆ

• **ಬೆಂಗಳೂರು:** ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಭಾನುವಾರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 9 ತಂಡಗಳು ಹಗಲಿರುಳು ಕಾರ್ಯಾಚರಣೆ ನಡೆಸಿ ಯುವತಿಯನ್ನು ಕರೆತಂದಿದ್ದಾರೆ. ಅವರನ್ನು ಸುರಕ್ಷಿತವಾಗಿ ಕೇರಳದ ಅವರ ಮನೆಗೆ ತಲುಪಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಚಾರಣಕ್ಕೆ ಬಂದಿದ್ದ ಶರಣ್ಯ ಏ.2ರಂದು ಇತರ 15 ಮಂದಿ ಚಾರಣಿಗರೊಂದಿಗೆ ಮತ್ತು ನೇಚರ್ ಗೈಡ್ ಜೊತೆಯಲ್ಲಿ ಚಾರಣಕ್ಕೆ ಹೋಗಿದ್ದರು. ಆದರೆ, ಮಧ್ಯಾಹ್ನ ಮೂಲ ನೆಲೆಗೆ ಎಲ್ಲ ಚಾರಣಿಗರು ಬಂದಾಗ ಇವರು ದಾರಿ ತಪ್ಪಿರುವುದು ತಿಳಿಯಿತು. ವಿಷಯ ತಿಳಿದ ಕೂಡಲೇ ಅಂದಿನಿಂದಲೇ 5 ತಂಡಗಳಿಂದ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಯುವತಿ ನಾಪತ್ತೆ ಆಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಇಂದು ಹೆಚ್ಚುವರಿ ಸಿಬ್ಬಂದಿಯನ್ನು ಶೋಧ ಕಾರ್ಯಕ್ಕೆ ನಿಯೋಜಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ತಾವು ದಾವಣಗೆರೆ ಉಪ ಚುನಾವಣೆ ಪ್ರಚಾರಕ್ಕೆ ತೆರಳಿದ್ದಾಗ ವಿಷಯ ತಿಳಿಯಿತು. ಕೂಡಲೇ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದೆ. ಯುವತಿ ಈಗ ಪತ್ತೆಯಾಗಿದ್ದು, ಅವರೊಂದಿಗೆ ಸಹ ಮಾತನಾಡಿದ್ದೇನೆ. ಅವರು ಆರೋಗ್ಯವಾಗಿದ್ದಾರೆ ಎಂದು ಸಚಿವರು ಹೇಳಿದರು.



### 9 ತಂಡಗಳಿಂದ ಕಾರ್ಯಾಚರಣೆ

ಭಾನುವಾರ ಹೆಚ್ಚುವರಿಯಾಗಿ 40 ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿತ್ತು. ಒಟ್ಟು 9 ತಂಡಗಳು ಶೋಧ ಕಾರ್ಯಾಚರಣೆ ನಡೆಸಿದ್ದವು. ಇದರಲ್ಲಿ ಪೊಲೀಸ್ ಇಲಾಖೆ, ನಕ್ಸಲ್ ನಿಗ್ರಹ ದಳ, ಅರಣ್ಯ ಇಲಾಖೆ ಸೇರಿದಂತೆ ಬಹು ಸಂಸ್ಥೆಗಳು ಸಹಯೋಗ ನೀಡಿದ್ದವು. ಸ್ಥಳೀಯ ಬುಡಕಟ್ಟು ಜನರೂ ಶೋಧ ಕಾರ್ಯಾಚರಣೆಗೆ ನೆರವಾಗಿದ್ದರು. ಎಲ್ಲರಿಗೂ ತಾವು ಅಭಿನಂದನೆ ಮತ್ತು ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

# ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ

• **ಬೆಂಗಳೂರು:** ಇಂದಿನ ಮಕ್ಕಳು ಪುಸ್ತಕಗಳಿಗಿಂತ ಹೆಚ್ಚಾಗಿ ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಂತಹ ಸಾಮಾಜಿಕ ಜಾಲತಾಣಗಳನ್ನು ನೋಡುವುದು ಹೆಚ್ಚಾಗಿದೆ. ಇದರಿಂದ ಮಕ್ಕಳ ಕಲಿಕೆ ಕುಂಠಿತವಾಗಿವೆ. ಈಗಿನ ಮಕ್ಕಳು, ಓದುವ ಕಲೆಯನ್ನು ಹೆಚ್ಚಿಸಿಕೊಳ್ಳಬೇಕು. ಅವರು ತಮ್ಮ ಕಲ್ಪನಾಶಕ್ತಿ, ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ ತಿಳಿಸಿದರು.

ಭಾನುವಾರ ಸೌಟ್ಸ್ ಮತ್ತು ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬೆರಗು ಪ್ರಕಾಶನ ವತಿಯಿಂದ ಲೇಖಕಿ ಭಾರತಿ ವಸ್ತ್ರದ ಅವರ ಚೇತನ ಭಾರತಿ, ಲೇಖಕಿ ಹಾಗೂ ಪತ್ರಕರ್ತೆ ರಶ್ಮಿ ಎಸ್. ಅವರ ಮಿದು ಮಾತು ಹಾಗೂ ಅರ್ನಿ ಸಿ. ನವೀನ್ ಅವರ ಅಚೋಸ್ ಫ್ರಂ ಮೈ ಜಾರ್ ಕೃತಿಗಳು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಇಂದಿನ ಕಾಲಘಟ್ಟದಲ್ಲಿ, ಎಲ್ಲದಕ್ಕೂ ಪರ್ಯಾಯವಾಗಿ ಮೊಬೈಲ್ ಬಳಕೆ ಮಾಡುವಂತಾಗಿದೆ. ನಾವೊಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಅದನ್ನು ಮೀರಿ ಓದು ಹಾಗೂ ಸಾಹಿತ್ಯದ ಕಡೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ. ತಮ್ಮ ಮಕ್ಕಳು ಕನಿಷ್ಠ ಪಕ್ಷ ಓದುವುದನ್ನು ರೂಢಿಸಿಕೊಳ್ಳಲಿ ಎಂಬುದು ಪ್ರತಿಯೊಬ್ಬ ತಂದೆ-ತಾಯಿಯ ಆಶಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಕಣಕಾರ ಎಸ್. ರವಿಶಂಕರ್, ಬೆರಗು ಪ್ರಕಾಶನದ ವಿಜಯಲಕ್ಷ್ಮಿ ಕತ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಆಯೇಷಾ ಖಾನಂ, ಪ್ರಕಾಶ್ ಕಂಬತ್ತಳ್ಳಿ, ಗಿರೀಶ್ ಎಸ್. ತಿಳಿ, ಸಂತೋಷ್ ಎಸ್. ತಿಳಿ ಮತ್ತಿತರರಿದ್ದರು.



> ಗಜಲ್‌ಗಳೇ ನನ್ನ ಬರವಣಿಗೆಗೆ ಕಾರಣವಾಯಿತು. ನನ್ನ ತಾಯಿ ಕೂಡ ಉದ್ಯೋಗಸ್ಥ ಮಹಿಳೆಯಾಗಿದ್ದರು. ಅವರಿಗೆ ನಮಗಿದ್ದ ಅನುಕೂಲತೆಗಳು ಸಹ ಇರಲಿಲ್ಲ, ಕೆಲಸದ ಒತ್ತಡ ಹಾಗೂ ಮನೆಯ ಜವಾಬ್ದಾರಿಯನ್ನು ಜೊತೆ ಜೊತೆಗೆ ನಿಭಾಯಿಸಿಕೊಂಡು ಹೋಗುತ್ತಿದ್ದ ಅವರ ಜೀವನ ಸಹ ಸಾಕಷ್ಟು ಪ್ರೇರೇಪಣೆ ನೀಡಿತು.
>
> ■ ರಶ್ಮಿ ಎಸ್., ಲೇಖಕಿ

# ಎಐ ಸಂಶೋಧಕರಿಗೆ ಆನೆಬಲ: ಪವನಜ

• **ಬೆಂಗಳೂರು:** ತಂತ್ರಜ್ಞಾನವು ಕೇವಲ ಇಂಗ್ಲಿಷ್‌ಗೆ ಸೀಮಿತವಲ್ಲ, ಎಐ ತಂತ್ರಜ್ಞಾನ ಕನ್ನಡ ಮತ್ತು ಕನ್ನಡದ ಸಂಶೋಧಕರಿಗೂ ಆನೆಬಲ ನೀಡುತ್ತಿವೆ ಎಂದು ತಂತ್ರಜ್ಞ ಡಾ.ಪವನಜ ಯು.ಬಿ. ಹೇಳಿದರು.

ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ನಡೆದ ಸಿರಿಭೂವಲಯ ವಿಶ್ವಕೋಶ ಮತ್ತು ಕನ್ನಡ ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ನಿರಂತರವಾಗಿ ಕಲಿಯುತ್ತಾ ಸಾಗುತ್ತದೆ. ಇದರಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಪ್ರೆಡಿಕ್ಟಿವ್ ಎಐ ಭವಿಷ್ಯದ ಮುನ್ಸೂಚನೆಗಳನ್ನು ನೀಡಲು ಬಳಕೆಯಾದರೆ, ಜನರೇಟಿವ್ ಎಐ ಹೊಸ ಲೇಖನ, ಕವನ ಅಥವಾ ಚಿತ್ರಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದರು.

**ಸಂಶೋಧನಾ ಕ್ಷೇತ್ರಕ್ಕೆ ವರದಾನ:** ಸಂಶೋಧನಾ ಕ್ಷೇತ್ರದಲ್ಲಿ ಎಐ ಕ್ರಾಂತಿಕಾರಿ ಬದಲಾವಣೆ ತರುತ್ತಿದೆ. ಸಾವಿರಾರು ಪುಟಗಳ ಮಾಹಿತಿ ಅಥವಾ ಹಳೆಯ ಹಸ್ತಪ್ರತಿಗಳನ್ನು ವಿಶ್ಲೇಷಿಸಿ ಕೆಲವೇ ನಿಮಿಷಗಳಲ್ಲಿ ಸಾರಾಂಶ ನೀಡುವುದು ಇದರಿಂದ ಸಾಧ್ಯ. ಭಾಷಾ ಅನುವಾದದಲ್ಲೂ ಇದು ಮಹತ್ತರ ಪಾತ್ರ ವಹಿಸುತ್ತಿದೆ. ಲೇಖಕರ ಬರವಣಿಗೆಯ ಶೈಲಿಯನ್ನು ಗುರುತಿಸಲು ಮತ್ತು ಕೃತಿಚೌರ್ಯವನ್ನು ಸುಲಭವಾಗಿ ಪತ್ತೆ ಹಚ್ಚಲು ಈ ತಂತ್ರಜ್ಞಾನ ಪೂರಕವಾಗಿದೆ ಎಂದು ಮಾಹಿತಿ ನೀಡಿದರು.



### ಗಣಿತ ಸೂತ್ರಗಳಲ್ಲಿ ಜಗತ್ತಿನ ಜ್ಞಾನ

40 ವರ್ಷಗಳಿಂದ ಈ ಕೃತಿಯ ಸಂಶೋಧನೆಯಲ್ಲಿ ತೊಡಗಿರುವ ಹಿರಿಯ ಸಂಶೋಧಕ ಸುಧಾರ್ಥಿ ಹಾಸನ ಅವರು, ಕುಮುದೇಂದು ಮುನಿ ವಿರಚಿತ ಸಿರಿಭೂವಲಯ ಕಾವ್ಯ ವಿಸ್ಮಯವಾಗಿದೆ. ಸಿರಿಭೂವಲಯವು ಕೇವಲ ಒಂದು ಕಾವ್ಯವಲ್ಲ, ಅದು 718 ಭಾಷೆಗಳ ಸಾರವನ್ನು ಹೊಂದಿರುವ ಜಗತ್ತಿನ ಏಕೈಕ ಅಂಕ ಕಾವ್ಯ. ನವಮಾಂಕ ಪದ್ಧತಿಯನ್ನು ಬಳಸಿ ರಚಿಸಲಾದ ಈ ಕೃತಿಯಲ್ಲಿ ವಿಮಾನಯಾನ, ವೈದ್ಯಕೀಯ ಹಾಗೂ ಗಣಕ ವಿಜ್ಞಾನದಂತಹ ಆಧುನಿಕ ವಿಷಯಗಳೂ ಅಡಗಿವೆ. ಕ್ರಿಸ್ತ ಶಕ 800ರ ಸುಮಾರಿಗೆ ಗಂಗರ ಕಾಲದಲ್ಲಿ ಜೀವಿಸಿದ್ದ ಕುಮುದೇಂದು ಮುನಿಯು 16,000 ಪುಟಗಳ ಕೃತಿಯಲ್ಲಿ 6,000 ಗಣಿತ ಸೂತ್ರ ಬಳಸಿದ್ದಾರೆ ಎಂದರು.

**ಎಚ್ಚರಿಕೆಯ ಹೆಜ್ಜೆ ಅಗತ್ಯ:** ಎಐ ತಂತ್ರಜ್ಞಾನವು ವರವಾಗಿದ್ದರೂ ಅದನ್ನು ಬಳಸುವಾಗ ಎಚ್ಚರಿಕೆ ಅಗತ್ಯ ಎಂದು ತಿಳಿಸಿದರು.

# ಪರೋಪಕಾರಾರ್ಥಮಿದಂ ಶರೀರಮ್

▸ ಗಿರಿಧರ್ ಉದ್ಯಾವರ

ಮನೆಯ ಹೊರಗೆ ಶವವಾಹನ ಮತ್ತು ಅಂಗಳದಲ್ಲಿ ಮೃತ ಪತಿಯ ದೇಹ! ಒಂದೆಡೆ, ವರ್ಷಗಳ ಹಿಂದೆ ಪತಿ ಕೈಗೊಂಡ ನಿರ್ಣಯವನ್ನು ಈಡೇರಿಸಲು ಕಾಯುತ್ತಿದ್ದ ಪತ್ನಿ. ಮತ್ತೊಂದೆಡೆ, ಅಮ್ಮನ ವಿರುದ್ಧ ಕೂಗಾಡುತ್ತಿರುವ ಮಕ್ಕಳು! ನಾವು ಅಪ್ಪನ ದೇಹವನ್ನು ಹಿಂಸಿಸಲು ಬಿಡುವುದಿಲ್ಲ, ಈ ಪದ್ಧತಿ ಸರಿಯಿಲ್ಲ, ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ಮುಗಿಸುತ್ತೇವೆ. ಆಗ ಮೌನ ಮುರಿದ ಮೃತನ ಹೆಂಡತಿ ಉಮ್ಮಳಿಸುತ್ತಿದ್ದ ದುಃಖದಿಂದ ಆಡಿದ ಒಂದೇ ಮಾತಿನಿಂದ ಎಲ್ಲರೂ ಸುಮ್ಮನಾದರು. ನನ್ನ ಪತಿ ದೇಹದಾನದ ಸಂಕಲ್ಪ ಮಾಡಿದ್ದಾರೆ, ಅಷ್ಟೇ! ಯಾರನ್ನೂ ಇದಕ್ಕೆ ಅಡ್ಡಿಯಾಗಲು ನಾನು ಬಿಡುವುದಿಲ್ಲ, 'ದಧೀಚಿ ದೇಹದಾನ ಸಮಿತಿಯು' ಪರವಾಗಿ ತಮ್ಮ ಕರ್ತವ್ಯ ನಿರ್ವಹಿಸಲು ತೆರಳಿದ್ದ ಸಮಿತಿಯ ಜಂಟಿ ಪ್ರಧಾನ ಕಾರ್ಯದರ್ಶಿ ಡಾ. ವಿಶಾಲ್ ಚಡ್ಡಾ ಹೇಳುವಂತೆ- ಅಂತಹ ಭಾವುಕ ಕ್ಷಣದಲ್ಲಿ, ಅಗಲಿರುವ ಗಂಡನ ನಿರ್ಧಾರವನ್ನು ಪೂರೈಸಲು ಹೊರಟ ಪತ್ನಿ ತನ್ನ ಸ್ವಂತ ಮಕ್ಕಳ ವಿರುದ್ಧ ನಿಂತಿದ್ದಳು. ಈ ಭಾವನೆ ಸಾಮಾನ್ಯವಲ್ಲ, ಆಧ್ಯಾತ್ಮಿಕವಾದದ್ದು ಮತ್ತು ಈ ರೀತಿಯ ಅನೇಕ ನೆನಪುಗಳು ದಧೀಚಿ ಪರಿವಾರದಲ್ಲಿವೆ. ಈ ಸತ್ಯ ಘಟನೆ ಶ್ರೀಮತಿ ಸಂಪೂರ್ಣ ಜೀತ್ ಕೌರ್ ಮತ್ತು ಡಾಕ್ಟರರಾಗಿದ್ದ ಅವರ ದಿವಂಗತ ಪತಿಗೆ ಸಂಬಂಧಿಸಿದ್ದು.

ದೇಹದಾನದ ಸಂಕಲ್ಪ ಎನ್ನುವುದು ಜೀವನದ ನಂತರವೂ ಬದುಕುವ ಒಂದು ವಿಶಿಷ್ಟ ಪ್ರಯಾಣ. ಈ ಸಂಕಲ್ಪವನ್ನು ಮಾಡಿಸುವವರೂ ಈ ಯಾತ್ರೆಯ ಭಾಗಿಗಳೇ. ಇಂಥ ಪುಣ್ಯಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪ ನೀಡಲು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಖ್ಯಾತ ಪ್ರಚಾರಕರಾದ ದಿವಂಗತ ನಾನಾಜಿ ದೇಶಮುಖರು, ಮಹರ್ಷಿ ದಧೀಚಿ ಅವರಿಂದ ಪ್ರೇರಿತರಾಗಿ, ಅಕ್ಟೋಬರ್ 11, 1997ರಂದು ದಧೀಚಿ ದೇಹದಾನ/ಅಂಗದಾನ ಸಮಿತಿಯನ್ನು ರಚಿಸಿದ್ದಲ್ಲದೆ, ಮೊದಲ ದೇಹದಾನ ನಿರ್ಣಯಪತ್ರವನ್ನು ತಾವೇ ತುಂಬಿದ್ದರು. ಈ ಸಮಿತಿಯು ದೆಹಲಿಯ ಎನ್. ಸಿ. ಆರ್, ಬುಲಂದ್ಶಹರ್ ಸೇರಿದಂತೆ ಸುಮಾರು 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 300 ಕಾರ್ಯಕರ್ತರ ಕಠಿಣ ಪರಿಶ್ರಮದ ಫಲವಾಗಿ, ಕಳೆದ 13 ವರ್ಷಗಳಲ್ಲಿ ಸುಮಾರು 1300 ಮೃತ ವ್ಯಕ್ತಿಗಳ ವಿವಿಧ ಅಂಗಗಳು ಇತರರ ದೇಹಗಳಲ್ಲಿ ಇನ್ನೂ ಜೀವಂತವಾಗಿವೆ. ಇದರಲ್ಲಿ 375 ಮಂದಿಯ ಸಂಪೂರ್ಣ ದೇಹ ಹಾಗೂ 925ಕ್ಕೂ ಹೆಚ್ಚು ಜನರ ಕಣ್ಣುಗಳನ್ನು ದಾನ ಮಾಡಲಾಗಿದೆ. ಸಮಿತಿಯ ಸ್ವಯಂಸೇವಕರು ಈವರೆಗೆ 18000ಕ್ಕೂ ಹೆಚ್ಚು ಸಂಕಲ್ಪಪತ್ರಗಳನ್ನು ಭರ್ತಿ ಮಾಡಿದ್ದಾರೆ.

ಇಷ್ಟೇ ಅಲ್ಲ, ದಧೀಚಿ ದೇಹದಾನ ಸಮಿತಿಯಿಂದ ಸ್ಫೂರ್ತಿ ಪಡೆದ ಇತರ 46 ಸಮಿತಿಗಳು ಈಗ ಸ್ವತಂತ್ರವಾಗಿ ದೇಶಾದ್ಯಂತ ಇದೇ ಕೆಲಸ ನಿರ್ವಹಿಸುತ್ತಿವೆ. ಅವೆಲ್ಲವುಗಳ ಮಾರ್ಗದರ್ಶನ ಮತ್ತು ನಾಯಕತ್ವವನ್ನು ದಧೀಚಿ ದೇಹದಾನ ಸಮಿತಿಯ ಸಂಸ್ಥಾಪಕ, ಪೋಷಕ ಮತ್ತು ವಿಶ್ವ ಹಿಂದೂ ಪರಿಷತ್ತಿನ ಪ್ರಸ್ತುತ ಕಾರ್ಯಾಧ್ಯಕ್ಷರಾದ ಶ್ರೀಮಾನ್ ಅಲೋಕ್ ಜೀಯವರೇ ವಹಿಸಿದ್ದಾರೆ.

ಸಮಿತಿಯ ಉಪಾಧ್ಯಕ್ಷೆ 'ಂಜು ಪ್ರಭಾ ಮಾತನಾಡಿ, ದೇಹದಾನ ಮಾಡಲು ಆರಂಭದಲ್ಲಿ ಹಲವು ತೊಂದರೆಗಳು ಎದುರಾದವು. ಕೆಲವೊಮ್ಮೆ ಮೃತದೇಹ ಸಾಗಿಸಲು ವಾಹನಗಳು ಇರುತ್ತಿರಲಿಲ್ಲ, ಕೆಲವೊಮ್ಮೆ ಡ್ರೈವರ್ ಇರುತ್ತಿರಲಿಲ್ಲ, ಕೆಲವೊಮ್ಮೆ ಕುಟುಂಬದವರು ನಿರ್ಣಯ ತೆಗೆದುಕೊಳ್ಳುವಷ್ಟರಲ್ಲಿ ಕಾಲ ಮಿಂಚಿರುತ್ತಿತ್ತು. ಕೆಲವೊಮ್ಮೆ ಮೃತದೇಹ ಸ್ವೀಕರಿಸಬೇಕಾದ ವೈದ್ಯಕೀಯ ಕಾಲೇಜುಗಳಿಗೆ ಕರೆ ಮಾಡಿದರೂ ಉತ್ತರವಿಲ್ಲ, ಅಥವಾ ಉತ್ತರಿಸಿದರೂ ಮೃತದೇಹವನ್ನಿಡುವ ಟಬ್ ಇರುತ್ತಿರಲಿಲ್ಲ, ಸುಮಾರು 3-4 ವರ್ಷಗಳ ಅವಿರತ ಪ್ರಯತ್ನದ ಬಳಿಕ ದೆಹಲಿಯ ಯಾವುದೇ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ದೇಹದಾನದ ಪ್ರಕ್ರಿಯೆ 24/7 ಸುಗಮವಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಒಟಿಟಿಯಲ್ಲಿ ತೆರೆಯಲಾಗುತ್ತಿರುವ ಕಾಲೇಜುಗಳ ಮೃತದೇಹದ ಬೇಡಿಕೆಯೂ ಈಗ ಪೂರೈಕೆಯಾಗುತ್ತಿದೆ.

ದೇಹದಾನದ ನಿರ್ಣಯವು ಒಂದೆಡೆ ನಮ್ಮ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ನಾನು ಈ ದೇಹವಲ್ಲ, ಆತ್ಮ ಮತ್ತು ಈ ದೇಹವು ಇಹಲೋಕದ ಪ್ರಯಾಣಕ್ಕೆ ಕೇವಲ ಸಾಧನವಷ್ಟೇ ಎಂಬ ಭಾವನೆಯನ್ನು ಉದ್ದೀಪಿಸುತ್ತದೆ. ಇನ್ನೊಂದೆಡೆ, ಈ ದೇಹದ ಆರೋಗ್ಯ ಕಾಪಾಡಲು ಮತ್ತು ಇದನ್ನು ಗಟ್ಟಿಮುಟ್ಟಾಗಿರಿಸಲು ಪ್ರೇರಣೆ ನೀಡುತ್ತದೆ. ಏಕೆಂದರೆ ಉತ್ತಮ ದೇಹದ ಅಂಗಗಳು ಮಾತ್ರ ಇತರರ ಒಳಿತಿಗೆ ಬಳಕೆಯಾಗುತ್ತವೆ. ಕೊನೆಗಾಲದಲ್ಲಿರುವ ವ್ಯಕ್ತಿಗೆ, ತನ್ನ ಪಾರ್ಥಿವ ಶರೀರವೂ ಮತ್ತೊಬ್ಬರ ನೀರಸ, ದಣಿದ, ಹತಾಶ ಜೀವನಕ್ಕೆ ಹೊಸ ಭರವಸೆ, ಹೊಸ ಬೆಳಕು ಮತ್ತು ಹೊಸ ಜೀವವನ್ನು ತುಂಬಬಲ್ಲದೆಂಬ ಯೋಚನೆಯೇ, ಅದೆಷ್ಟು ತೃಪ್ತಿ ನೀಡಬಹುದಲ್ಲವೇ?? ಈ ಕುರಿತಾಗಿ ಬರೆಯುವುದು ಮತ್ತು ಹೇಳುವುದು ಎಷ್ಟು ಸರಳವೋ, ಈ ಕೆಲಸವನ್ನು ಸಕಾಲದಲ್ಲಿ ಮಾಡಿ ಮುಗಿಸುವುದು ಅಷ್ಟೇ ಕಷ್ಟಕರ.

ದಾನ ಬಯಸುವ ಕುಟುಂಬದವರು ಸಮಿತಿಗೆ ಒಂದು ಕರೆ ಮಾಡಿದರೆ ಸಾಕು, ಬಳಿಕ ಅಂತಿಮ ಘಟ್ಟದವರೆಗೆ ನಮ್ಮ 300 ಸ್ವಯಂಸೇವಕರು ನಿಸ್ವಾರ್ಥವಾಗಿ ಹಗಲಿರುಳೂ ಖುದ್ದಾಗಿ ಸಹಾಯ ಮಾಡುತ್ತಾರೆ ಎಂದು ಸಮಿತಿಯ ಅಧ್ಯಕ್ಷ ಹರ್ಷದೀಪ್ ಜೀ ಹೇಳುತ್ತಾರೆ. ದಾನಿಗಳು ಮತ್ತು ಫಲಾನುಭವಿಗಳೆಲ್ಲರೂ ದಧೀಚಿ ಕುಟುಂಬದ ಸದಸ್ಯರಾಗುವ ಮೂಲಕ ಸಮಾಜದಲ್ಲಿ ದೇಹದಾನ ಮತ್ತು ಅಂಗದಾನದ ಜಾಗೃತಿಯನ್ನು ಪ್ರೇರೇಪಿಸುತ್ತಾರೆ. ಸಮಿತಿಯಿಂದ ನಡೆಯುವ ನೈಮಿಷಾರಣ್ಯ ತೀರ್ಥಯಾತ್ರೆ ಹಾಗೂ ಮಹರ್ಷಿ ದಧೀಚಿಯ ದೇಹದಾನದ ಕಥಾನಕವು ಇಂದು ಸಮಾಜದಲ್ಲಿ ದೇಹದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ.




ಸೇವಾಗಾಥ
ಕಥೆ-2

# ಸಿದರಾಮಯ್ಯ ವಿರುದ್ಧ ಛಲವಾದಿ ವಾಗ್ದಾಳಿ

• **ದಾವಣಗೆರೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನರಾಮಯ್ಯ ಅಲ್ಲ, ಅವರೊಬ್ಬ ಡೋಂಗಿ ರಾಜಕಾರಣಿ. ಕನ್ನರಾಮಯ್ಯ. ಎನ್ನುವುದು ಇನ್ನೂ ಸೂಕ್ತ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು.



▸▸ 42 ಸಾವಿರ ಕೋಟಿ ರೂ. ಗ್ಯಾರಂಟಿ ಬಳಕೆ

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನ್ನಭಾಗ್ಯ ಹೆಸರಿನಲ್ಲಿ ಪ್ರಧಾನಿ ಮೋದಿಯವರು ಕೊಟ್ಟ ಅಕ್ಕಿ ಬಿಟ್ಟು ಬೇರೇನನ್ನೂ ರಾಜ್ಯದ ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿಲ್ಲ, ಎಲ್ಲದಕ್ಕೂ ಕನ್ನ ಹಾಕುತ್ತಿದ್ದಾರೆ. ದಲಿತರ ಹಣವನ್ನೂ ಕೊಳ್ಳೆ ಹೊಡೆದರು. ಸಿದ್ದರಾಮಯ್ಯ ಹೇಳು ವುದೊಂದು, ಮಾಡುವುದೊಂದು. ಒಂದು ಕಡೆ ಘೋಷಣೆ, ಮತ್ತೊಂದು ಕಡೆ ಶೋಷಣೆ, ಇದೇ ಅವರ ನೀತಿ ಎಂದು ಟೀಕಿಸಿದರು.

ದಲಿತರಿಗೆ 42 ಸಾವಿರ ಕೋಟಿ ರೂ. ಇಟ್ಟಿದ್ದೇನೆ ಎಂದು ಹೇಳಿದರು. ಅದರ ಹಣವನ್ನು ಗ್ಯಾರಂಟಿಗಳಿಗೆ ಬಳಸಿದರು. ಎಲ್ಲಾ ಕಡೆ ಸುಳ್ಳು ಹೇಳಿದರು. ಇಷ್ಟೊಂದು ಹಣ ದಲಿತರಿಗೆ ಕೊಡ್ತಾರೆ ಅಂತಾ ಜನ ಅಂದುಕೊಂಡಿದ್ದರು. ಆದರೆ ಅವರ ಹಣ ಬೇರೆ ಕಡೆ ಬಳಸಿ ದಲಿತರಿಗೆ ಮೋಸ ಮಾಡಿದರು.

56 ಸಾವಿರ ಖಾಲಿ ಹುದ್ದೆ ತುಂಬುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದರು. ಆದರೆ ರಾಜ್ಯದಲ್ಲಿ ನಾಲ್ಕು ಲಕ್ಷ ಹುದ್ದೆ ಖಾಲಿ ಇವೆ. ಅವನ್ನು ಯಾಕೆ ತುಂಬಲ್ಲ, ಅದಕ್ಕೆ ಯಾರ ಅನುಮತಿ ಬೇಕು. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅಥವಾ ಪ್ರಿಯಾಂಕಾ ಗಾಂಧಿ ಅವರ ಅನುಮತಿ ಬೇಕೇ? ಎಂದು ಅವರು ಪ್ರಶ್ನಿಸಿದರು.

ಸಿದ್ದರಾಮಯ್ಯ ಸಮಾಜವಾದಿ ಅಲ್ಲ, ಅವರೊಬ್ಬ ಮಜಾವಾದಿ. ಅವರು ಕಾಂಗ್ರೆಸ್ ಹೊಸ್ತಿಲು ತುಳಿಯುವವರೆಗೆ ನಾನೂ ಅವರ ಅಭಿಮಾನಿಯಾಗಿದ್ದೆ, ಜನತಾ ದಳದಲ್ಲಿ ಇದ್ದಾಗ ಚೆನ್ನಾಗಿದ್ದರು. ಆನಂತರ ಬದಲಾದರು. ಅಪ್ಪಟ ಕಾಂಗ್ರೆಸ್ಸಿನವರು ಹೇಳುವ ಸುಳ್ಳಿಗಿಂತ ಹೆಚ್ಚು ಸುಳ್ಳನ್ನು ಸಿದ್ದರಾಮಯ್ಯ ಹೇಳುತ್ತಾರೆ. ಸುಳ್ಳು ಹೇಳದಿದ್ದರೆ ಹಾಗೂ ವಂಚನೆ ಮಾಡದಿದ್ದರೆ ಕಾಂಗ್ರೆಸ್ಸಿನಲ್ಲಿ ಬದುಕಲು ಆಗಲ್ಲ ಎಂದರು.

### ಮುರುಘಾ ಮಠದಲ್ಲಿ 21 ಜೋಡಿಗಳ ಸಾಮೂಹಿಕ ಕಲ್ಯಾಣ ಮಹೋತ್ಸವ | ಡಾ. ಶ್ರೀ ಬಸವಕುಮಾರ ಸ್ವಾಮೀಜಿ ಕರೆ

# ಮದುವೆ ಹೆಸರಿನಲ್ಲಿ ದುಂದು ವೆಚ್ಚಗಳಿಗೆ ಕಡಿವಾಣ ಹಾಕಿ

• **ಚಿತ್ರದುರ್ಗ:** ಸಮಾಜದಲ್ಲಿ ಪ್ರತಿನಿತ್ಯ ನಿರುದ್ಯೋಗ, ಹಸಿವು, ಬಡತನದಿಂದ ಅಸಂಖ್ಯಾತರು ನರಳುತ್ತಿದ್ದಾರೆ. ಅದ್ದೂರಿ ವಿವಾಹಗಳಿಂದ ಸಾಕಷ್ಟು ತಂದೆ-ತಾಯಿಯರು ಸಾಲಗಾರರಾಗಿ ಸಂಕಷ್ಟಕ್ಕೀಡಾಗಿದ್ದಾರೆ. ಇದರ ನಡುವೆ ಮುರುಘಾಮಠವು 36 ವರ್ಷಗಳಿಂದ ನಿರಂತರ ಸಾಮೂಹಿಕ ಕಲ್ಯಾಣ ಮಹೋತ್ಸವವನ್ನು ನಡೆಸಿಕೊಂಡು ಬರುತ್ತಿದೆ ಎಂದು ಜಗದ್ಗುರು ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಬಸವಕುಮಾರ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಭಾನುವಾರ ನಡೆದ ಮೂವತ್ತಾರನೇ ವರ್ಷದ ನಾಲ್ಕನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಕಾರ್ಯಕ್ರಮದಲ್ಲಿ 21 ಜೋಡಿ ವಿವಾಹಗಳನ್ನು ನೆರವೇರಿಸಿ ಮಾತನಾಡಿದ ಶ್ರೀಗಳು, ಶ್ರೀಮಠವು ಹಲವಾರು ಅಂತರ್ಜಾತಿ ವಿವಾಹಗಳಿಗೆ ಸಾಕ್ಷಿಯಾಗಿದೆ. ಇಂದು ನಾಲ್ಕು ಜೋಡಿಗಳು ಅಂತರ್ಜಾತಿ ವಿವಾಹ ಆಗುತ್ತಿದ್ದಾರೆ. ಅವರು ಕೂಡ ಮುಂದೆ ತಮ್ಮ ಮಕ್ಕಳಿಗೆ ಬಂಧುಗಳಿಗೆ ಅದ್ದೂರಿ ವಿವಾಹಗಳಿಗೆ, ದುಂದುವೆಚ್ಚಗಳಿಗೆ ಕಡಿವಾಣ ಹಾಕಿ ಸರಳ ಸಾಮೂಹಿಕ ವಿವಾಹಗಳಿಗೆ ಪ್ರೇರಣೆಯಾಗಬೇಕು ಎಂದರು.



ದಾವಣಗೆರೆ ವಿರಕ್ತಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಜಾಗತಿಕವಾಗಿ ಇಂದು ಜಗತ್ತು ತಲ್ಲಣಿಸುತ್ತಿದೆ. ಎಲ್ಲೋ ನಡೆಯುವ ಯುದ್ಧದ ಬಿಸಿ ಭಾರತಕ್ಕೂ ತಟ್ಟಿದೆ. ಅದೇ ರೀತಿ ಸಂಸಾರದ ಜೀವನದಲ್ಲಿ ಗಂಡ-ಹೆಂಡತಿಯರ ನಡುವಿನ ಜಗಳ ಇಡೀ ಸಂಸಾರವನ್ನು ಅಷ್ಟೇ ಅಲ್ಲ ತಮ್ಮ ತಮ್ಮ ಬಂಧುಗಳ ನಡುವಿನ ಸಂಬಂಧಕ್ಕೂ ಆತಂಕವನ್ನು ಉಂಟು ಮಾಡುತ್ತದೆ ಎಂದು ಹೇಳಿದರು.

ಸತಿ-ಪತಿಗಳ ಮಾತು ಮುತ್ತಿನಂತೆ ಇರಬೇಕು. ಬಸವಣ್ಣನವರು ಹೇಳಿದ ಹಾಗೆ ಅಯ್ಯಾ ಎಂದರೆ ಸ್ವರ್ಗ. ನಮ್ಮ ಮಾತಿನಲ್ಲಿ ಪ್ರೀತಿ ಇರಬೇಕು. ವ್ಯವಹಾರ ಇರಬಾರದು.

> **ಮಠವು ನಿರಂತರವಾಗಿ 36 ವರ್ಷಗಳಿಂದ 20 ಸಾವಿರ ದಂಪತಿಗಳ ದಾಂಪತ್ಯ ಜೀವನಕ್ಕೆ ಸಾಕ್ಷಿಯಾಗಿರುವಂತಹ ಮಠವಾಗಿದೆ. ದಾಂಪತ್ಯ ಜೀವನ ಎರಡು ಮನಸ್ಸುಗಳ ನಡುವೆ ನಡೆಯುವಂತದ್ದು. ಎರಡು ಕುಟುಂಬಗಳನ್ನು ಕೂಡಿಸುವಂತದ್ದು. ಇಂದು ಸಾಕಷ್ಟು ಸಂಸಾರಗಳು ದೂರ ದೂರ ಆಗುತ್ತಿವೆ. ಹಾಗಾಗಿ ಸತಿ-ಪತಿಗಳು ತಮ್ಮೊಳಗಿನ ಅಹಂಕಾರವನ್ನು ಕಳೆದು ಪ್ರೀತಿ, ವಿಶ್ವಾಸದ ಮೂಲಕ ಜೀವನ ನಡೆಸುವಂತಾಗಬೇಕು. ಇಬ್ಬರ ನಡುವೆ ಪರಸ್ಪರ ಸಹಕಾರ ಇರಬೇಕು. ಆಗಿದ್ದಾಗ ಮಾತ್ರ ಸಂಸಾರದಲ್ಲಿ ಸುಖ ಸಂತೋಷವನ್ನು ಕಾಣಲು ಸಾಧ್ಯ.**
> ■ ಡಾ. ಕಾಂತರಾಜ್, ಚಿತ್ರದುರ್ಗ ಉಪವಿಭಾಗಾಧಿಕಾರಿ

ಈ ಪ್ರೀತಿಯಿಂದ ಜಗತ್ತನ್ನೇ ಗೆಲ್ಲಬಹುದು. ಸತಿ-ಪತಿಗಳು ಪರಸ್ಪರ ಗೌರವದಿಂದ ಬಾಳಬೇಕು. ಹಾಗಿದ್ದಾಗ ಜೀವನದ ಸಾಕ್ಷಾತ್ಕಾರವಾಗುತ್ತದೆ. ತಮ್ಮ ಕುಟುಂಬವನ್ನು, ಜಗತ್ತನ್ನು ಪ್ರೀತಿಸುವಂತವರಾಗಬೇಕು ಎಂದು ತಿಳಿಸಿದರು.

ಚಿತ್ರದುರ್ಗ ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್ ಸನ್ಮಾನ ಸ್ವೀಕರಿಸಿ ಮಾತನಾಡಿ, ಶ್ರೀಮಠವು ಬಸವಾದಿ ಶರಣರ ಆದರ್ಶಗಳನ್ನು ಪಾಲಿಸಿಕೊಂಡು ಬಂದಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಜನಪರ ಕಲ್ಯಾಣ ಕಾರ್ಯಗಳನ್ನು ಆಯೋಜಿಸುತ್ತ ಬಂದಿದೆ. ಸಮಾಜದಲ್ಲಿ ವರ್ಣ, ವರ್ಗ, ಜಾತಿ ಅಸಮಾನತೆಯನ್ನು ತೊಡೆದುಹಾಕಿ ಸಮಾನತೆಯನ್ನು ಸಾರುವಂತಹ ಕೆಲಸಗಳನ್ನು ಮಾಡುತ್ತಿದೆ. ನಮ್ಮೊಳಗಿನ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಶ್ರೀಮಠ ಒಂದು ಪ್ರಯೋಗಶಾಲೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಬಸವಮುರುಘೇಂದ್ರ ಸ್ವಾಮಿಗಳು, ಹೈಲ್ಯಾಳ್ ತಿಪ್ಪೇಸ್ವಾಮಿ, ಕಣಿವೆಮಾರಮ್ಮ ತಿಪ್ಪೇಸ್ವಾಮಿ, ಕವಿ ಗಂಗಾಧರಪ್ಪ, ಸಮಾಜಸೇವಕ ಲಿಂಗರಾಜ್ ಮೊದಲಾದವರಿದ್ದರು. ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ಗಿರೀಶಾಚಾರ್ಯ ಸ್ವಾಗತಿಸಿದರು. ಟಿ.ಪಿ. ಜ್ಞಾನಮೂರ್ತಿ ನಿರೂಪಿಸಿ ವಂದಿಸಿದರು.

### ಜಗದ್ಗುರು ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಡಾ. ಶ್ರೀ ಬಸವಕುಮಾರ ಸ್ವಾಮೀಜಿ

# ಜಗದ್ಗುರುಗಳಿಗೆ ಅಂತಃಕರಣ ತೋರಿದವರು ಶಿವಯೋಗಿಗಳು

• **ಚಿತ್ರದುರ್ಗ:** ಶಿವಯೋಗಿಗಳು ಮಠಾಧಿಪತಿಗಳಾಗಿರಲಿಲ್ಲ, ಮಠ ಕಟ್ಟಿರಲಿಲ್ಲ, ಆದರೆ ದೊಡ್ಡದೊಡ್ಡ ಮಠಗಳ ಜಗದ್ಗುರುಗಳಿಗೆ ಆಶೀರ್ವಾದ ಅಂತಃಕರಣ ತೋರಿದರು ಎಂದು ಜಗದ್ಗುರು ಶ್ರೀ ಮುರುಘರಾಜೇಂದ್ರ ಬೃಹನ್ಮಠ ಹಾಗೂ ಎಸ್.ಜೆ.ಎಂ. ವಿದ್ಯಾಪೀಠ ಆಡಳಿತ ಮಂಡಳಿಯ ಸದಸ್ಯರಾದ ಡಾ. ಬಸವಕುಮಾರ ಸ್ವಾಮೀಜಿ ಹೇಳಿದರು.

ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಮೂಲಕರ್ತೃ ಮುರಿಗೆಯ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಲೀಲಾವಿಶ್ರಾಂತಿ ಸನ್ನಿಧಾನದಲ್ಲಿ ಏರ್ಪಡಿಸಿದ್ದ ಅಥಣಿ ಮುರುಘೇಂದ್ರ ಶಿವಯೋಗಿಗಳವರ 105ನೇ ಸ್ಮರಣೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಮೃತ್ಯುಂಜಯಪ್ಪಗಳು ಕಾಶಿ ವಿಶ್ವನಾಥ ದರ್ಶನಕ್ಕೆ ಹೋಗುವುದಾಗಿ ಅಂಕಲಿ ಮಠದ ಶ್ರೀಗಳ ಬಳಿ ಹೇಳಿದಾಗ, ಮಾತನಾಡದ ವಿಶ್ವನಾಥನ ಬಳಿ ಹೋಗುವುದಕ್ಕಿಂತ ಅಥಣಿಯಲ್ಲಿ ಮಾತನಾಡುವ ವಿಶ್ವನಾಥನಿದ್ದಾನೆ. ಅಲ್ಲಿಗೆ ಹೋಗು ಎಂಬ ಸಲಹೆ ನೀಡಿದರು ಎಂದರು.

ಶಿವಯೋಗಿಗಳು ಅಂದರೆ ಸೇವಾ ಮತ್ತೊಂದು ಶಿವಯೋಗ. ಅದರೊಂದಿಗೆ ಪ್ರಸಾದ. ಈ ಮೂರು ಅಳವಡಿಸಿಕೊಂಡಿದ್ದ ಮಹಾಯೋಗಿ. ಅಥಣಿಯಲ್ಲಿ ಶಿವಯೋಗಿಗಳ ಜತೆ ಶಿವಬಸವ ಸ್ವಾಮಿಗಳಿರುತ್ತಾರೆ.



ಅವರಿಗೆ ಕುಷ್ಠರೋಗ ಬಂದಿರುತ್ತದೆ. ಅವರನ್ನು ಶಿವಯೋಗಿಗಳು ಯಾವುದೇ ಅಂಜಿಕೆ ಸಂಕೋಚ ಅಸಹ್ಯಪಟ್ಟುಕೊಳ್ಳದೆ ಅದನ್ನು ತಿಕ್ಕಿ ತೊಳೆದು ಅದಕ್ಕೆ ಬೇಕಾದ ಔಷಧಿ ಹಾಕುತ್ತ ಗುಣಪಡಿಸುತ್ತಾರೆ. ಆ ಗುರುವೇ ಮುಜುಗರಪಟ್ಟುಕೊಳ್ಳುವ ರೀತಿ ಸೇವೆ ಮಾಡುತ್ತಾರೆ. ಶಿವಯೋಗಿಗಳ ಪ್ರಭಾವ ಮೃತ್ಯುಂಜಯಪ್ಪಗಳಿಗೆ ಆಗಿತ್ತು ಎಂದು ಹೇಳಿದರು.

ಸಂಶೋಧಕರಾದ ಜವಳಿ ಮಲ್ಲಿಕಾರ್ಜುನ ಅವರು ಶಿವಯೋಗಿಗಳವರ ಬಗೆಗೆ ವಿಷಯಾವಲೋಕನ ಮಾಡಿ, ಬಸವಾದಿ ಶಿವಶರಣ ಪರಂಪರೆಯಲ್ಲಿ ಪ್ರಾತಃಸ್ಮರಣೀಯರನ್ನು ಸ್ಮರಿಸುವುದು ಒಂದು ಸಂಸ್ಕೃತಿ. ಅಂತಹುದರಲ್ಲಿ ಮಹಾತಪಸ್ವಿ ಶಿವಯೋಗಿಗಳ ಸ್ಮರಣೆಯಲ್ಲಿ ಭಾಗಿಯಾಗಿರುವುದೇ ಒಂದು ಭಾಗ್ಯ. 18-19ನೇ ಶತಮಾನದ ಭಾರತದ ಇತಿಹಾಸವನ್ನೊಮ್ಮೆ ಅವಲೋಕಿಸಿದಾಗ ಸಂಸ್ಕೃತಿ, ಧರ್ಮ, ಆಚಾರ ವಿಚಾರಗಳು ಅಳಿಯುವ ಸನ್ನಿವೇಶದಲ್ಲಿ ಜನಸಾಮಾನ್ಯರಲ್ಲಿ ಸಾಮಾಜಿಕ, ಸಾಂಸ್ಕೃತಿಕ ಪುನಶ್ಚೇತನಕ್ಕಾಗಿ ಸಾಕ್ಷಿಯಾದವರು ಅಥಣಿ ಶಿವಯೋಗಿಗಳವರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಸವ ಮುರುಘೇಂದ್ರ ಶ್ರೀಗಳು, ಗೋವಿಂದ ಶ್ರೀಗಳು, ಕೆಳಕುಪ್ಪಿ ಮುರುಘೇಶ್, ಎಸ್. ಷಣ್ಮುಖಪ್ಪ, ಜೆ.ಎಸ್. ಮುರುಘೇಶ್, ಸವಿತಾ ಶ್ರೀನಿವಾಸ್, ಬಸವರಾಜ ಕಟ್ಟಿ, ಟಿ.ಪಿ. ಜ್ಞಾನಮೂರ್ತಿ, ಜೆ.ಟಿ. ಸಂದೀಶ್, ನಾಗರಾಜ ಸಂಗಂ, ಡಾ.ಬಿ. ಗಾಯತ್ರಿ, ಎಸ್.ಎಂ. ಕೊಟ್ರೇಶಪ್ಪ, ಗೀತಾ ರುದ್ರೇಶ್, ಮಹಾಂತಮ್ಮ, ನಾಯಕನಹಟ್ಟಿ ತಿಪ್ಪೇಸ್ವಾಮಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಎಸ್.ಜೆ.ಎಂ. ಪಾಲಿಟೆಕ್ನಿಕ್ ಕಾಲೇಜಿನ ನಿರ್ವಹಣೆಯಲ್ಲಿ ನಡೆದ ಸಮಾರಂಭದ ಆರಂಭಕ್ಕೆ ಜಮುರಾ ಕಲಾವಿದ ಉಮೇಶ್ ಪತ್ತಾರ್ ಶಿವಯೋಗಿಗಳ ಕುರಿತಾದ ಗೀತೆ ಹಾಡಿದರು. ಕೆ.ಸುರೇಶ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

> **ಸಮಕಾಲೀನರಾಗಿ ಅನೇಕ ತಪಸ್ವಿಗಳು ಬಂದುಹೋದರು. ಆಗ ತ್ರಿಕಾಲ ಜ್ಞಾನಿಗಳೇ ಆಗಿಹೋದರು. ಅಂತಹ ತ್ರಿಕಾಲಜ್ಞಾನ ಮೇರುಸದೃಶ ವ್ಯಕ್ತಿತ್ವ ಅಥಣಿ ಶಿವಯೋಗಿಗಳವರಲ್ಲಿತ್ತು. ತ್ರಿಕಾಲ ಅಂದರೆ ಹಿಂದೆ ಆದ, ಈಗ ನಡೆಯುತ್ತಿರುವ ಮತ್ತು ಮುಂದೆ ಏನಾಗುತ್ತದೆಂಬ ಜ್ಞಾನವನ್ನು ತಿಳಿದವರಿಗೆ ತ್ರಿಕಾಲ ಜ್ಞಾನಿಗಳು ಎಂದು ಕರೆಯುತ್ತಿದ್ದರು. ಅದಕ್ಕೆ ಸ್ಪಷ್ಟ ನಿದರ್ಶನ ಅಥಣಿ ಶಿವಯೋಗಿಗಳು. ಇವರು ತಮ್ಮ ತಪಃಶಕ್ತಿಯ ಫಲವಾಗಿ ಪವಾಡಸದೃಶ ಕೆಲಸಗಳನ್ನು ಮಾಡುತ್ತಾರೆ.**
> ■ ಜವಳಿ ಮಲ್ಲಿಕಾರ್ಜುನ, ಸಂಶೋಧಕ

# ಆಹಾರ ಉತ್ಪಾದನೆಗೆ ಶಕ್ತಿ ತುಂಬಿದವರು ಬಾಬುಜಗಜೀವನರಾಂ: ಪಾಷ

• **ಚಿತ್ರದುರ್ಗ:** ಆಹಾರ ಉತ್ಪಾದನೆಯಲ್ಲಿ ಭಾರತ ಈಗ ಶಕ್ತಿಶಾಲಿಯಾಗಿದೆಯೆಂದರೆ ಅದಕ್ಕೆ ಡಾ.ಬಾಬು ಜಗಜೀವನರಾಂರವರು ಕಾರಣ ಎಂದು ಕರ್ನಾಟಕ ಕಂಠೀರವ ಸ್ಟುಡಿಯೋ ಅಧ್ಯಕ್ಷ ಮೆಹಬೂಬ್‌ಪಾಷ ಪ್ರಶಂಸಿಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿದ್ದ ದೇಶದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಂರವರ 119 ನೇ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ. ತಾಜ್‌ಪೀರ್ ಮಾತನಾಡಿ, ಎಐಸಿಸಿ. ಅಧ್ಯಕ್ಷರಾಗಿದ್ದ ಡಾ. ಬಾಬು ಜಗಜೀವನರಾಂರವರು ಸ್ವಾತಂತ್ರ್ಯ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರು. ನೆಹರು, ಇಂದಿರಾಗಾಂಧಿ, ಲಾಲ್‌ಬಹದ್ದೂರ್‌ಶಾಸ್ತ್ರಿ ಇವರುಗಳು ದೇಶದ ಪ್ರಧಾನಿಯಾಗಿದ್ದಾಗ ಅನೇಕ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದರು. ಪಾಕಿಸ್ತಾನ, ಚೀನಾ ನಮ್ಮ ದೇಶದ ಮೇಲೆ ಯುದ್ಧಕ್ಕೆ ಬಂದಾಗ ಭಾರತವನ್ನು ವಿಜಯಶಾಲಿಯನ್ನಾಗಿಸಿದ ಕೀರ್ತಿ ಡಾ.ಬಾಬು ಜಗಜೀವನರಾಂರವರಿಗೆ ಸಲ್ಲಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಜಯಣ್ಣ ಮಾತನಾಡಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂರವರು ದೇಶಕ್ಕೆ ಮತ್ತು ಪಕ್ಷಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. 119 ಹುಟ್ಟುಹಬ್ಬದಂದು ಅವರ ಸಾಧನೆಗಳನ್ನು ನೆನಪು ಮಾಡಿಕೊಳ್ಳುವುದು ಎಲ್ಲರ ಕರ್ತವ್ಯ. ಭಾರತ ಆಹಾರವನ್ನು ಬೇರೆ ದೇಶಗಳಿಗೆ ರಫ್ತು ಮಾಡುವಷ್ಟರ ಮಟ್ಟಿಗೆ ಬೆಳೆದಿದೆಯೆಂದರೆ ಅದರ ಹಿಂದೆ ಜಗಜೀವನರಾಂರವರ ಪರಿಶ್ರಮವಿದೆ ಎಂದು ಗುಣಗಾನ ಮಾಡಿದರು.



ಜಿಲ್ಲಾ ಕಾಂಗ್ರೆಸ್ ಕಾನೂನು, ಮಾನವ ಹಕ್ಕು ಹಾಗೂ ಮಾಹಿತಿ ಹಕ್ಕು ವಿಭಾಗದ ಅಧ್ಯಕ್ಷ ಡಿ.ಎಸ್.ಸುದರ್ಶನ್ ಮಾತನಾಡಿ ಶಾಲಾ ದಿನಗಳಲ್ಲಿ ಬಾಲಕನಾಗಿದ್ದಾಗಲೇ ಡಾ.ಬಾಬು ಜಗಜೀವನರಾಂರವರು ಅಸ್ಪೃಶ್ಯತೆ ವಿರುದ್ಧ ಸಿಡಿದೆದ್ದವರು. ನೆಹರು ಪ್ರಧಾನ ಮಂತ್ರಿಯಾಗಿದ್ದಾಗ ಕಾನೂನು ಸಚಿವರಾಗಿ ಕಾರ್ಮಿಕರ ಹಿತಕ್ಕಾಗಿ ಕಾನೂನುಗಳನ್ನು ಜಾರಿಗೊಳಿಸಿದರು. ಕೃಷಿ, ರಕ್ಷಣಾ, ರೈಲ್ವೆ ಖಾತೆ ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಅವರ ಪುತ್ರಿ ಮೀರಾಕುಮಾರ್ ಲೋಕಸಭೆಯ ಮೊದಲ ಮಹಿಳಾ ಸ್ಪೀಕರ್ ಆಗಿದ್ದವರು. ಹಸಿರು ಕ್ರಾಂತಿಯ ಹರಿಕಾರ ಜಗಜೀವನರಾಂರವರ ಸಿದ್ಧಾಂತಗಳನ್ನು ಪಕ್ಷದ ಪ್ರತಿಯೊಬ್ಬರು ಅಳವಡಿಸಿಕೊಳ್ಳಿ ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಪಿ. ಸಂಪತ್‌ಕುಮಾರ್, ಉಪಾಧ್ಯಕ್ಷ ಎಸ್.ಎನ್. ರವಿಕುಮಾರ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ಪಾಪಯ್ಯ, ಚಿದಾನಂದಮೂರ್ತಿ, ಜಿಪಂ ಮಾಜಿ ಸದಸ್ಯ ಆರ್. ನರಸಿಂಹರಾಜ, ಸುರೇಶ್ ಈಚಲನಾಗೇನಹಳ್ಳಿ, ಸೈಯದ್ ಸೈಫುಲ್ಲಾ, ಸೈಯದ್ ಅಕ್ಬರ್ ಇನ್ನಿತರರಿದ್ದರು.

### ಕೃತಿ ಬಿಡುಗಡೆ ಸಮಾರಂಭದಲ್ಲಿ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅಭಿಪ್ರಾಯ

# ಅಧ್ಯಯನ ಶೀಲ ಸಾಹಿತ್ಯ ಉಳಿಯುವುದು

• **ಚಳ್ಳಕೆರೆ:** ಅಧ್ಯಯನ ಶೀಲತೆಯಿಂದ ರೂಪಗೊಳ್ಳುವ ಸಾಹಿತ್ಯ ಯುವ ಸಮುದಾಯಕ್ಕೆ ಆಧಾರ. ಅಧ್ಯಯನ ಶೀಲ ಸಾಹಿತ್ಯ ಸಮಾಜದಲ್ಲಿ ಉಳಿದುಕೊಳ್ಳುತ್ತದೆ ಎಂದು ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಹೇಳಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಹುಣ್ಣಿಮೆ ಪ್ರಕಾಶನ ಇವರ ವತಿಯಿಂದ ಹಮ್ಮಿಕೊಂಡಿದ್ದ ಡಾ.ಜಿ.ಎ. ಆನಂದ ಮೂರ್ತಿ ಅವರ ಕರಿಮಲೆಯಿಂದ ಕೊಂಕಿ ಜಿರಮಲೆವರೆಗೆ ಕೃತಿ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಜಿ.ಎ. ಆನಂದ ಮೂರ್ತಿ ಅವರು ಸುಮಾರು ಹತ್ತು ವರ್ಷಗಳ ಕಾಲ ಗೊಲ್ಲ ಸಮುದಾಯದ ಜನಜೀವನದ ಪದ್ಧತಿಗಳನ್ನು ಅಧ್ಯಯನ ನಡೆಸಿ, ಬರೆದಿರುವ ಕೃತಿ ಪ್ರತಿಯೊಬ್ಬ ಓದುಗರ ಮನ ತಲುಪಲಿ. ಗೊಲ್ಲರ ಮತ್ತು ಮ್ಯಾಸ ನಾಯಕರ ಆಚಾರ ಪದ್ಧತಿಗಳು ಮತ್ತು ಮನೆತನದ ಗುಡಿಕಟ್ಟೆ ದೇವರ ಅನುಸರಣೆಯಲ್ಲಿ ಹೋಲಿಕೆ ಇದೆ. ಗೊಲ್ಲರ ಹಟ್ಟಿಗಳಲ್ಲಿ ಮುಗ್ಧತೆ ಕಾಣುತ್ತೇವೆ. ದೇವತಾ ಆರಾಧನಾ ಪದ್ಧತಿಗಳ ನಂಬಿಕೆವುಳ್ಳವರು. ಇಂತಹ ಕುರುಹುಗಳು ದಾಖಲೆಯಾಗಿ ಉಳಿಯುವಂತೆ ಸಾಹಿತ್ಯ ರಚನೆ ಆಗಬೇಕು ಎಂದು ಹೇಳಿದರು.

ಕೊಂಕಿಜಿರಮಲೆವರೆಗೆ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್, ಬುಡಕಟ್ಟು ಸಂಸ್ಕೃತಿ ಪದ್ಧತಿಯನ್ನು ವಿಶ್ಲೇಷಣೆ ದೃಷ್ಟಿಯಿಂದ ನೋಡಬೇಕಿ ಹೊರತು, ತನಿಖೆಯಾಗಿ, ಟೀಕಾಕಾರರಾಗಿ ಅಲ್ಲ. ಜಿ.ಎ. ಆನಂದ ಮೂರ್ತಿ ಸ್ವತಃ ಗೊಲ್ಲ ಜನಾಂಗ ಅಲ್ಲ, ಅದರೂ, ವಿಶಿಷ್ಟ ಆಚರಣೆ ಪದ್ಧತಿಗಳನ್ನು ಬದುಕಾಗಿಸಿಕೊಂಡ ಗೊಲ್ಲರ ಜನ ಜೀವನ ಸಂಸ್ಕೃತಿಯನ್ನು ಅಧ್ಯಯನದ ಮೂಲಕ ದಾಖಲು ಮಾಡಿದ್ದಾರೆ. ಕೃಷ್ಣನನ್ನು ಶೀರದ ನಾಗರಿಕತೆಯಿಂದ ಗುಂಪಾಗಿ ಬಂದಿರುವ ಗೊಲ್ಲ ಜನಾಂಗ, ರಾಜ್ಯದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಭಾಗ ಸೇರಿ ಆಂಧ್ರ, ಮತ್ತು ತಮಿಳುನಾಡಿನಲ್ಲಿ ಹೆಚ್ಚಾಗಿ ಕಾಣುತ್ತೇವೆ. ಸಂಖ್ಯಾತವಾಗಿ ಕಡಿಮೆ ಅನಿಸಿದರೂ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ವಾಸ್ತವ ಬದಲಾವಣೆಗೆ ಅನುಸಂಧಾನ ನಡೆಸುವ ಪದ್ಧತಿ ಈ ಜನಾಂಗದ ವಿಶೇಷ. ಮ್ಯಾಸ ನಾಯಕರ ಮತ್ತು ಗೊಲ್ಲರ ಮೂಲ ಶ್ರೀಶೈಲ ಎನ್ನುತ್ತೇವೆ. ಬೆಡಗು ಮತ್ತು ಜಾತ್ರಾ ಉತ್ಸವ ಆಚರಣೆಗಳಲ್ಲೂ ಸಾಮ್ಯತೆ ಕಾಣುತ್ತೇವೆ. ಹುಲ್ಲುಗಾವಲು ಪ್ರಾಂತ್ಯ ಮ್ಯಾಸ ನಾಯಕರ ಅಧಿಪತ್ಯ. ಪಶುಪಾಲನೆ ವೃತ್ತಿಯ ಗೊಲ್ಲರಿಗೆ ಬೇಕಾದ ಹುಲ್ಲುಗಾವಲಿಗೆ ಯುದ್ಧಗಳಾಗಿವೆ. ಜನಾಂಗದ ಈರಗಾರರನ್ನು ಹೋರಾಟಗಾರರಾಗಿ ಕಾಣುತ್ತೇವೆ ಎಂದು ಹೇಳಿದರು.



ಕೃತಿಕಾರ ಡಾ.ಜಿ.ಎ. ಆನಂದ ಮೂರ್ತಿ, ಪ್ರಕಾಶಕ ಡಾ.ಎಸ್.ಆರ್. ತಿಪ್ಪೇಸ್ವಾಮಿ, ಡಾ. ಕಲಮರಹಳ್ಳಿ ಮಲ್ಲಿಕಾರ್ಜುನ ಮಾತನಾಡಿದರು.

ಈ ಸಂದರ್ಭದಲ್ಲಿ ಸಾಹಿತಿ ತಿಪ್ಪಣ್ಣ ಮರಿಕುಂಟೆ, ತಾಲೂಕು ಕಾಡು ಗೊಲ್ಲರ ಸಂಘದ ಅಧ್ಯಕ್ಷ ಬೂದಿಹಳ್ಳಿ ರಾಜಣ್ಣ, ಸಾಹಿತಿ ಡಾ.ಸಿ. ಶಿವಲಿಂಗಪ್ಪ, ನಾಟಕ ಅಕಾಡಮಿ ಮಾಜಿ ಸದಸ್ಯ ಪಿ. ತಿಪ್ಪೇಸ್ವಾಮಿ ಇಜಿ.ಎಚ್. ಶಶಿಧರ್, ಗದ್ದಿಗೆ ತಿಪ್ಪೇಸ್ವಾಮಿ, ನಿಸರ್ಗ ಗೋವಿಂದ್ ರಾಜ್, ಕೋಲಾಟ ಜಾನಪದ ಕಲಾವಿದ ನರಸಣ್ಣ ಹಾಗೂ ಜಾನಪದ ಕಲಾವಿದೆ ಸಿರಿಯಮ್ಮ ಇನ್ನಿತರರಿದ್ದರು.

# ರೈತ ಒಕ್ಕೂಟಕ್ಕೆ ಇಲಾಖೆ ಮಾಹಿತಿ ನೀಡಬೇಕು

• **ಶೃಂಗೇರಿ:** ರೈತರ ಸಮಸ್ಯೆ ಬಗ್ಗೆ ಸ್ಪಂದಿಸುತ್ತಿರುವ ರೈತ ಒಕ್ಕೂಟಕ್ಕೆ ಇಲಾಖೆಯಿಂದ ಸೂಕ್ತ ಮಾಹಿತಿ ನೀಡಬೇಕು ಎಂದು ತಾಲೂಕು ರೈತ ಒಕ್ಕೂಟದ ಅಧ್ಯಕ್ಷ ಗೇರುಬೈಲು ಶಂಕರಪ್ಪ ಹೇಳಿದರು.

ರೈತ ಒಕ್ಕೂಟದಿಂದ ಶನಿವಾರ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಅನೂಪ್ ಸಂಜೋಗ್‌ರವರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಎಸ್.ಐ.ಟಿ ರಚನೆಗಾಗಿ ಕಂದಾಯ ಹಾಗೂ ಅರಣ್ಯ ಇಲಾಖೆ ಜಂಟಿ ಸರ್ವೆ ಕಾರ್ಯ ನಿರ್ವಹಿಸುತ್ತಿದ್ದು ಯಾವ ಮಾರ್ಗಸೂಚಿಯಲ್ಲಿ ಸರ್ವೆ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಕೊಡಬೇಕು. ಸರಕಾರ ಈ ಬಗ್ಗೆ ಸುತ್ತೋಲೆ ನೀಡಲು ಕೋರಿದ್ದು ಜಂಟಿ ಕಾರ್ಯ ಮಾಡುವ ಸಮಯದಲ್ಲಿ ಸಾರ್ವಜನಿಕರಿಗೆ ಮತ್ತು ರೈತಮಿತ್ರರಿಗೆ ಮಾಹಿತಿ ನೀಡಬೇಕು ಎಂದ ಅವರು ಅಕ್ರಮ-ಸಕ್ರಮ ಜಮೀನನ್ನು ಫಾರಂ ನಂಬ್ರ 50-53-57ರಲ್ಲಿ ಎಷ್ಟು ಜನರಿಗೆ ಮಂಜೂರಾತಿ ಆಗಿದೆ ಎಂಬ ಮಾಹಿತಿ ಜೊತೆ ರೈತರಿಗೆ ಪಹಣಿ ನೀಡದಿದ್ದಲ್ಲಿ ಕಾರಣ ನೀಡಬೇಕು ಎಂದರು



ಒಕ್ಕೂಟದ ಗೌರವಾಧ್ಯಕ್ಷ ಶೆಟ್ಟಿಗದ್ದೆ ರಾಮಸ್ವಾಮಿ ಮಾತನಾಡಿ, ತಾಲೂಕಿನ ಯಾವ ಯಾವ ಗ್ರಾಮದಲ್ಲಿ, ಸರ್ವೆ ನಂಬರಿನಲ್ಲಿ ಎಷ್ಟು ವಿಸ್ತೀರ್ಣ ಗೋಮಾಳ ಜಾಗವನ್ನು 4/1 ನೋಟಿಫಿಕೇಶನ್ ಮಾಡಲಾಗಿದೆ.ಜಂಟಿ ಸರ್ವೆ ಮಾಡಿ ಯಾವ ಕ್ರಮ ತೆಗೆದುಕೊಳ್ಳಲಾಗಿದೆ. ಯಾವ ಸರ್ವೆ ನಂಬರಿನಲ್ಲಿ ಕಂದಾಯ ಭೂಮಿ ಉಳಿಸಲಾಗಿದೆ. 1980ರ ನಂತರ ಕಂದಾಯ ಭೂಮಿಯಲ್ಲಿ ನೀಡಿದ ಸಾಗುವಳಿ ಚೀಟಿ ಮತ್ತು ಹಕ್ಕು ಪತ್ರ ನೀಡಲಾಗಿದೆ. ನೂರು ಗೋವುಗಳಿಗೆ ಕನಿಷ್ಠ ಮೂವತ್ತು ಎಕರೆ ಗೋಮಾಳ ಉಳಿಸಬೇಕು ಎಂಬ ಸರಕಾರದ ಆದೇಶವಿದೆ. ತಾಲೂಕಿನಲ್ಲಿ ಎಷ್ಟು ಎಕರೆ ಗೋಮಾಳ ಮೀಸಲಿರಿಸಲಾಗಿದೆ ಎಂಬುದರ ಕುರಿತು ತಹಸೀಲ್ದಾರ್ ಮಾಹಿತಿ ನೀಡಬೇಕು ಎಂದರು.

ಒಕ್ಕೂಟದ ಮಹಿಳಾ ಘಟಕದ ಅಧ್ಯಕ್ಷೆ ಶಿಲ್ಪಾರವಿ, ಕಾರ್ಯದರ್ಶಿ ನರೇಂದ್ರ ಹೆಗ್ಡೆ, ಭಾನುಪ್ರಕಾಶ್ ಹಾಜರಿದ್ದರು.

# ಸಮಾಜಮುಖಿ ಸೇವೆಯಿಂದ ನೆಮ್ಮದಿ ಲಭ್ಯ: ಶಶಿಧರ್




• **ಶೃಂಗೇರಿ:** ಸಮಾಜಮುಖಿ ಸೇವೆಯನ್ನು ಸಂತಸ ಹಾಗೂ ಹೆಮ್ಮೆಯಿಂದ ಮಾಡಬೇಕು. ಆಗ ಬದುಕಿನಲ್ಲಿ ನೆಮ್ಮದಿ ದೊರಕಿ ಆರೋಗ್ಯ ವೃದ್ಧಿಸುತ್ತದೆ ಎಂದು ಸರಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲ ಶಶಿಧರ್ ಹೇಳಿದರು.

ಪಟ್ಟಣದ ಶಾರದಾ ಕಂಫರ್ಟ್ಸ್‌ನಲ್ಲಿ ಸೀನಿಯರ್ ಜೇಸಿಐ ಚೇಂಬರ್‌ನಿಂದ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 1997ರಲ್ಲಿ ಪ್ರೇಮಾನಂದ ಸ್ಥಾಪಿಸಿರುವ ಸಂಸ್ಥೆ ಈಗ ಪ್ರಪಂಚದಾದ್ಯಂತ ಸೀನಿಯರ್ಸ್ ಜೇಸಿ ಸದಸ್ಯರನ್ನು ಒಟ್ಟುಗೂಡಿಸುವ ಸಂಸ್ಥೆಯಾಗಿದೆ. ಸೇವೆಯು ಸಮಾಜದ ಏಳಿಗೆಯಲ್ಲಿ ಅನನ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಚೇಂಬರ್ ಅಧ್ಯಕ್ಷ ಎಚ್.ಎಂ.ಮಂಜುನಾಥಗೌಡ, ಸ್ವಚ್ಛತೆ, ಆರೋಗ್ಯ, ಶಿಕ್ಷಣ, ಸಮುದಾಯ ಸೇವೆಯಲ್ಲಿ ತೊಡಗಿಸಿಕೊಳ್ಳುವುದು ಸಂಸ್ಥೆ ಉದ್ದೇಶವಾಗಿದೆ.ಸಮಾಜದಲ್ಲಿ ಸೇವೆ ಸಲ್ಲಿಸಲು ಅನೇಕ ಅವಕಾಶವಿದೆ ಎಂದರು.

ಸಂಸ್ಥೆಯ ಬಾಲಗಂಗಾಧರ ಭಟ್, ಕೆ.ಟಿ. ಮಂಜುನಾಥ್, ಶ್ರೀಧರ್, ರವೀಂದ್ರ, ಪ್ರಕಾಶ್, ಛಾಯಾಪತಿ ಇದ್ದರು.

# ರಸ್ತೆ ತಿರುವುಗಳಲ್ಲಿ ಖಾಸಗಿ ಜಾಹೀರಾತು ಫಲಕ; ತೆರವಿಗೆ ಒತ್ತಾಯ

• **ಪರಶುರಾಂಪುರ:** ರಸ್ತೆ ತಿರುವುಗಳಲ್ಲಿ ಖಾಸಗಿ ಜಾಹೀರಾತು ಫಲಕಗಳು ತಲೆ ಎತ್ತಿ ಅಪಘಾತಕ್ಕೆ ಬೀಸಿ ಕರೆಯುತ್ತಿವೆ. ತೆರವಿಗೆ ವಾಹನ ಸವಾರರ ಜತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪರಶುರಾಂಪುರದಿಂದ ಚಳ್ಳಕೆರೆಗೆ ಹೋಗುವ ರಸ್ತೆಯ ಸೂರನಹಳ್ಳಿ ಗೇಟ್ ತಿರುವಿನ ಬಲಗಾಗ ದೊಡ್ಡದಾಗಿ ಖಾಸಗಿ ಜಾಹೀರಾತು ಫಲಕ ಅಳವಡಿಸಿದ್ದರಿಂದ ಮುಂಬರುವ ವಾಹನಗಳು ಕಾಣದೇ ತಬ್ಬಿಬ್ಬಾಗಿ ಕೆಲಾ ಸಮಯ ಅಪಘಾತವಾಗಿರುವುದುಂಟು.

ಈ ರಸ್ತೆ ನೆರೆ ಆಂಧ್ರ, ಸೇರಿದಂತೆ ಪಾವಗಡ, ತುಮಕೂರು, ರಾಜಧಾನಿ ಬೆಂಗಳೂರು ಹಾಗೂ ಅಂತಾ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಸಂಪರ್ಕ ಹೊಂದಿರುವ ಪ್ರಮುಖ ಖ ರಸ್ತೆ ಆಗಿದ್ದು ವಾಹನ ಸಂಖ್ಯೆ ದಿನದಿಂದಕ್ಕೆ ಹೆಚ್ಚಾಗುತ್ತಲೇ ಇವೆ.



ಪರಶುರಾಂಪುರ-ಧರ್ಮಾಪುರ ರಸ್ತೆಯ ದೊಡ್ಡಚೆಲ್ಲೂರು ಫಾರೆಸ್ಟ್ ಸಮೀಪದ ತಿರುವಿನಲ್ಲಿ ಸಹ ಖಾಸಗಿ ಜಾಹೀರಾತು ಫಲಕ ಅಳವಡಿಕೆಯಾಗಿದೆ. ಇಲ್ಲಿಯೂ ಸಹಾ ಅಪಘಾತಕ್ಕೆ ಜವರಾಯ ಕಾದು ಕುಳಿತುಕೊಂಡಿದ್ದಾನೆ.

ಈ ಕೂಡಲೇ ಸಂಬಂಧ ಇಲಾಖೆಯವರು ಅಪಾಯಕಾರಿ ರಸ್ತೆಗಳ ತಿರುವುಗಳಲ್ಲಿ ಅಳವಡಿಸಿರುವ ಖಾಸಗಿ ಜಾಹೀರಾತು ಫಲಕಗಳನ್ನ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾರೆ.



Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Diganta Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ಸೂಪರ್ ಕಿಂಗ್ಸ್‌ಗೆ 251 ರನ್ ಗುರಿ | ಒಂದೇ ಪಂದ್ಯ 19 ಸಿಕ್ಸರ್

# ಚೆನ್ನೈಗೆ ಡೆವಿಡ್ ಪಂಚ್



ಚಿತ್ರ: ಮೋಹನ್ ಕುಮಾರ್ ಬಿ. ಎಚ್

• **ಬೆಂಗಳೂರು:** ಇನ್ನಿಂಗ್ಸ್ ಉದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದ ಆರ್‌ಸಿಬಿ ಬ್ಯಾಟಿಂಗ್ ಪಡೆ ಐಪಿಎಲ್‌ನ ತಮ್ಮ ಎರಡನೇ ಪಂದ್ಯದಲ್ಲಿ ಚೆನ್ನೈ ವಿರುದ್ಧ ಮೂರನೇ ಅತಿ ಹೆಚ್ಚು ಸ್ಕೋರ್ ಮಾಡಿತು.

ಮೊದಲಿಗೆ ಕೊಹ್ಲಿ, ನಂತರ ಪಡಿಕ್ಕಲ್, ಕೊನೆಯಲ್ಲಿ ಪಾಟಿದಾರ್ ಮತ್ತು ಡೆತ್ ಓವರ್‌ಗಳಲ್ಲಿ ಡೇವಿಡ್? ಹೀಗೆ ಬಂದ ಬ್ಯಾಟರ್‌ಗಳು ಚೆನ್ನೈ ತಂಡವನ್ನು ದಂಡಿಸುತ್ತಿದ್ದರೆ ಚೆನ್ನೈ ನೋಡುತ್ತಾ ನಿಂತಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬರೋಬ್ಬರಿ 250 ರನ್ ಚಚ್ಚಿತು. ಚೆನ್ನೈ ಕೇವಲ 3 ವಿಕೆಟ್ ಪಡೆಯಿತು.

ಆರ್‌ಸಿಬಿ 19 ಸಿಕ್ಸರ್‌ಗಳನ್ನು ಬಾರಿಸಿತು. ಇದರಲ್ಲಿ ಡೆವಿಡ್ 8 ಬಾರಿಸಿದರೆ ಪಾಟಿದಾರ್ 6 ಸಿಕ್ಸರ್‌ಗಳನ್ನು ಬಾರಿಸಿದರು. ಆರ್‌ಸಿಬಿ ತನ್ನ ಮೂರನೇ ಅತಿ ಹೆಚ್ಚು ರನ್ ಬಾರಿಸಿದೆ.

**ದಂಡಿಸಿದ ದಾಂಡಿಗರು:** ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಬೆಂಗಳೂರು ನಿರೀಕ್ಷಿತ ಆರಂಭ ಪಡೆಯಲಿಲ್ಲ. ಮೊದಲನೇ ಬೌಂಡರಿ ಗಳಿಸಲು 20 ಎಸೆತ ಎದುರಿಸಿತು. ಅದಕ್ಕೂ ಹೆಚ್ಚಾಗಿ ಮೊದಲ ಓವರ್‌ನಲ್ಲೇ ಕೊಹ್ಲಿ ರನ್‌ಔಟ್‌ನಿಂದ ಪಾರಾದರು. ಎರಡನೇ ಓವರ್‌ನಲ್ಲಿ ದುಬೆಯಿಂದ ಜೀವದಾನ ಪಡೆದರು. ಆದಾಗ್ಯೂ ಅವರ ಬ್ಯಾಟ್‌ನಿಂದ ಬಂದಿದ್ದು 28 ರನ್ ಮಾತ್ರ! ಇತ್ತ ಸೆಟ್ ಆಗುವ ಜಿಪುಣಾಕೆಗೆ ಬಿದ್ದ ಸಾಲ್ಟ್, ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಲೇ ಇಲ್ಲ. ಮೂರನೇ ಕ್ರಮಾಂಕದಲ್ಲಿ ಬಂದ ಪಡಿಕ್ಕಲ್ ಸಿಂಗಲ್-ಟುಡಿಗಳ ಮುಲಾಜಿಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 51 ರನ್ ಗಳಿಸಿತು.

ಪವರ್‌ಪ್ಲೇ ಮುಗಿದ ನಂತರ ಪಡಿಕ್ಕಲ್ ಹಾಗೂ ಸಾಲ್ಟ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 56 ರನ್ ಗಳಿಸಿತು. ಸೆಟ್ ಆಗಿದ್ದ ಸಾಲ್ಟ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ 46 ಗಳಿಸಿದ್ದಾಗ ಕ್ಯಾಚ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸ್ ಮತ್ತು 3 ಫೋರ್‌ಗಳು ಸೇರಿವೆ.

**ರಜತ್-ಪಡಿಕ್ಕಲ್ ಅಬ್ಬರ:** ಸ್ಲಾಗ್ ಓವರ್‌ಗಳಲ್ಲಿ ಒಂದಾದ ಪಡಿಕ್ಕಲ್ ಮತ್ತು ಪಾಟಿದಾರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮೊದಲಿನಿಂದಲೂ ವಿಕೆಟ್ ಬಿದ್ದ ಒತ್ತಡ ಎದುರಿಸುತ್ತಿದೆ ಅನ್ನಿಸಲೇ ಇಲ್ಲ. ಮೈದಾನದ ಪ್ರತಿ ದಿಕ್ಕಿಲ್ಲೂ ಚಚ್ಚಿದ ಈ ಜೋಡಿ ಸರಸರನೇ ರನ್ ಗಳಿಸಿತು. ಕೇವಲ 17 ಬಾಲ್‌ಗಳಲ್ಲೇ 50 ರನ್ ನಿರ್ಮಿಸಿತು. ಇನ್ನೇನು ಸೆಟ್ ಆದರು, ಒಂದು ಹಂತದಲ್ಲಿ ಮುನ್ನಡೆಯಲ್ಲಿದ್ದ ಚೆನ್ನೈ ತಂಡ ಸಂಕಷ್ಟಕ್ಕೆ ಸಿಲುಕಿಕೊಂಡಿತು ಅನ್ನುವಷ್ಟರಲ್ಲಿ 15ನೇ ಓವರ್ ಬೌಲಿಂಗ್ ಮಾಡಲು ಬಂದ ಜೆಮ್ಮಿ ಓವರ್‌ಟನ್ ಮೊದಲ ಬಾಲ್ ಅನ್ನೇ ಆಡಲಾಗದ ಯಾರ್ಕರ್ ಎಸೆದರು. ಪಡಿಕ್ಕಲ್ ಪೆವಿಲಿಯನ್ ಹಾದಿ ಹಿಡಿದರು.

**ಮತ್ತೆ ಪಡಿಕ್ಕಲ್ ಪರಾಕ್ರಮ:**

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಂದಿದ್ದ ಅಭಿಮಾನಿಗಳನ್ನು ಪಡಿಕ್ಕಲ್ ರಂಜಿಸಿದರು. ಕಳೆದ ಪಂದ್ಯದಲ್ಲೂ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅರ್ಧಶತಕ ಬಾರಿಸಿದ್ದ ಅವರು ಈ ಪಂದ್ಯದಲ್ಲೂ 50 ರನ್ ಬಾರಿಸಿದರು. ಈ ಇನ್ನಿಂಗ್ಸ್‌ನಲ್ಲಿ5 ಬೌಂಡರಿ ಮತ್ತು 2 ಸಿಕ್ಸರ್‌ಗಳು ಸೇರಿವೆ.

**ಪಾಟಿದಾರ್ ಬಿರುಸಿನಾಟ:** ಮಧ್ಯಮ ಕ್ರಮಾಂಕದಲ್ಲಿ ಬಂದ ಪಾಟಿದಾರ್ ಈ ಬಾರಿ ಸ್ಕೋರ್ ಹಿಗ್ಗಿಸುವ ಜವಾಬ್ದಾರಿ ನಂದೆಂದರು. ಮೊದಲನೇ ಎಸೆತದಿಂದಲೂ ಅವರು ಸ್ಫೋಟಕ ಬ್ಯಾಟಿಂಗ್‌ಗೆ ಯತ್ನಿಸಿದರು. ಗಗನದೆತ್ತರ ಸಿಕ್ಸರ್ ಬಾರಿಸುತ್ತಾ, ಚಾಣಾಕ್ಷ ಮತ್ತು ಕ್ಲಾಸಿಕ್ ಬೌಂಡರಿಗಳನ್ನು ಬಾರಿಸುತ್ತಾ 50 ರನ್ ಪೂರೈಸಿದರು. ಅವರಿಗೆ ಟೀಮ್ ಡೇವಿಡ್ ಸಾಥ್ ಸಿಕ್ಕಿತು. ಸ್ವಲ್ಪ ಸಮಯದ ನಂತರ ಅವರೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಟ್ಟು 19 ಎಸೆತ ಎದುರಿಸಿದ ಅವರು ಔಟಾಗದೆ 48 ರನ್ ಗಳಿಸಿದರು.



## ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಎಂಡ್ ಅನಾವರಣ

ಪಂದ್ಯಕ್ಕೂ ಮುನ್ನ ಕ್ರಿಕೆಟ್ ಗೋಡೆ, ಕನ್ನಡಿಗ ರಾಹುಲ್ ದ್ರಾವಿಡ್ ಹಾಗೂ ಜಂಬೋ ಖ್ಯಾತಿಯ ಅನಿಲ್ ಕುಂಬ್ಳೆ ಎಂಡ್‌ಗಳ ಅನಾವರಣ ಮಾಡಲಾಯಿತು. ಕ್ರೀಡಾಂಗಣದ ಎರಡೂ ಪೆವಿಲಿಯನ್ ಎಂಡ್‌ಗಳಿಗೂ ಒಬ್ಬೊಬ್ಬರ ಹೆಸರನ್ನು ಇಡಲಾಗಿದೆ. ಟಾಸಿಗೂ ಮುನ್ನವೇ ದ್ರಾವಿಡ್, ಕುಂಬ್ಳೆ, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸೇರಿದಂತೆ ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಅನಾವರಣ ಕಾರ್ಯಕ್ರಮ ಮಾಡಲಾಯಿತು.

## ಸಿಕ್ಸರ್‌ಗಳ ಸುರಿಮಳೆಗೈದ ಡೆವಿಡ್

ಇನ್ನು ಡೆತ್ ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದ ಟೀಮ್ ಡೇವಿಡ್ ತಂಡದ ಮೊತ್ತ ಹಿಗ್ಗಿಸಿದ್ದಲ್ಲದೆ, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಯೋಜನೆಗಳನ್ನೆಲ್ಲಾ ಮುರಿದು ಹಾಕಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದರು. ಗಗನದೆತ್ತರ ಸಿಕ್ಸರ್‌ಗಳನ್ನು ಬಾರಿಸಿದರು. ಇನ್ನಿಂಗ್ಸ್‌ನಲ್ಲಿ 25 ಬಾಲ್ ಎದುರಿಸಿದರು. ಅದರಲ್ಲಿ 8 ಸಿಕ್ಸರ್‌ಗಳು! ಒಟ್ಟು 75 ರನ್ ಗಳಿಸಿದ ಅವರು 250 ರನ್ ಗಡಿ ದಾಟಿಸಿದರು. ಪಾಟಿದಾರ್ ಔಟಾಗದೆ 48 ರನ್ ಗಳಿಸಿದರು.

ಲಖನೌ ಸೂಪರ್‌ಗೆ ಮೊದಲ ಗೆಲುವು | ಹೈದರಾಬಾದ್‌ಗೆ ನಿರಾಸೆ

# ಪಂತ್ ತಾಳ್ಮೆಯಾಟಕ್ಕೆ ಜಯ

• **ಹೈದರಾಬಾದ್:** ಮೊಹಮ್ಮದ್ ಶಮಿ ಸೇರಿದಂತೆ ತಂಡದ ವೇಗಿಗಳ ಮಾರಕ ಬೌಲಿಂಗ್ ದಾಳಿ ಹಾಗೂ ರಿಷಭ್ ಪಂತ್ ಅವರ ಸಮಯೋಚಿತ ಬ್ಯಾಟಿಂಗ್ ಪರಿಣಾಮ ಲಖನೌ ಸೂಪರ್ ಜೇಂಟ್ಸ್ ತಂಡ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ.

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸೂಪರ್ ವೀಕೆಂಡ್‌ನ ಮೊದಲ ಪಂದ್ಯದಲ್ಲಿ ಎದುರಾಗಿದ್ದ ಹೈದರಾಬಾದ್ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡಿತು. ನಂತರ ಬೌಲಿಂಗ್ ವೇಳೆ ಒತ್ತಡ ಹೇರಲು ಪ್ರಯತ್ನಿಸಿದರೂ ಗೆಲ್ಲಲು ಬೇಕಾದ ಆವೇಗ ಪಡೆಯದೇ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದ ರಿಷಭ್ ಪಂತ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಮೊಹಮ್ಮದ್ ಶಮಿ, ಪ್ರಿನ್ಸ್ ಯಾದವ್ ಹಾಗೂ ದಿಗ್ವೇಶ್ ರಾಥಿ ಆರಂಭಿಕ ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದರು. ಪರಿಣಾಮ ಹೈದರಾಬಾದ್ 20 ಓವರ್‌ಗಳಲ್ಲಿ9 ವಿಕೆಟ್ ನಷ್ಟಕ್ಕೆ 156 ರನ್‌ಗಳಿಸಿತು. ತಂಡದ ಪರ ಹೆನ್ರಿಚ್ ಕ್ಲಾಸೆನ್ 62, ನಿತೀಶ್ ರೆಡ್ಡಿ 56 ರನ್ ಗಳಿಸಿದರು. ಲಖನೌ ಪರ ಶಮಿ, ಆವೇಶ್ ಹಾಗೂ ಪ್ರಿನ್ಸ್ ತಲಾ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ಲಖನೌ 19.5 ಓವರ್‌ಗಳಲ್ಲಿ 160 ರನ್ ಗಳಿಸಿ ಗುರಿ ಮುಟ್ಟಿತು. ತಂಡದ ಪರ ನಾಯಕ ರಿಷಭ್ ಪಂತ್ ಅಜೇಯ 68 ರನ್ ಗಳಿಸಿದರೆ, ಮಾರ್ಕ್ರಂ 45 ರನ್‌ಗಳಿಸಿದರು. ಹೈದರಾಬಾದ್ ಪರ ಹರ್ಷ 2 ವಿಕೆಟ್ ಪಡೆದುಕೊಂಡರು.

ಪಂತ್ ಕೊನೆಯವರೆಗೂ ತಾಳ್ಮೆ ಕಳೆದುಕೊಳ್ಳದೆ ಬ್ಯಾಟಿಂಗ್ ಮಾಡಿ ಪಂದ್ಯ ಗೆಲ್ಲಿಸಿ ಹೀರೋ ಅನ್ನಿಸಿಕೊಂಡರು. ಮಾರ್ಕ್ರಂ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿ ಎನಿಸಿಕೊಂಡರು. ಬೌಲಿಂಗ್ ವೇಳೆ ಮೊಹಮ್ಮದ್ ಶಮಿ 18 ಬಾಲ್ ಡಾಟ್ ಮಾಡಿ ದಿನದಾಟದ ಪ್ರಮುಖ ಆಕರ್ಷಣೆಯಾಗಿದ್ದರು. ಹೈದರಾಬಾದ್ ಪರ ರೆಡ್ಡಿ ಮತ್ತು ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಹೋರಾಡಿದರು.

**ಪಂತ್ ಮಿಂಚಿನಾಟ:** ಗುರಿ ಬೆನ್ನತ್ತುವಾಗ ಲಖನೌ ಉತ್ತಮ ಆರಂಭವೇ ಪಡೆಯಿತು. ಮೊದಲಿಗೆ ಮಾರ್ಷ್ ಹಾಗೂ ಮಾರ್ಕ್ರಂ ಉತ್ತಮ ಜೊತೆಯಾಟ ನಿರ್ಮಿಸುವತ್ತ ಸಾಗುತ್ತಿದ್ದರು. ಸೆಟ್ ಆಗುವ ಮುಲಾಜಿಗೆ ಬಿದ್ದ ಮಾರ್ಷ್ ಸೆಟ್ ಆಗುವುದರೊಳಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ರಿಷಭ್ ಪಂತ್ ತಮ್ಮ ಸ್ವಾಭಾವಿಕ ಆಟ ಬಿಟ್ಟು ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಮಾರ್ಕ್ರಂ ಜಿಪುಣಾಕೆ ಮುಗಿಸಿಕೊಂಡ ನಂತರ ಸಿಕ್ಸರ್‌ಗಳನ್ನು ಬಾರಿಸುತ್ತಾ ಮಿಂಚಿದರು. ಮಾರ್ಕ್ರಂ ಔಟಾದರು. ಕೆಳಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ. ಸ್ಲಾಗ್ ಓವರ್‌ಗಳಲ್ಲಿ ಎರಡು ವಿಕೆಟ್ ಪಡೆದ ಹೈದರಾಬಾದ್ ಒತ್ತಡ ಹೇರಲೆತ್ನಿಸಿತು. ಆದರೆ ಪಂದ್ಯ ಬಹುತೇಕ ಕೈತಪ್ಪಿತ್ತು. ಉಳಿದ ರನ್‌ಗಳನ್ನು ಪಂತ್ ಬಾರಿಸಿದರು. ಕೊನೆಯ ಓವರ್‌ನಲ್ಲಿ 9 ರನ್ ಬೇಕಿದ್ದಾಗ 3 ಬೌಂಡರಿಗಳನ್ನು ಬಾರಿಸಿದ ಪಂತ್ ತಾಳ್ಮೆಯಿಂದ ಪಂದ್ಯ ಗೆಲ್ಲಿಸಿದವರಾದರು.



### ಸಂಕ್ಷಿಪ್ತ ಸ್ಕೋರ್

- ಹೈದರಾಬಾದ್: 20 ಓವರ್‌ಗಳಲ್ಲಿ 156/9: ಕ್ಲಾಸೆನ್ 62, ರೆಡ್ಡಿ; ಶಮಿ 9/2, ಪ್ರಿನ್ಸ್ 34/2
- ಲಖನೌ: 19.5 ಓವರ್‌ಗಳಲ್ಲಿ 160/5: ಪಂತ್ 68★, ಮಾರ್ಕ್ರಂ 45; ಹರ್ಷ 18/2

## ಕ್ಲಾಸೆನ್-ರೆಡ್ಡಿ ಆಸರೆ

ಬ್ಯಾಟಿಂಗ್ ಆಹ್ವಾನ ಪಡೆದಿದ್ದ ಹೈದರಾಬಾದ್ ಶಮಿಯ ಕರಾರುವಕ್ ಬೌಲಿಂಗ್ ದಾಳಿಗೆ ತತ್ತರಿಸಿತು. ಆರಂಭದಲ್ಲಿ 26 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು. ಇದಾದ ಬಳಿಕ ಒಂದಾದ ರೆಡ್ಡಿ ಮತ್ತು ಕ್ಲಾಸೆನ್ ದೊಡ್ಡ ಜೊತೆಯಾಟ ನಿರ್ಮಿಸಿದರು. ಒಂದು ಹಂತದಲ್ಲಿ ಸೆಟ್ ಆಗಿ ಒತ್ತಡ ನೀಗಿಸುವ ಜಿಪುಣಾಕೆ ಮುಗಿಸಿಕೊಂಡ ನಂತರ ಇಬ್ಬರೂ ದಂಡಿಸಲಾರಂಭಿಸಿದರು. 10 ಓವರ್‌ಗಳಲ್ಲಿ 50 ರನ್ ದಾಟದ ಹೈದರಾಬಾದ್ 140 ದಾಟಿತು. ರೆಡ್ಡಿ, ಕ್ಲಾಸೆನ್ ವಿಕೆಟ್ ಒಪ್ಪಿಸಿದ ನಂತರ ಕೊನೆಯಲ್ಲಿ ಹೈದರಾಬಾದ್ 5 ವಿಕೆಟ್‌ಗಳನ್ನು ಕಳೆದುಕೊಂಡಿಯಿತು. ರೆಡ್ಡಿ 56, ಕ್ಲಾಸೆನ್ 62 ರನ್ ಗಳಿಸಿದರು.




## ಕಿರುಸುದ್ದಿ

### ಪ್ರಾಯೋಜಕತ್ವಕ್ಕೆ ಸಂಸ್ಥೆ ಅನುಮತಿ ಕಡ್ಡಾಯ

• **ಹೊಸದಿಲ್ಲಿ:** ಭಾರತೀಯರ ಅಥ್ಲೀಟ್‌ಗಳು ವೈಯಕ್ತಿಕ ಪ್ರಾಯೋಜಕತ್ವ ಪಡೆಯುವ ಮುನ್ನ ದೇಶಿ ಅಥ್ಲೆಟಿಕ್ಸ್ ಸಂಸ್ಥೆಯ ಅನುಮತಿ ಪಡೆಯಬೇಕೆಂದು ತಿಳಿಸಲಾಗಿದೆ. ಭಾರತೀಯ ಅಥ್ಲೆಟಿಕ್ಸ್ ಕ್ರೀಡಾಪಟುಗಳಿಗೆ ಈಗಿನಿಂದ ಹೊಸ ನಿಯಮ ಜಾರಿಯಾಗಿದೆ. ಇತ್ತೀಚೆಗೆ ಹೊರಡಿಸಿದ ಪ್ರಕಟಣೆಯಲ್ಲಿ ಎಎಫ್‌ಐ, ಕ್ರೀಡಾಪಟುಗಳು ಮತ್ತು ಪ್ರಾಯೋಜಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಸ್ಪಾನ್ಸರ್ ಅಥವಾ ಮೂರನೇ ವ್ಯಕ್ತಿಯೊಂದಿಗೆ ಒಪ್ಪಂದಕ್ಕೆ ಸೇರುವ ಮೊದಲು ಎಎಫ್‌ಐ ಅನುಮತಿ ಪಡೆಯಬೇಕು ಎಂದು ತಿಳಿಸಿದೆ.ಇದಲ್ಲದೆ, ಕ್ರೀಡಾಪಟು ಅಗತ್ಯ ಅನುಮತಿ ಪಡೆದಿರುವುದನ್ನು ಎಎಫ್‌ಐಯಿಂದ ದೃಢೀಕರಿಸಿದ ನಂತರವೇ ಪ್ರಾಯೋಜಕರು ಒಪ್ಪಂದ ಪ್ರಕ್ರಿಯೆಯನ್ನು ಮುಂದುವರಿಸಬೇಕು. ವಿನಂತಿ ಬಂದ ದಿನಾಂಕದಿಂದ ಮೂರು ದಿನಗಳ ಒಳಗೆ ಎಎಫ್‌ಐ ದೃಢೀಕರಣ ನೀಡುತ್ತದೆ ಎಂದು ಹೇಳಲಾಗಿದೆ. ಸೂಚನೆಯನ್ನು ಎಲ್ಲಾ ರಾಜ್ಯ ಘಟಕಗಳು, ಮುಖ್ಯ ಕೋಚ್ ರಾಧಿಕೃಷ್ಣನ್ ನಾಯರ್, ರಿಲಯನ್ಸ್ ಫೌಂಡೇಶನ್ ಯೂತ್ ಸ್ಪೋರ್ಟ್ಸ್, ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್, ಓಎನ್‌ಜಿಸಿ ಸ್ಪೋರ್ಟ್ಸ್, ಗೋ ಸ್ಪೋರ್ಟ್ಸ್ ಫೌಂಡೇಶನ್, ಒಲಿಂಪಿಕ್ ಗೋಲ್ಡ್ ಕ್ವೆಸ್ಟ್ ಸೇರಿದಂತೆ ಇತರ ಪ್ರಾಯೋಜಕರಿಗೂ ಕಳುಹಿಸಲಾಗಿದೆ.

» ಎಲ್ಲಾ ರಾಜ್ಯ ಹಾಗೂ ವಿಭಾಗದ ಸಂಸ್ಥೆಗಳಿಗೆ ಅನ್ವಯ

ಕ್ಯಾಂಡಿಡೇಟ್ಸ್ ಚೆಸ್ | ಪ್ರಜ್ಞಾನಂದ ಪಂದ್ಯ ಡ್ರಾ

# ಚೆಸ್: ದಿವ್ಯಾ, ವೈಶಾಲಿಗೆ ಜಯ





• **ಹೊಸದಿಲ್ಲಿ:** ಜಯದ ಹುಡುಕಾಟದಲ್ಲಿದ್ದ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಕ್ಯಾಂಡಿಡೇಟ್ಸ್ ಚೆಸ್ ಪಂದ್ಯಾವಳಿಯಲ್ಲಿ ಗೆಲುವಿನ ನಗೆ ಬೀರಿದರು. ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಮತ್ತು ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ತಮ್ಮ ಮೊದಲ ಜಯಗಳನ್ನು ಸಾಧಿಸಿದರು. ಈ ಗೆಲುವಿನ ಮೂಲಕ ವೈಶಾಲಿ ಈಗ ಸಂಯುಕ್ತ ದ್ವಿತೀಯ ಸ್ಥಾನಕ್ಕೆ ಏರಿದ್ದು, ಗೆಲುವಿನ ಆಸೆ ಜೀವಂತವಾಗಿರಿಸಿದ್ದಾರೆ.

ಬಿಬಿಸಾರಾ ಮಾಡಿದ ಕೆಲವು ತಪ್ಪುಗಳನ್ನು ಸದುಪಯೋಗಪಡಿಸಿಕೊಂಡ ದಿವ್ಯ, 46ನೇ ನಡೆಯಲ್ಲಿ ಕ್ಯೂಎಫ್-4 ಆಡಿದರು. ಕ್ಯಾಟ್ರಿನಾ ಲ್ಯಾಗ್ನೊ ಅವರನ್ನು ಎದುರಿಸಿದ್ದ ಆರ್. ವೈಶಾಲಿ ಚಾಣಾಕ್ಷ ಪ್ರದರ್ಶನದೊಂದಿಗೆ ಪಂದ್ಯವನ್ನು ಗೆದ್ದುಕೊಂಡರು. ನಂತರ ಅವರು ನಿರಂತರವಾಗಿ ರಾಜನ ಮೇಲೆ ದಾಳಿ ನಡೆಸಿ ಜಯ ಸಾಧಿಸಿದರು. ಮಹಿಳಾ ವಿಭಾಗದಲ್ಲಿ ಅನ್ನಾ ಮುಝಿಚುಕ್, ಝು ಜಿನರ್ ಅವರನ್ನು ಸೋಲಿಸಿ ಅಗ್ರಸ್ಥಾನವನ್ನು ಕಾಯ್ದುಕೊಂಡರು.

ಇನ್ನೊಂದು ಪಂದ್ಯದಲ್ಲಿ ಆರ್ ಪ್ರಜ್ಞಾನಂದ ಹಾಗೂ ಹಿಕಾರು ನಕಾಮುರಾ ಡ್ರಾ ಮಾಡಿಕೊಂಡರು. ನಕಾಮುರಾ ಕ್ವೀನ್ ಪಾನ್ ಆರಂಭವನ್ನು ಆಯ್ಕೆ ಮಾಡಿಕೊಂಡರೆ, ಪ್ರಜ್ಞಾನಂದ ಸ್ಥಿರ ಆಟದೊಂದಿಗೆ ಎದುರಾಳಿ ಯೋಜನೆಗಳನ್ನು ವಿಫಲಗೊಳಿಸಿದರು. ಇಬ್ಬರೂ ಆಳವಾದ ತಯಾರಿಯನ್ನು ತೋರಿದರೂ ನಿರ್ಣಾಯಕ ಮುನ್ನಡೆ ಯಾರಿಗೂ ಸಿಗದೆ ಪಂದ್ಯ ಡ್ರಾಗೆ ಅಂತ್ಯವಾಯಿತು. ಕೊನೆಯ ಪಂದ್ಯದಲ್ಲಿ ಅನೀಶ್ ಗಿರಿ ಮತ್ತು ಮಥಿಯಾಸ್ ಬ್ಲ್ಯೂಬಾಮ್ ಕೂಡ ಡ್ರಾ ಮಾಡಿಕೊಂಡರು.

ಅಗ್ರಸ್ಥಾನದಲ್ಲೇ ಉಳಿದ ಸಿಂದಾರೊವ್:

ತಮ್ಮ ಸ್ವಾಭಾವಿಕ ಆಟ ಮುಂದುವರಿಸಿರುವ ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ಜವೊಖಿರ್ ಸಿಂದಾರೊವ್ ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫೈಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಪಾರುಪತ್ಯ ಮುಂದುವರಿಸಿದ್ದಾರೆ. ಆರನೇ ಸುತ್ತಿನಲ್ಲಿ ಚೀನಾದ ವೇಯಿ ಯಿಯನ್ನು ಮಣಿಸಿದ ಸಿಂದಾರೊವ್, ಆರು ಪಂದ್ಯಗಳಿಂದ 5.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಆಟದ ಆರಂಭದಲ್ಲೇ ಪಾನ್ ರಚನೆ ಹಾನಿಗೊಳಗಾದರೂ, ಸಿಂದಾರೊವ್ ಶೀಘ್ರದಲ್ಲೇ ಓಪನ್ ಜಿ-ಫೈಲ್ ಅನ್ನು ಹಿಡಿದು ಚುರುಕಾದ ಆಟ ಪ್ರದರ್ಶಿಸಿದರು. ಎದುರಾಳಿ ವೇಯಿ ಯಿ ಹೆಚ್-4 ಮತ್ತು ಕಿಂಗ್‌ಸೈಡ್ ದಾಳಿಗಳ ಮೂಲಕ ಒತ್ತಡ ಸೃಷ್ಟಿಸಲು ಪ್ರಯತ್ನಿಸಿದರೂ, ಸಿಂದಾರೊವ್ ಆರ್‌ಜಿ-8 ಮೂಲಕ ಪ್ರತಿಕ್ರಿಯಿಸಿ ಕ್ವೀನ್‌ಸೈಡ್ ವಿಸ್ತರಣೆ ಮಾಡಿದರು. ವೇಯಿಯ ಸಂಯೋಜನೆಯನ್ನು ದುರ್ಬಲಗೊಳಿಸಿದರು. ಮಧ್ಯಭಾಗದ ಆಟದಲ್ಲಿ ಅವರ ರಾಣಿ ಮತ್ತು ಬಿಷಪ್ ಹಾಗೂ ಕಿಂಗ್‌ಸೈಡ್ ಚೌಕಗಳ ಮೇಲೆ ಒತ್ತಡ ತಂದು ಪ್ರಾಬಲ್ಯ ಸಾಧಿಸಿದವು.

# ಪಂಜಾಬ್‌ಗೆ ಹ್ಯಾಟ್ರಿಕ್ ಗೆಲುವಿನ ಹಂಬಲ

• **ಕೋಲ್ಕತ್ತಾ:** ಸೋಲಿನ ಸರಪಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಗೆಲುವಿನ ವಿಶ್ವಾಸ ಹೊತ್ತಿರುವ ಪಂಜಾಬ್ ಕಿಂಗ್ಸ್ ತಂಡಗಳು ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಕಳೆದ ಆವೃತ್ತಿಯಿಂದಲೂ ಅತ್ಯುತ್ತಮ ಪ್ರದರ್ಶನ ನೀಡಿರುವ ಪಂಜಾಬ್ ತನ್ನ ಕೊನೆಯ ಪಂದ್ಯದಲ್ಲಿ ಚೆನ್ನೈ ತಂಡವನ್ನು ಸೋಲಿಸಿದೆ. ಇತ್ತ ಕೆಕೆಆರ್ ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ. ಐಪಿಎಲ್ ಶುರುವಾಗಿ ವಾರವಷ್ಟೇ ಕಳೆದರೂ ಪಂದ್ಯಾವಳಿಯಲ್ಲಿ ಅಂಕಪಟ್ಟಿಯ ಪೈಪೋಟಿ ಶುರುವಾದಂತಿದ್ದು ಪಂಜಾಬ್ ಪೈಪೋಟಿಯಲ್ಲಿದೆ. ಬಲಿಷ್ಠ ಬೌಲಿಂಗ್ ಮತ್ತು ಸಮತೋಲಿತ ಬ್ಯಾಟಿಂಗ್ ವಿಭಾಗ ಹೊಂದಿರುವ ಪಂಜಾಬ್ ಸವಾಲಿಗೆ ಸಿದ್ಧವಾದರೆ ಇತ್ತ ಬ್ಯಾಟಿಂಗ್ ಪಡೆಯನ್ನು ಹೊಂದಿದ್ದರೂ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸುತ್ತಿದೆ.

**ಆತ್ಮವಿಶ್ವಾಸದಲ್ಲಿ ಪಂಜಾಬ್:** ಎರಡು ಗೆಲುವಿನ ವಿಶ್ವಾಸದಲ್ಲಿ ಪಂಜಾಬ್ ಕಿಂಗ್ಸ್ ಕಾಣಿಸಿಕೊಂಡಿದೆ. ಬಲಿಷ್ಠ ಬೌಲಿಂಗ್ ಪಡೆಯೊಂದಿಗೆ ಬ್ಯಾಟಿಂಗ್‌ನಲ್ಲೂ ಅದ್ಭುತ ಆಟಗಾರರನ್ನು ಪಂಜಾಬ್ ಹೊಂದಿದೆ. ಕಳೆದ ಪಂದ್ಯದಲ್ಲಿ ಕುಸಿತ ಅನುಭವಿಸಿದ್ದರೂ ಕೂಪರ್ ಕೊನೊಲಿ ಉತ್ತಮ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದಾರೆ. ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಲಯದಲ್ಲಿದ್ದಾರೆ. ಆದಾಗ್ಯೂ ಪ್ರಿಯಾಂಶ್ ಆರ್ಯ, ವಧೇರಾ ಅಂಥವರು ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲಿ ವಿವಿಧ ಆಟಗಾರರು ಭರವಸೆ ಹೆಚ್ಚಿಸಿದ್ದಾರೆ.

**ಕೆಕೆಆರ್‌ಗೆ ಗೆಲುವಿನ ತವಕ:** ಇನ್ನು ಕೆಕೆಆರ್ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ತಂಡದಲ್ಲಿ ಗಾಯದಿಂದಾಗಿ ವಿವಿಧ ಆಟಗಾರರು ಆಡುತ್ತಿಲ್ಲ. ಅದರಲ್ಲೂ ಬೌಲಿಂಗ್ ವಿಭಾಗದವರೆ ಗೈರಾಗಿರುವುದು ತಂಡಕ್ಕೆ ಹೊಡೆತ ಬಿದ್ದಿದೆ. ಅಲೆನ್ ಉತ್ತಮ ಲಯದಲ್ಲಿದ್ದಾರೆ. ರಹಾನೆ, ಅಂಗ್ರಿಶ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ರಿಂಕು ಸಿಂಗ್, ನರೈನ್ ಕೂಡ ಬ್ಯಾಟಿಂಗ್ ಮಾಡಬಲ್ಲರು. ಬೌಲಿಂಗ್‌ನಲ್ಲಿ ವೈಭವ್ ದುಬಾರಿಯಾಗಿದ್ದಾರೆ. ಸ್ಪಿನ್ನರ್‌ಗಳಾದ ವರುಣ್ ಮತ್ತು ನರೈನ್ ಹೆಚ್ಚಿನ ವಿಕೆಟ್‌ಗಳನ್ನು ಕಿತ್ತಿಲ್ಲ.

### ಪಂದ್ಯದ ವಿವರ

- ಯಾವಾಗ?: ಸೋಮವಾರ
- ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
- ಸಮಯ: ಸಂಜೆ 7:30
- ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್



**ಪಿಚ್:** ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲ ಸಿಕ್ಕಿದೆ. ಬ್ಯಾಟರ್‌ಗಳಿಗೆ ಉತ್ತಮ ಅವಕಾಶವಿದ್ದರೂ ದೊಡ್ಡ ಸ್ಕೋರ್ ಕಲೆ ಹಾಕಲಾಗಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವೂ ಇರಲಿದೆ.

# ಉದ್ದ ಜಿಗಿತ: ಮುರಳಿ, ಅಂಸಿ ಚಾಂಪಿಯನ್ಸ್

» ಭಾರತೀಯ ಅಥ್ಲೆಟಿಕ್ಸ್ ಸರಣಿಯಲ್ಲಿ ಕಮಾಲ್

• **ಹೊಸದಿಲ್ಲಿ:** ಭಾರತೀಯ ಅಥ್ಲೆಟಿಕ್ಸ್ ಸರಣಿ-1ರ ಉದ್ದ ಜಿಗಿತ ಸ್ಪರ್ಧೆಯಲ್ಲಿ ದೇಶಿ ಸ್ಟಾರ್‌ಗಳಾದ ಮುರಳಿ ಶ್ರೀಶಂಕರ ಮತ್ತು ಅಂಸಿ ಸೋಜನ್ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟಗಳನ್ನು ತಮ್ಮದಾಗಿಸಿಕೊಂಡರು. 2022ರ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಮುರಳಿ ಶ್ರೀಶಂಕರ ಉತ್ತಮ ಪ್ರದರ್ಶನ ನೀಡಿದರು. ಆರು ಪ್ರಯತ್ನಗಳಲ್ಲಿ ಐದು ಬಾರಿ ಎಂಟು ಮೀಟರ್ ಗಡಿ ದಾಟಿದರು. ಮೂರನೇ ಪ್ರಯತ್ನದಲ್ಲಿ 8.13 ಮೀಟರ್ ಜಿಗಿದು ಸ್ಪರ್ಧೆಯಲ್ಲಿ ಸ್ಪಷ್ಟ ಮುನ್ನಡೆ ಸಾಧಿಸಿದರು. ಬಿಹಾರದ ಸನ್ನಿ ಕುಮಾರ್ 7.90 ಮೀಟರ್ ಜಿಗಿದು ಎರಡನೇ ಸ್ಥಾನ ಪಡೆದರು.

**ಮಹಿಳೆಯರ ವಿಭಾಗ:** ಮಹಿಳಾ ವಿಭಾಗದಲ್ಲಿ ರಿಲಯನ್ಸ್ ತಂಡದ ಅಂಸಿ ಸೋಜನ್ ಸಂಪೂರ್ಣ ಪ್ರಾಬಲ್ಯ ತೋರಿದರು. ಮೊದಲ ಪ್ರಯತ್ನದಲ್ಲೇ 6.54 ಮೀಟರ್ ಜಿಗಿದು ಮುನ್ನಡೆ ಸಾಧಿಸಿದರು. ಆದರೆ 2025ರ ಏಷ್ಯನ್ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತೆ ಶೈಲಿ ಸಿಂಗ್ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಲಿಲ್ಲ. ಶೈಲಿ ಮೊದಲ ಪ್ರಯತ್ನದಲ್ಲಿ 6.52 ಮೀಟರ್ ಜಿಗಿದರೂ, ನಂತರದ ನಾಲ್ಕು ಪ್ರಯತ್ನಗಳಲ್ಲಿ ಫೌಲ್ ಮಾಡಿದರು. ಪಕ್ಕದಿಂದ ಕೋಚ್ ಅಂಜು ಬಾಬಿ ಜಾರ್ಜ್ ಸಲಹೆ ಹಾಗೂ ಪ್ರೋತ್ಸಾಹ ನೀಡಿದರೂ, ಕೊನೆಯ ಪ್ರಯತ್ನದಲ್ಲಿ ಸರಿಯಾದ ಟೇಕ್-ಆಫ್ ಸಾಧಿಸಲು ವಿಫಲರಾದ ಶೈಲಿ ಕೇವಲ 4.99 ಮೀಟರ್ ಮಾತ್ರ ಜಿಗಿದು ನಿರಾಶೆ ಮೂಡಿಸಿದರು.

# ರಾಜಸ್ಥಾನಕ್ಕೆ 6 ರನ್‌ಗಳ ರೋಚಕ ಗೆಲುವು

• **ಅಹಮದಾಬಾದ್:** ಕೊನೆಯ ಓವರ್‌ನಲ್ಲಿ ಮುಕ್ತಾಯಗೊಂಡ ರೋಮಾಂಚನಕಾರಿ ಪಂದ್ಯವನ್ನು ರಾಜಸ್ಥಾನ ರಾಯಲ್ಸ್ ತಂಡ 6 ರನ್‌ಗಳಿಂದ ಗೆಲುವುಸಾಧಿಸಿತು. ಅನಿರೀಕ್ಷಿತಪ್ರದರ್ಶನನೀಡಿದತುಷಾರ್ ದೇಶಪಾಂಡೆಕೊನೆಯ ಓವರ್‌ನಲ್ಲಿಗುಜರಾತ್ ತಂಡಕ್ಕೆಕಡಿವಾಣ ಹಾಕಿಗೆಲ್ಲಿಸಿದರು. ಪಂದ್ಯದಲ್ಲಿಮೊದಲು ಬ್ಯಾಟಿಂಗ್ ಮಾಡಿದ್ದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತ್ತು. ತಂಡದ ಪರ ಜೈಸ್ವಾಲ್ 55, ವೈಭವ್ 31 ಮತ್ತು ಜುರೇಲ್ 75 ರನ್‌ಗಳಿಸಿದ್ದರು. ರಬಾಡ 2 ವಿಕೆಟ್ ಕಿತ್ತಿದ್ದರು. ಗುರಿ ಬೆನ್ನತ್ತಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಿತು. ಸುದರ್ಶನ್ 73 ರನ್ ಗಳಿಸಿ ಹೋರಾಟ ನಡೆಸಿದರು. ರಬಾಡ ಹೋಪ್ ಉಳಿಸಿದ್ದಾದರೂ ಪಂದ್ಯವನ್ನು ಗೆಲ್ಲಿಸಲಾಗಲಿಲ್ಲ. ರವಿ ಬಿಷ್ಣೋಯ್ 4 ವಿಕೆಟ್ ಕಿತ್ತರು. ಜುರೇಲ್, ಸುದರ್ಶನ್ ತಮ್ಮ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಪಂದ್ಯದ ಕೇಂದ್ರಬಿಂದುವಾಗಿದ್ದರು. ರಾಜಸ್ಥಾನ ಪರ ರವಿ ಬಿಷ್ಣೋಯ್ 4 ವಿಕೆಟ್ ಕಿತ್ತು ಹೀರೋ ಅನ್ನಿಸಿಕೊಂಡರು. ಕೊನೆಯ 2 ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದ ದೇಶಪಾಂಡೆ ಹಾಗೂ ಆರ್ಚರ್ ಗೆಲುವಿನ ರೂವಾರಿ ಎನಿಸಿಕೊಂಡರು.

**ರೋಚಕ ಅಂತ್ಯ:** ಗುರಿ ಬೆನ್ನತ್ತುವಾಗ ಗುಜರಾತ್ ಸುದರ್ಶನ್ ಅವರ ಸ್ಫೋಟಕ ಬ್ಯಾಟಿಂಗ್ ಆಸರೆ ಪಡೆಯಿತು. ಆರಂಭದಿಂದಲೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯೊಂದಿಗೆ ಮಿಂಚಿದ ಅವರು, ಪಂದ್ಯವನ್ನು ತಂದುಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಹೆಚ್ಚಿನ ಕೊಡುಗೆ ಯಾರಿಂದಲೂ ಬರಲಿಲ್ಲ. ಸುದರ್ಶನ್ 73ಕ್ಕೆ ವಿಕೆಟ್ ಒಪ್ಪಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 30 ರನ್ ಬೇಕಿತ್ತು. ರಾಶಿದ್ ಖಾನ್ ಮತ್ತು ರಬಾಡ ಸ್ಫೋಟಕ ಸಿಕ್ಸರ್‌ಗಳೊಂದಿಗೆ ಪಂದ್ಯ ಹೊಳ್ಳಿಸಿದರು. 2 ಓವರ್‌ಗಳಲ್ಲಿ 15 ರನ್ ಬೇಕಿತ್ತು. ದಾಳಿಗಿಳಿದ ಆರ್ಚರ್ 4 ರನ್ ಮಾತ್ರ ನೀಡಿದರು. ಕೊನೆಯ ಓವರ್‌ನಲ್ಲಿ 11 ರನ್ ಬೇಕಿತ್ತು. ದೇಶಪಾಂಡೆ ಅಲ್ಲಿ ರಶೀದ್ ಖಾನ್ ವಿಕೆಟ್ ಪಡೆದಿದ್ದಲ್ಲದೆ 4 ರನ್ ಮಾತ್ರ ನೀಡಿ ಪಂದ್ಯ ಗೆಲ್ಲಿಸಿದರು.

### ಸಂಕ್ಷಿಪ್ತ ಸ್ಕೋರ್

- ರಾಜಸ್ಥಾನ 20 ಓವರ್‌ಗಳಲ್ಲಿ 210/6; ಜುರೇಲ್ 75, ಜೈಸ್ವಾಲ್ 55; ರಬಾಡ 42/2
- ಗುಜರಾತ್ 20 ಓವರ್‌ಗಳಲ್ಲಿ 204/8; ಸುದರ್ಶನ್ 73, ಬಟ್ಲರ್ 26; ಬಿಷ್ಣೋಯ್ 41/4



# ಪದಬಂಧ

» ರಾಜಾ ಸಂಗಮೇಶ ಹಿರೇಮಠ



**5945**

**5944 ಉತ್ತರ**

ಎಡದಿಂದ ಬಲಕ್ಕೆ:
1.ಮಲ್ಲಶರ 3.ಬಗಿಮೊಗ
5.ಪಟಕ 6.ಮಿಣುಕು
8.ವಿವರ್ಣ 10.ಆಶಯ
11.ಶಕಲ 15.ಮಾಧವ
16.ನವಧಾನ್ಯ
17.ಲೇಸುಗಾರ

ಮೇಲಿನಿಂದ ಕೆಳಕ್ಕೆ :
1.ಮರೋಗಾಮಿ 2.ರವಣ
3.ಬಕರಿ 4.ಗಜಕರ್ಣ
7.ಶರಣು 9.ವಣಿಕ
10.ಆಯುರ್ಮಾನ
12.ಶಸ್ತ್ರಾಗಾರ
13.ಸಾಮಾನ್ಯ 14.ಲೇವಡಿ

ಎಡದಿಂದ ಬಲಕ್ಕೆ
2.ನೀರಿನಲ್ಲಿ ಮುಳುಗದಂತೆ ಮಾಡು (3)
5.ಮಹಾಜನರು ಸಲ್ಲಿಸಿದ ಪಂಚನಾಮೆ (4)
6.ಶಾರೀರಿಕ ವ್ಯಾಯಾಮವಿಲ್ಲಿ ತಿರುಗಿದೆ (4)
7.ನಿರ್ದಿಷ್ಟ ಗಡಿಗಳೊಳಗಿನ ಭೂಭಾಗ (2)
8.ಚರ್ಮದ ಊದುಚೀಲವಿದು (2)
10.ಕಪಟಧ್ಯಾನಕ್ಕೆ ಹೆಸರಾದ ಪಕ್ಷಿ ತಿರುಗಿದೆ (2)
12.ಶಿವನನ್ನು ಪ್ರಾರ್ಥಿಸಿ ಪತಿಯನ್ನು ಪಡೆದವಳು (2)
13.ಹರನ ನಡುವೆ ಸೈನ್ಯದ ಅಧಿಕಾರಿಯಿದ್ದಾನೆ (4)
15.ಸ್ಥಿರವಾದ ಉದ್ದೇಶ-ಧ್ಯೇಯವಿದು (4)
16.ನೆನಪು ಮಾಡಿಕೊಳ್ಳುವಿಕೆ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಲೌಕಿಕ ವಿಷಯಗಳ ಬಂಧನ (4)
2.ದೇವರ ವಿಗ್ರಹವನ್ನಿಟ್ಟು ಎಳೆಯುವ ರಥ (2)
3.ತಿರುಗು-ಪ್ರದಕ್ಷಿಣೆ ಹಾಕು (2)
4.ಮೋತಿಯ ನಡುವೆ ವಂಚಕಿಯಿದ್ದಾಳೆ (4)
7.ತತ್ವೋಪದೇಶ ಮಾಡುವವನು (3)
9.ಈಶ ದಿಶೆಯ ಒಡೆಯ-ಇಂದ್ರ (3)
11.ವೈಜಯಂತಿಯ ಇನ್ನೊಂದು ಹೆಸರು (4)
12.ಆಸೆ-ಕ್ರಿಯೆಗೆ ಸಂಬಂಧಿಸಿದ ಸ್ವಭಾವವಿದು (4)
14.ದೇವತೆಯಲ್ಲಿ ತಲೆಕೆಳಗಾಗಿದ್ದಾನೆ (2)
15.ಹೂವು-ಹಣ್ಣುಗಳ ಗೊಂಚಲು (2)